# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-41 ಕ್ರೋಧಿ ನಾಮ ಸಂವತ್ಸರ, ಚೈತ್ರ - ವೈಶಾಖ ಮಾಸ, ಏಪ್ರಿಲ್ - 2024, ಸಂಚಿಕೆ-1, ಪುಟಗಳು-32 ಬೆಲೆ ರೂ.15/-

ಶ್ರೀರಾಮ ಜಯರಾಮ ಜಯಜಯರಾಮ




ರಾಮನವಮಿಯ ಸೂರ್ಯ ತಿಲಕ ರಾಮಲಲ್ಲಾ

## ಶಿವಮೊಗ್ಗ ತಾಲೂಕಿನ ಕೂಡ್ಲಿ ಶ್ರೀ ಕೂಡಲ ಶೃಂಗೇರಿ ಶ್ರೀ ಶಂಕರಾಚಾರ್ಯ ಪೀಠ

## ಶ್ರೀ ವಿದ್ಯಾಶಂಕರ ದೇವಾಲಯದ ನೂತನ ಗೋಪುರದ ಕಳಶಸ್ಥಾಪನಾ ಸಮಾರಂಭ









## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಲ್ಲಿ ನಡೆದ ಹಾಸ್ಯೋತ್ಸವ ಕಾರ್ಯಕ್ರಮ





**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ| ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ|| ಡಾ| ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಟಿ.ಎಲ್.ಎಸ್. ಕುಮಾರ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಅನಾರೋಗ್ಯಮ್ ಅನಾಯುಷ್ಯಮ್ ಅಸ್ವರ್ಗ್ಯಂ ಚಾತಿಭೋಜನಮ್ ।**
**ಅಪುಣ್ಯಂ ಲೋಕವಿದ್ವಿಷ್ಟಂ ತಸ್ಮಾತ್ ತತ್ ಪರಿವರ್ಜಯೇತ್ ॥**

ಭಾರತೀಯ ಸಂಸ್ಕೃತಿಯಲ್ಲಿ ಆಹಾರಕ್ಕೆ ಪೂಜ್ಯ ಸ್ಥಾನವಿದೆ. ಅನ್ನವನ್ನು ದೇವರೆಂದು ಭಾವಿಸಿ ಅದಕ್ಕೆ ನಮಸ್ಕರಿಸಿ ಊಟ ಮಾಡುತ್ತೇವೆ. ಅಗುಳು ಅನ್ನವನ್ನು ಚೆಲ್ಲುವುದು ಮಹಾ ಪಾಪವೆಂದು ನಂಬಿದ್ದೇವೆ. ಹಸಿದವರಿಗೆ ಅನ್ನ ನೀಡಿದರೆ ನಂತರ ಪರಿಹಾರವಾದ ಅವರ ಸಂಕಟ, ಅವರು ಪಡುವ ತೃಪ್ತಿ ನಮ್ಮ ಪುಣ್ಯದ ಖಾತೆಗೆ ಒಂದು ಸಾಲಾಗಿ ಸೇರುತ್ತದೆ ಎಂಬ ನಂಬಿಕೆ ನಮ್ಮ ಸಂಸ್ಕೃತಿಯದು. ಆಸೆಯಿಂದ ಬಡಿಸಿಕೊಂಡು ಹೊಟ್ಟೆಯಲ್ಲಿ ಜಾಗವಿಲ್ಲದೆ ಚೆಲ್ಲುವುದನ್ನು ನಿಗ್ರಹಿಸುವ ಮತ್ತು ಆರೋಗ್ಯವಂತ ಶರೀರವಾಗಿ ನಮ್ಮ ದೇಹ ಹೇಗಿರಬೇಕು ಎಂಬುದನ್ನು ಮೇಲಿನ ಶ್ಲೋಕ ಹೇಳುತ್ತದೆ. ಅತಿಯಾಗಿ ಆಹಾರ ತಿನ್ನುವುದು ಒಳ್ಳೆಯದಲ್ಲ. ಇದರಿಂದ ಆರೋಗ್ಯವು ಕೆಟ್ಟು ಹೋಗಿ ರೋಗಗಳು ಬರುತ್ತವೆ ಆಯುಷ್ಯವು ಕಮ್ಮಿಯಾಗುತ್ತದೆ. ಸದೃಢವಾದ ದೇಹವಿದ್ದರೆ ತನ್ನ ಕುಟುಂಬ ತನ್ನ ಸಮಾಜ ತನ್ನ ದೇಶದ ಉನ್ನತಿಗಾಗಿ ಶ್ರಮಿಸಬಹುದು. ಇಲ್ಲದಲ್ಲಿ ದೈವಾರಾಧನೆ, ಸೇವಾಕಾರ್ಯ ಮುಂತಾದ ಪುಣ್ಯಪ್ರದ ಕಾರ್ಯ ಮಾಡಲಾಗದೆ ಸ್ವರ್ಗ ಲೋಕ ಪ್ರಾಪ್ತಿಯೂ ಆಗುವುದಿಲ್ಲ. ಪುಣ್ಯವೂ ನಶಿಸಿ ಹೋಗುತ್ತದೆ. ನೋಡುವ ಜನರು ಇವನೇನು ಬಕಾಸುರನ ಎಂದು ಹಾಸ್ಯ ಮಾಡುತ್ತಾರೆ. ಅನ್ನವನ್ನು ಸಾರ್ವತ್ರಿಕ ಔಷಧ ಎಂದು ಕರೆಯುತ್ತಾರೆ. ಯಾರು ಅನ್ನವನ್ನು ಬ್ರಹ್ಮವೆಂದು ಪೂಜಿಸುತ್ತಾರೋ ಅವರಿಗೆ ಎಂದು ಅನ್ನದ ದಾರಿದ್ರ್ಯ ಬರುವುದಿಲ್ಲ. ಜೊತೆಗೆ **'ನಾನ್ನೋದಕಂ ಸಮಂ ದಾನಂ'** ಅಂದರೆ ಅನ್ನ ಮತ್ತು ನೀರಿನ ದಾನಕ್ಕೆ ಸಮಾನವಾದದ್ದು ಯಾವುದು ಇಲ್ಲ. ಕಾರಣ ಆಹಾರದಿಂದ ಪ್ರಾಣ ಉಳಿಯುತ್ತದೆ. ಹಾಗೆಯೇ ಯಾರು ತಮಗೋಸ್ಕರ ಅಡುಗೆ ಮಾಡಿಕೊಂಡು ತಾವೊಬ್ಬರೇ ಭುಂಜಿಸುತ್ತಾರೋ ಅದು ತಾವು ಮಾಡಿದ ಪಾಪವನ್ನು ತಾವೇ ತಿಂದಂತೆ. ಯಾರು ಸಜ್ಜನರಿಗೂ ಬಡಿಸಿ ತಾವು ಊಟ ಮಾಡುತ್ತಾರೋ ಅದು ಮಹಾ ಯಜ್ಞದ ಪ್ರಸಾದ ಸ್ವೀಕರಿಸುವುದಕ್ಕೆ ಸಮ ಎಂದು ಹಿರಿಯರು ಹೇಳುತ್ತಾರೆ.

ನಮ್ಮ ದೇಹ ಪೋಷಣೆಗೆ ಆಹಾರ ಪ್ರಮುಖಪಾತ್ರ ವಹಿಸುತ್ತದೆನಿಜ. ಆದರೆ ಅನೇಕರು ದೇಹಕ್ಕೆ ಎಷ್ಟು ಅಗತ್ಯ ಎಂಬುದರ ಬಗ್ಗೆ ಗಮನ ನೀಡುವುದಿಲ್ಲ. ಆಹಾರ ಮತ್ತು ಜೀವನ ಪೋಷಣೆಯ ಬಗ್ಗೆ ಗಮನ ಹರಿಸುವುದಿಲ್ಲ. ನಾಲಿಗೆ ರುಚಿಗೆ ಅಥವಾ ತ್ವರಿತ ತೃಪ್ತಿಗೆ ಆದ್ಯತೆ ನೀಡಿ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಹೊಟ್ಟೆಯ ಅರ್ಧ ಭಾಗ ಆಹಾರ ಸೇವಿಸಿ ಕಾಲುಭಾಗ ನೀರು ಉಳಿದ ಕಾಲು ಭಾಗ ಗಾಳಿ ಸಂಚಾರಕ್ಕೆ ಖಾಲಿಯಾಗಿಯೇ ಬಿಡಬೇಕು.ಇದು ಆಯುರ್ವೇದದ ಆಹಾರ ನೀತಿ.ಹೀಗೆ ಆರೋಗ್ಯಕರ ಆಹಾರವನ್ನು ಹಿತಮಿತವಾಗಿ ಸೇವಿಸುವ ಕ್ರಮವನ್ನು ಪಾಲಿಸುವುದು ಶ್ರೇಯಸ್ಕರ.

– **ಛಾಯಾಪತಿ ಕೆ.ಎನ್. ,** ಮಹಾಸಭಾ. ಉಪಾಧ್ಯಕ್ಷರು

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**– ಸಂಪಾದಕ ಮಂಡಳಿ**

# ಯುಗಾದಿ ಹಬ್ಬ ಹಾಗೂ ಚೈತ್ರ ವೈಶಾಖ ಮಾಸದ ವಿಶೇಷತೆ



**'ಯುಗ ಯಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ'** ಎಂಬುದು ಕವಿ ವಾಣಿ. ಯುಗಾದಿ ಎಂದರೆ ಯುಗದ ಆದಿ. ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ಚಾಂದ್ರಮಾನದ ಪ್ರಕಾರ ಚೈತ್ರ ಶುದ್ಧ ಪ್ರತಿಪತ್ ಅಥವಾ ಪಾಡ್ಯಮಿಯಂದು ಸೂರ್ಯೋದಯದ ಕಾಲದಲ್ಲಿ ಬ್ರಹ್ಮನು ಜಗತ್ತನ್ನು ಸೃಷ್ಟಿಸಿ ಕಾಲಗಣನೆಯನ್ನು ಆರಂಭಿಸಿದನು, ಇದು ಸತ್ಯ ಯುಗದ ಆರಂಭ ಎಂದು ಬ್ರಹ್ಮಪುರಾಣದಿಂದ ತಿಳಿದು ಬರುತ್ತದೆ. 60 ವರ್ಷಗಳ ಸಂವತ್ಸರ ಚಕ್ರದಲ್ಲಿ ಇಂದು ಹೊಸ ಸಂವತ್ಸರದ ಆರಂಭವಾಗುತ್ತದೆ. ಉತ್ತರ ಭಾರತದಲ್ಲಿ ಈ ಹಬ್ಬವನ್ನು ಸಂವತ್ಸರ ಪ್ರತಿಪದೆ ಎಂದು ಕರೆಯುತ್ತಾರೆ. ದಕ್ಷಿಣಾ ಪಥದಲ್ಲಿ ಬಹುಶಃ ಶಾತವಾಹನ ರಾಜನಾದ ಗೌತಮಿಪುತ್ರ ಶಾತಕರ್ಣಿ ಅಥವಾ ಶಾಲೀವಾಹನನು ಆರಂಭಿಸಿದ ಶಾಲೀವಾಹನ ಶಕೆಯು ಇದೇ ಚೈತ್ರಮಾಸ ಶುದ್ಧ ಪಾಡ್ಯಮಿ ಅಥವಾ ಪ್ರತಿಪದೆಯಿಂದ ಆರಂಭವಾಗುತ್ತದೆ. ಸೌರಮಾನವನ್ನು ಅನುಸರಿಸುವ ತಮಿಳುನಾಡು ಮೊದಲಾದ ಕಡೆಗಳಲ್ಲಿ ಇದನ್ನು ಚಿತ್ರವಿಷು ಎಂದು ಕರೆಯುತ್ತಾರೆ. ಸೌರಮಾನದ ಲೆಕ್ಕದಂತೆ ಇದು ಚೈತ್ರಮಾಸದ ವಿಷು ಸಂಕ್ರಮಣದ ದಿವಸ ಬರುತ್ತದೆ. ಹೀಗಾಗಿ ಸೌರಮಾನ ಯುಗಾದಿಯು, ಚಾಂದ್ರಮಾನ ಯುಗಾದಿಯ ಮೂರು ದಿನಗಳ ನಂತರ ಆಚರಿಸಲ್ಪಡುತ್ತದೆ. ಆದರೆ ದಕ್ಷಿಣ ಭಾರತದಲ್ಲಿ ಬಹುತೇಕವಾಗಿ ಚಾಂದ್ರಮಾನದ ಪ್ರಕಾರ ಯುಗಾದಿ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸಿಕೊಂಡು ಬರಲಾಗುತ್ತಿದೆ.

ಉತ್ತರ ಭಾರತದಲ್ಲಿ ಆಚರಿಸಲ್ಪಡುವ ವಸಂತ ನವರಾತ್ರಿಯ ದುರ್ಗಾ ಪೂಜೆಯು ಇಂದಿನಿಂದ ಆರಂಭವಾಗುತ್ತದೆ. ಯುಗಾದಿ ಹಬ್ಬದ ಆಚರಣೆಯು ಈ ಕೆಳಕಂಡಂತೆ ನಡೆಯುತ್ತದೆ. ಮುಂಜಾನೆ ಎದ್ದು ಅಭ್ಯಂಗ ಸ್ನಾನ, ತಳಿರು ತೋರಣಗಳಿಂದ ಮನೆಯನ್ನು ಅಲಂಕರಿಸುವುದು, ಮನೆದೇವರು ಹಾಗೂ ಪಂಚಾಂಗದ ಪೂಜೆ, ಬೇವು-ಬೆಲ್ಲದ ಮಿಶ್ರಣವನ್ನು ತಿನ್ನುವುದು, ಹೋಳಿಗೆ ಅಥವಾ ಒಬ್ಬಟ್ಟು ಹಾಗೂ ಬಗೆಬಗೆಯ ಭಕ್ಷ್ಯ ಭೋಜ್ಯಗಳನ್ನು ಮಾಡಿಕೊಂಡು ಎಲ್ಲರೂ ಒಟ್ಟಿಗೆ ಕುಳಿತು ಭೋಜನ ಮಾಡುವುದು, ಹೊಸ ಬಟ್ಟೆಗಳನ್ನು ಧರಿಸುವುದು, ಸಂಜೆ ಜೋಯಿಸರಿಂದ ಪಂಚಾಂಗವನ್ನು ಓದಿಸಿ ಪಂಚಾಂಗ ಶ್ರವಣ ಮಾಡಿ, ವರ್ಷದ ಫಲಾಫಲಗಳನ್ನು ತಿಳಿದುಕೊಂಡು ಅವರಿಗೆ ಸಂಭಾವನೆಯನ್ನು ನೀಡುವುದು, ಈ ಆಚರಣೆಗಳ ಮೂಲಕ ಸಾಂಪ್ರದಾಯಿಕವಾಗಿ ನಡೆದುಕೊಂಡು ಬರುತ್ತಿದೆ. ಎಳ್ಳೆಣ್ಣೆಯ ಅಭ್ಯಂಜನವನ್ನು ನಿರ್ಣಯಸಿಂಧುವಿನಲ್ಲಿ ಹೇಳಿದೆ. ಈ ದಿನ ದೇವಪೂಜೆಯ ಆರಂಭದಲ್ಲಿ ಬ್ರಹ್ಮದೇವರ ಪೂಜೆಯನ್ನು ಮಾಡಬೇಕೆಂದು ಅಗ್ನಿಪುರಾಣದಲ್ಲಿ ಹೇಳಿದೆ. ಯುಗಾದಿಯ ದಿನ ನಾರಾಯಣನು ತನ್ನ ಮೊಟ್ಟಮೊದಲನೆಯ ಅವತಾರವಾದ ಮತ್ಸ್ಯಾವತಾರವನ್ನು ತಾಳಿದ ದಿನ. ಶ್ರೀರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಹಿಂದಿರುಗಿದ ದಿನ ಎಂದು ತಿಳಿದು ಬರುತ್ತದೆ. ಅಂದಿನಿಂದಲೇ ರಾಮರಾಜ್ಯವೂ ಆರಂಭವಾಯಿತು.

ನಮ್ಮ ರಾಜ್ಯದ ಎಲ್ಲ ದೇವಾಲಯಗಳಲ್ಲಿ ಚೈತ್ರ, ಪವಿತ್ರ ಎಂಬ ಎರಡು ಹಬ್ಬಗಳನ್ನು ಆಚರಿಸಿಕೊಂಡು ಬರಲಾಗುತ್ತಿತ್ತೆಂದು ರಾಜ್ಯದಲ್ಲಿರುವ ಸಾವಿರಾರು ಕನ್ನಡ ಶಾಸನಗಳಿಂದ ತಿಳಿದು ಬರುತ್ತದೆ. ಚೈತ್ರವೆಂದರೆ, ಚೈತ್ರ ಮಾಸದ ಯುಗಾದಿ ಹಬ್ಬ. ಪವಿತ್ರ ಎಂದರೆ ಉಪಾಕರ್ಮ. ಈ ಎರಡೂ ಹಬ್ಬಗಳ ಆಚರಣೆಗೆ ರಾಜಮಹಾರಾಜರು ಅನೇಕ ದತ್ತಿಗಳನ್ನು ಬಿಟ್ಟಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

ಚೈತ್ರ ಮತ್ತು ವೈಶಾಖ ಮಾಸಗಳಲ್ಲಿ ವಸಂತ ಋತುವಿರುತ್ತದೆ. ವಸಂತ ಋತುವನ್ನು ಋತುಗಳ ರಾಜ ಎನ್ನುತ್ತಾರೆ. ಸಂಸ್ಕೃತ ಹಾಗೂ ದೇಶಭಾಷೆಯ ಎಲ್ಲ ಕವಿಗಳೂ ವಸಂತಮಾಸದ ವರ್ಣನೆಗೆ ಮಹತ್ವ ನೀಡುತ್ತಾರೆ. ನಮ್ಮ ರಾಷ್ಟ್ರದಲ್ಲಿ ಚೈತ್ರಮಾಸದಲ್ಲಿ ಎಲ್ಲೆಲ್ಲೂ ಮಧುಮಹೋತ್ಸವ ನಡೆಯುತ್ತಿತ್ತೆಂದು ಆದಿ ಕವಿ ಪಂಪನೂ ಸೇರಿದಂತೆ ಅನೇಕ ಕವಿಗಳು ಹೇಳಿದ್ದಾರೆ. ಬಹುಶಃ ಇದೇ ಯುಗಾದಿಯ ಆಚರಣೆ ಇರಬಹುದು. ಗಿಡಮರಬಳ್ಳಿಗಳು ತಮ್ಮ ಜೀರ್ಣವಾದ ಎಲೆಗಳನ್ನು ಉದುರಿಸಿಕೊಂಡು ಹೊಸ ಚಿಗುರನ್ನು ಹೊತ್ತು ಸೊಬಗಿನಿಂದ ಕಂಗೊಳಿಸುತ್ತವೆ. ಅಂತೆಯೇ ಮಾನವರೂ ಕೂಡಾ ತಮ್ಮ ಹಳೆಯ ದ್ವೇಷ, ಅಸೂಯೆ, ಕೋಪ-ತಾಪಗಳನ್ನು ಬಿಟ್ಟು ಶುಭಸಂಕಲ್ಪವನ್ನು ಮಾಡಿ ಶುಭ ಮಾರ್ಗದಲ್ಲಿ ಮುನ್ನಡೆಯಲು ಶುಭ ಸಂಕಲ್ಪ ಮಾಡಬೇಕೆಂಬುದೇ ಯುಗಾದಿ ಆಚರಣೆಯ ಅರ್ಥ.

ನಮ್ಮ ದೇಶದಲ್ಲಂತೂ ಚೈತ್ರ-ವೈಶಾಖ ಮಾಸಗಳನ್ನೊಳಗೊಂಡ ವಸಂತಋತುವು ಮಹಾಮಹಿಮರಿಗೆ ಜನ್ಮ ನೀಡಿದ, ಮಹತ್ತರ ಮನ್ವಂತರಕ್ಕೆ ಕಾರಣವಾದ ಮಾಸಗಳಾಗಿವೆ. ವಸಂತಮಾಸವು ಚೈತ್ರಶುದ್ಧ ಪ್ರತಿಪದೆ ಅಂದರೆ ಯುಗಾದಿಯ ದಿನ ಆರಂಭವಾಗುತ್ತದೆ. ನರಸಿಂಹ, ಪರಶುರಾಮ, ಶ್ರೀರಾಮ, ಹನುಮ, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ವಿದ್ಯಾರಣ್ಯರು, ಗೌತಮ ಬುದ್ಧ, ಮಹಾವೀರ, ಬಸವಣ್ಣನವರೇ ಆದಿಯಾಗಿ ಮಹಾಮಹಿಮರ ಜಯಂತಿಗಳು ಚೈತ್ರ-ವೈಶಾಖ ಮಾಸದ ವಸಂತಋತುವಿನಲ್ಲೇ ಬರುವುದು, ಹೊಸ ಯುಗಕ್ಕೆ, ಹೊಸ ಮನ್ವಂತರಕ್ಕೆ ನಾಂದಿಯಾಗುವುದು ವಿಶೇಷವಾಗಿದೆ. ಚೈತ್ರ-ವೈಶಾಖ ಮಾಸದಲ್ಲಿ ನಮ್ಮ ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ಕಡೆ ದೇವರ ರಥೋತ್ಸವ ಜಾತ್ರೆಗಳು ನಡೆಯುತ್ತವೆ. ಈಗ ಬದಲಾದ ಋತುಮಾನದಲ್ಲಿ ಚೈತ್ರ-ವೈಶಾಖದಲ್ಲಿ ಮಳೆ ಕಡಿಮೆಯಾಗಿ ಉಷ್ಣತೆ ಹೆಚ್ಚುತ್ತಿದೆ. ಆದರೆ ಪ್ರಾಚೀನ ಕಾಲದಲ್ಲಿ ಸಮಶೀತೋಷ್ಣವಾದ ಹಿತಕರ ವಾತಾವರಣ ಇರುತ್ತಿತ್ತು. ಯುಗಾದಿ ಹಾಗೂ ನಂತರ ಬರುವ ಪರ್ವಗಳು ದೇವತಾರಾಧನೆಗೆ ಪ್ರಶಸ್ತವಾದ ಉತ್ತರಾಯಣದಲ್ಲೇ ಬರುವುದು ವಿಶೇಷವಾಗಿದೆ.

**– ಸಂತೇಬಾಚಹಳ್ಳಿ ಡಾ. ಎಸ್. ನಂಜುಂಡಸ್ವಾಮಿ**

# ಅಧ್ಯಕ್ಷರ ನುಡಿ



**ಎಲ್ಲಾ ವಿಪ್ರ ಬಾಂಧವರಿಗೆ ಕ್ರೋಧಿ ನಾಮ ಸಂವತ್ಸರದ ಶುಭಾಶಯಗಳು.**

'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತದೆ' ಎನ್ನುವಂತೆ ಮತ್ತೊಮ್ಮೆ ಹೊಸ ವರ್ಷದಲ್ಲಿ ನಮ್ಮ ಜೀವನ ಪಥವನ್ನು ಕಾಣುವ ಸುಯೋಗ ನಮ್ಮೆಲ್ಲರದು. ಹೊಸ ವರ್ಷದ ಜೊತೆಗೆ ಹೊಸ ಚಿಂತನೆಗಳಿಗೆ ಅವಕಾಶ. ಜೀವನದಲ್ಲಿ ಮಾಡಿದ ಸಾಧನೆಗಳು, ಇನ್ನೂ ಸವೆಸಬೇಕಾಗಿರುವ ದಾರಿಯ ಬಗ್ಗೆ ಅವಲೋಕಿಸುವ ಅವಕಾಶ. ಇದರೊಡನೆ ರಾಷ್ಟ್ರ ಚಿಂತನೆಯು ಮಾಡುವ ಸಮಯ ಕೂಡಿಬಂದಿದೆ. ರಾಷ್ಟ್ರದ ಹಿತ ದೃಷ್ಟಿಯಲ್ಲಿ ಯಾರು ದೇಶವನ್ನು ಮುನ್ನಡೆಸಬೇಕಾಗಿರುವುದು ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ದೇಶ ಮತ್ತು ಸಂಸ್ಕೃತಿ ಎರಡು ಸಹ ಒಂದಕ್ಕೊಂದು ಪೋಣಿಸಿದ ಹಾಗಿದೆ.

ಸನಾತನ ಧರ್ಮ ಒಂದು ಜೀವನ ಪಥದ ಮಾರ್ಗದರ್ಶನಕ್ಕೆ ದಾರಿದೀಪ. ಸನಾತನ ಧರ್ಮವನ್ನು ಯಾರು ಕಡೆಗಣಿಸುತ್ತಾರೋ ಯಾರು ಅಗೌರವದಿಂದ ನೋಡುತ್ತಾರೋ ಅಂತವರನ್ನು ಮೂಲೆಗುಂಪು ಮಾಡುವ ಅವಶ್ಯಕತೆ ಇದೆ. ಈ ಚುನಾವಣೆ ನಮ್ಮ ಅಭಿಪ್ರಾಯವನ್ನು ಮಂಡಿಸುವುದಕ್ಕೆ ಸೂಕ್ತಸಮಯ ಎಂದರೆ ತಪ್ಪಿಲ್ಲ. ಆದ್ದರಿಂದ ಎಲ್ಲ ವಿಪ್ರಬಾಂಧವರು ಈ ಚುನಾವಣೆಯ ಹಬ್ಬದಲ್ಲಿ ಸಂಭ್ರಮದಿಂದ ಪಾಲುಗೊಳ್ಳುವ ಅವಶ್ಯಕತೆ ಇದೆ.

ಮಹಾಸಭೆಯ ಮಹಿಳಾ ಸಮಾವೇಶದ ನಂತರ ರಾಜ್ಯದ ಅನೇಕ ಭಾಗಗಳಲ್ಲಿ ವಿಪ್ರ ಮಹಿಳೆಯರು ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಅತ್ಯಂತ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದಾರೆ. ಯುಗಾದಿಯ ಮಾರನೇ ದಿನ ಎಂದಿನಂತೆ ನಡೆಸಿಕೊಂಡು ಬಂದಿರುವ ಹಾಸ್ಯೋತ್ಸವದ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಮಹಾಸಭೆಯ ಮೊದಲನೇ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಮಾಸ್ಟರ್ ಹಿರಣ್ಣಯ್ಯನವರ ಸ್ಮರಣಾರ್ಥ ನಡೆಸಿದ ಹಾಸ್ಯೋತ್ಸವದ ಕಾರ್ಯಕ್ರಮದಲ್ಲಿ ಎಂ.ಎಸ್. ನರಸಿಂಹಮೂರ್ತಿ ಅವರಿಗೆ **'ಹಾಸ್ಯ ಸಾಹಿತ್ಯ ವಿಭೂಷಣ'** ಎಂಬ ಪ್ರಶಸ್ತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಸುಧಾ ಬರಗೂರು, ಶ್ರೀ ವೈ.ವಿ. ಗುಂಡೂರಾವ್, ಶ್ರೀ ಅಚ್ಯುತರಾವ್ ಪದಕಿ ಇವರುಗಳು ತಮ್ಮ ಹಾಸ್ಯದ ಮಾತುಗಳಿಂದ ಜನರನ್ನು ರಂಜಿಸಿದರು. ಶ್ರೀ ರಾಮನಾಥ್ ಅವರು ಕಾರ್ಯಕ್ರಮದ ನಿರೂಪಣೆಯ ಜೊತೆಗೆ ಹಾಸ್ಯದ ಹೊನಲನ್ನು ಹರಿಸಿದರು.

ವಿಪ್ರ ಸಮುದಾಯದಿಂದ ಕರ್ನಾಟಕದಲ್ಲಿ ಮೂವರು ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದಾರೆ.

ಶ್ರೀ ವಿಶ್ವೇಶ್ವರ ಕಾಗೇರಿ, ಶ್ರೀ ಪ್ರಹ್ಲಾದ್ ಜೋಶಿ ಹಾಗು ಶ್ರೀ ತೇಜಸ್ವಿ ಸೂರ್ಯ. ಈ ಮೂವರು ವ್ಯಕ್ತಿಗಳು ಅತ್ಯಂತ ಅರ್ಹ ವ್ಯಕ್ತಿಗಳು ಮತ್ತು ಸಾರ್ವಜನಿಕ ಜೀವನದಲ್ಲಿ ಒಳ್ಳೆಯ ಹೆಸರನ್ನು ಪಡೆದಿರುವಂಥವರು. ಈ ಮೂರು ಸ್ಪರ್ಧಿಗಳು ಚುನಾವಣೆಯಲ್ಲಿ ಯಶಸ್ಸನ್ನು ಗಳಿಸುವುದರಲ್ಲಿ ಯಾವುದೇ ಸಂದೇಹವಿಲ್ಲ ಅನೇಕ ಕ್ಷೇತ್ರಗಳಲ್ಲಿ ವಿಪ್ರ ಸಮುದಾಯದವರೇ ವಿನಾಕಾರಣ. ಸಮುದಾಯದ ವ್ಯಕ್ತಿಗಳನ್ನು ವಿರೋಧಿಸುವುದು ಕಂಡುಬಂದಿದೆ. ಈ ರೀತಿಯ ವರ್ತನೆಗಳು ಸಮುದಾಯಕ್ಕೆ ಮಾರಕವಾಗಿ ಪರಿಣಮಿಸುವ ಸನ್ನಿವೇಶ ಉಂಟಾಗುತ್ತದೆ. ಒಮ್ಮೆ ವಿಪ್ರ ಸಮುದಾಯದ ವ್ಯಕ್ತಿ ಸೋಲನ್ನು ಅನುಭವಿಸಿದರೆ ಮುಂದಿನ ದಿನಗಳಲ್ಲಿ ಆ ಕ್ಷೇತ್ರದಲ್ಲಿ ವಿಪ್ರ ಸಮುದಾಯದವರೆಗೆ ಅವಕಾಶವೇ ಇಲ್ಲದಂತೆ ಉಂಟಾಗುತ್ತದೆ.

ಆದಕಾರಣ ಯಾವುದೇ ವೈಯಕ್ತಿಕ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಬದಿಗೊತ್ತಿ ದೇಶದ ಹಿತ ದೃಷ್ಟಿಯಿಂದ ಮತ ಚಲಾಯಿಸುವುದು ಅತ್ಯಂತ ಆವಶ್ಯಕ, ಆದ್ದರಿಂದ ತಾವೆಲ್ಲರೂ ಈ ಪ್ರಜಾಪ್ರಭುತ್ವದ ಹಬ್ಬದಲ್ಲಿ ತಪ್ಪದೆ ಪಾಲ್ಗೊಂಡು ನಿಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿಷಯಗಳೊಂದಿಗೆ ಮತ್ತೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ 2047ಕ್ಕೆ ನಮ್ಮ ದೇಶ ಸ್ವಾತಂತ್ರ್ಯ ಪಡೆದು ನೂರು ವರ್ಷವಾಗುತ್ತದೆ. ಆ ಸಮಯದಲ್ಲಿ ಸ್ವಾತಂತ್ರ್ಯ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚಾರಿಸಲು ನಮ್ಮ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದೀಜಿಯವರು ಕರೆ ನೀಡಿ 'ವಿಕಸಿತ ಭಾರತ – 2047, 2047–ಅಮೃತ ಕಾಲ ಘೋಷಿಸಿದ್ದಾರೆ. ವಿಕಸಿತ ಭಾರತ ಹೇಗಿರಬೇಕು ಎಂಬ ವಿಷಯದ ಬಗ್ಗೆ ಪರಿಣಿತರೊಂದಿಗೆ ಚರ್ಚಿಸಿ ದೇಶಾದ್ಯಂತ ಮಾಹಿತಿ ನೀಡಿದ್ದಾರೆ. ಆ ಸಮಯದಲ್ಲಿ ನಮ್ಮ ದೇಶದ ಜನಸಂಖ್ಯೆಯಲ್ಲಿ 50% ಯುವಜನತೆ, ಮಧ್ಯವಯಸ್ಕರಿರುವರು ಎಂದು ಜನಸಂಖ್ಯಾತಜ್ಞರು ಊಹಿಸಿದ್ದಾರೆ. ಆ ಉತ್ಸವವನ್ನು ಆಚರಿಸಲು ನಾವು ಹೇಗೆ ಸಮರೋಪಾದಿಯಲ್ಲಿ ತಯಾರಾಗಿರಬೇಕು ಎಂದು ಸೂಚಿಸಲಾಗಿದೆ. ಅದು ಬಹುಶಃ ಹೀಗಿರಬೇಕು ಎಂದು ದೇಶಭಕ್ತ ನಾಯಕರ ಆಸೆಯಾಗಿದೆ.

ಭಾರತವು ವೈವಿಧ್ಯತೆಗಳ ನಾಡು, ಚೈತನ್ಯ, ಆನ್ವೇಷಣೆಗಳ ಬೀಡು, ನಮ್ಮ ದೇಶವು 2047ರಲ್ಲಿ ವಿಕಸಿತವಾಗಲು ಪ್ರಜೆಗಳು ನಾಯಕರೆಲ್ಲರ ಆಶೋತ್ತರಗಳು ಅಭಿವೃದ್ಧಿ, ಸಾಧನೆಗಳನ್ನು ಸಾಕಾರಗೊಳಿಸಿ ವಿಶ್ವರಂಗದಲ್ಲಿ ಮೊದಲಸ್ಥಾನ ಪಡೆಯಲು ಸಿದ್ಧತೆ ಹೊಂದಬೇಕಾಗಿದೆ. ಈ ಅಭಿವೃದ್ಧಿಯು ರಕ್ಷಣೆ, ಸಾಮಾಜಿಕ ಮೂಲಭೂತ ಸೌಕರ್ಯ, ಶಕ್ತಿ ಉತ್ಪಾದನೆ, ಶಿಕ್ಷಣ, ಭದ್ರತೆ, ಸಾಮಾಜಿಕ ಕಲ್ಯಾಣ ಮತ್ತು ಆರ್ಥಿಕ ಪ್ರಗತಿಯನ್ನು ಹೊಂದಬೇಕಾಗುತ್ತದೆ. ದೇಶವನ್ನು ಸದಾ ಸುಭದ್ರವಾಗಿ ಇಡಲು, ಅತ್ಯಾಧುನಿಕ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ, ಸೈಬರ್ ಸಂಗ್ರಾಮ, ಆಕಾಶ ಸಂಗ್ರಾಮ ಮುಂತಾದ ಕೌಶಲಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಸೈನ್ಯ ರಕ್ಷಣೆ, ರಕ್ಷಣಾ ಸಾಮಗ್ರಿಗಳ ಉತ್ಪಾದನೆಗೆ ರಾಷ್ಟ್ರದ ಆಯ–ವ್ಯಯದಲ್ಲಿ ಅಧಿಕ ಹಣವನ್ನು ಮುಡಿಪಾಗಿರಿಸಬೇಕಾಗುತ್ತದೆ. ನಮ್ಮ ಧೋರಣೆ–ಧ್ಯೇಯಗಳಲ್ಲಿ ಬೆಂಬಲಿಸುವ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಂಡು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವುದು ಜೊತೆಗೆ ನಮ್ಮ ಶಸ್ತ್ರಾಸ್ತ್ರಗಳನ್ನು ರಫ್ತು ಮಾಡಿ ಆದಾಯ ಹೆಚ್ಚಿಸಿಕೊಳ್ಳಬೇಕಾಗುತ್ತದೆ.

ವಿಕಸಿತ ಭಾರತಕ್ಕೆ ವಿಶ್ವದರ್ಜೆಯ ಸಂಪರ್ಕ, ಗ್ರಾಮೀಣ–ನಾಗರ ಅಭಿವೃದ್ಧಿ, ಸ್ಮಾರ್ಟ್‌ನಗರಗಳು, ಆಧುನಿಕ ಪ್ರಯಾಣ–ರವಾನೆ ಸೌಕರ್ಯ ಆವಶ್ಯಕವಾಗಿದ್ದು ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ. ಶಕ್ತಿಯ ವಿವಿಧ ಆಯಾಮಗಳನ್ನು ವಿಶ್ಲೇಷಿಸಿ, ಪರ್ಯಾಯ ಇಂಧನ ವ್ಯವಸ್ಥೆಗಳಾದ ಅಣುಶಕ್ತಿ, ಸಮುದ್ರ ನೀರಿನಿಂದ ಶಕ್ತಿ, ಗಾಳಿ, ವಿದ್ಯುತ್ ಶಕ್ತಿಗಳನ್ನು ಆನ್ವೇಶಿಸಿ ಹೆಚ್ಚು ಉತ್ಪಾದಿಸಿ, ಕಾಪಿಡುವ ವ್ಯವಸ್ಥೆ ಜಾರಿಗೊಳಿಸಬೇಕಾಗಿದೆ. ಸಾಮಾನ್ಯ ಶಕೆ 2030 ಅಥವಾ 2040ರ ಹೊತ್ತಿಗೆ, ವಾಯು–ಪರಿಸರ ಮಾಲಿನ್ಯವನ್ನು ತಪ್ಪಿಸಲು ಕಚ್ಚಾತೈಲ ಮತ್ತು ಅದರ ಉತ್ಪನ್ನಗಳನ್ನು ತಗಾಸಿ, ಪರ್ಯಾಯ ಇಂಧನ ವ್ಯವಸ್ಥೆ ರೂಪಿಸಿ, ಮಾಲಿನ್ಯ ರಹಿತ ಭಾರತ 'ಹಸಿರು ಭಾರತ'ವನ್ನು ಕಲ್ಪಿಸಬೇಕಾಗಿದೆ.

ಈ ದಿಶೆಯಲ್ಲಿ ಪ್ರಾಥಮಿಕ ಸ್ತರದಿಂದ ಆರಂಭಿಸಿ ಉನ್ನತ ಶಿಕ್ಷಣದವರೆಗೆ 'ರಾಷ್ಟ್ರೀಯ ಶಿಕ್ಷಣ ನೀತಿ–2020' ನಕಾಶೆಯಡಿ ಆಮೂಲಗ್ರ ಬದಲಾವಣೆಯಾಗಬೇಕಾಗಿದೆ. ನಮ್ಮ ಯುವ ಜನಾಂಗ ವಿಕಸಿತ ಭಾರತದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಲು ಹಲವಾರು ಆವಿಷ್ಕಾರಗಳನ್ನು ಕೈಗೊಳ್ಳಬೇಕಾಗಿದೆ. ಅವುಗಳಲ್ಲಿ ಪ್ರಮುಖವಾದವು ಶೈಕ್ಷಣಿಕ ತತ್ವ ಸಿದ್ಧಾಂತಗಳಿಗಿಂತ ಪ್ರಾಯೋಗಿಕ ವಿಧಾನಗಳು, ಮೃದುಕೌಶಲ ತರಬೇತಿ ಪಡೆಯಬೇಕಾಗಿದೆ. ಎಲ್ಲರಿಗೂ ಸಮಾನ, ಮೌಲ್ಯಯುತ ಶಿಕ್ಷಣ ಜಾರಿಯಾಗಲು ಆಧುನಿಕ ತಂತ್ರಜಾನವುಳ್ಳ ಕಲಿಕಾ ವೇದಿಕೆ, ಸಂಪನ್ಮೂಲಗಳು, ಔದ್ಯೋಗೀಕರ ತರಬೇತಿ, ಶಿಕ್ಷಕ ತರಬೇತಿ, ಶಿಬಿರಗಳು, ಸೃಜನಶೀಲಕಾರ್ಯಗಳು ಸಾಮರ್ಥ್ಯ ಅಭಿವೃದ್ಧಿ ತರಬೇತಿ, ನೂತನ ಪಠ್ಯಕ್ರಮ ರಚನೆ ಮುಂತಾದ್ದನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಸಂಸ್ಕೃತ, ಭಾರತೀಯ ಜ್ಞಾನ ವ್ಯವಸ್ಥೆ ಕಲಿಕೆಗೆ ಒತ್ತು ನೀಡಲಾಗಿದೆ.

ಭಾರತೀಯ ಮತ್ತು ವಿಶ್ವ ಅರ್ಥಶಾಸ್ತ್ರಜ್ಞರು 2040–50ರ ಹೊತ್ತಿಗೆ ಭಾರತವು 30–35 ಟ್ರಿಲಿಯನ್ ಡಾಲರ್ ಹಣವುಳ್ಳ ಸುಭದ್ರ ಆರ್ಥಿಕ ದೇಶವಾಗಿ ರೂಪಗೊಳ್ಳಲಿದೆ ಎಂದು ಭಾವಿಸಿದ್ದಾರೆ. ಈ ಅಂಶವು ಸಾಕಾರಗೊಳ್ಳಲು ಎಲ್ಲ ಭಾರತೀಯ ಪ್ರಜೆಗಳ ಹೊಣೆಗಾರಿಕೆ ಇದೆ. ಈ ದಿಶೆಯಲ್ಲಿ ಬ್ರಾಹ್ಮಣ ಕುಟುಂಬಗಳ ಪಾತ್ರ ದೊಡ್ಡದಿದೆ. ಎಲ್ಲ ಪ್ರತಿಭಾವಂತ ಬ್ರಾಹ್ಮಣ ಯುವ ಜನಾಂಗ ಕೇವಲ ಐಟಿ, ಬಿಟಿ ಕ್ಷೇತ್ರಗಳಲ್ಲಿ ಕೆಲಸ ಮಾಡುವುದುರ ಜೊತೆಗೆ ತಮ್ಮ ಮಕ್ಕಳನ್ನು ಕೇಂದ್ರ ನಾಗರಿಕ ಸೇವಾ ಕ್ಷೇತ್ರವಾದ ಐಎಎಸ್, ಐಪಿಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ತೇರ್ಗಡೆಯಾಗಲು ಹುರಿದುಂಬಿಸಬೇಕು. ವಿಪ್ರ ಯುವ ಅಧಿಕಾರಿಗಳು ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಸೇರ್ಪಡೆ ಹೊಂದಿ ಪ್ರಾಮಾಣಿಕವಾಗಿ ಕೆಲಸಮಾಡಿದಾಗ ಮಾತ್ರ ದೇಶದ ಯೋಜನೆಗಳ ಕಾರ್ಯ ನೀತಿಗಳನ್ನು ಬದಲಾಯಿಸಲು ಸಾಧ್ಯ, ಕೇವಲ ಚಿಂತನೆ ಅಥವಾ ವಿಶ್ವಗುರು ಜಪದಿಂದ ಸಾಧ್ಯವಿಲ್ಲ. ಮಹಾಸಭೆಯು ಪ್ರತಿಭಾವಂತ ಯುವಕ – ಯುವತಿಯರನ್ನು ಗುರುತಿಸಿ ಈ ಕೇಂದ್ರ ನಾಗರಿಕ ಸೇವಾ ಪರೀಕ್ಷೆಗಳಿಗೆ ಉಚಿತವಾಗಿ ತರಬೇತಿ ನೀಡಿ ಅವರು ಜಯಶಾಲಿಯಾಗಲು ಪ್ರೇರೇಪಿಸಬೇಕಾಗಿದೆ. ಕೇಂದ್ರ ಸರ್ಕಾರದ ವಿಕಸಿತ ಭಾರತ 2047ರ ಕನಸು – ನನಸಾಗಲು ನಾವೆಲ್ಲರೂ ಶ್ರಮಿಸೋಣ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕರು

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ
## ಶ್ರೀ ಎಂ.ಎಸ್. ನರಸಿಂಹಮೂರ್ತಿ ಅವರಿಗೆ "ಹಾಸ್ಯ ಸಾಹಿತ್ಯ ವಿಭೂಷಣ" ಬಿರುದು





ಮಹಾಸಭಾದ ಪ್ರಪ್ರಥಮ ಅಧ್ಯಕ್ಷರಾದ ದಿ. ಮಾಸ್ಟರ್ ಹಿರಣ್ಣಯ್ಯ ಅವರ ಸ್ಮರಣಾರ್ಥ ಬೆಂಗಳೂರಿನ ಪತ್ತಿ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ನಡೆದ ಹಾಸ್ಯೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಹಾಸ್ಯ ಸಾಹಿತಿ ಶ್ರೀ ಎಂ ಎಸ್ ನರಸಿಂಹಮೂರ್ತಿ ಅವರಿಗೆ ಹಾಸ್ಯ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ "ಹಾಸ್ಯ ಸಾಹಿತ್ಯ ವಿಭೂಷಣ" ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು, ತದನಂತರ ಕರ್ನಾಟಕದ ಖ್ಯಾತ ಹಾಸ್ಯ ಸಾಹಿತಿಗಳಾದ ಶ್ರೀಮತಿ ಸುಧಾ ಬರಗೂರು, ಶ್ರೀ ಅಚ್ಯುತ ರಾವ್ ಪದಕಿ, ಶ್ರೀ ವೈ ವಿ ಗೊಂಡೂರಾವ್ ಹಾಗು ಶ್ರೀ ಎನ್. ರಮಾನಾಥ್ ಅವರಿಂದ ಹಾಸ್ಯೋತ್ಸವ ಕಾರ್ಯಕ್ರಮವು ಯಶಸ್ವಿಯಾಗಿ ಮೂಡಿ ಬಂದಿತು. ಈ ಸಂದರ್ಭದಲ್ಲಿ ಮಾಸ್ಟರ್ ಹಿರಣ್ಣಯ್ಯರವರ ಪುತ್ರರಾದ ಬಾಬು ಹಿರಣ್ಣಯ್ಯನವರು ಹಾಗು ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಅಸಗೋಡು ಜಯಸಿಂಹ ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಳೆದ ವರುಷ ಈ ಗೌರವ ಆ.ರಾ. ಮಿತ್ರವರಿಗೆ ಸಂದಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಕೊಪ್ಪಳ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ಘಟಕದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಮಹಿಳಾ ಘಟಕದ ವತಿಯಿಂದ ನಗರದಲ್ಲಿ ಶುಕ್ರವಾರ ಅಂತರರಾಷ್ಟ್ರೀಯ ಮಹಿಳಾ ದಿನದ ಕಾರ್ಯಕ್ರಮ ಜರುಗಿತು.

ಮಹಿಳೆ ಮತ್ತು ಶಿಕ್ಷಣ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದ ಸಂಪನ್ಮೂಲ ವ್ಯಕ್ತಿ ಗುರುರಾಜ ಪಾಟೀಲ ಹುಬ್ಬಳ್ಳಿ 'ಕೌಟುಂಬಿಕವಾಗಿ ದೊಡ್ಡ ಜವಾಬ್ದಾರಿ ನಿರ್ವಹಣೆ ಮಾಡುವ ಮಹಿಳೆ ತನ್ನ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ಆರೋಗ್ಯದಿಂದ ಇರುವುದೇ ಸಂತೋಷ, ಸಂಸಾರದಲ್ಲಿ ಜಂಜಾಟ, ಒತ್ತಡಗಳು ಇದ್ದೇ ಇರುತ್ತವೆ' ಎಂದರು.

'ಸಂಸಾರದ ನೊಗ ಹೊತ್ತ ಮಹಿಳೆ ಮೇಲೆ ಹಲವಾರು ಜವಾಬ್ದಾರಿಗಳು ಇವೆ. ಆದ್ದರಿಂದ ಮಹಿಳೆಗೆ ಉತ್ತಮ ಆರೋಗ್ಯ ಸಂಸ್ಕಾರ, ಸಂಸ್ಕೃತಿ ಮತ್ತು ಸಮಯ ಪಾಲನೆ ಅಗತ್ಯ' ಎಂದು ಸಲಹೆ ನೀಡಿದರು.

ಹೊಸಪೇಟೆಯ ಕಿರ್ಲೋಸ್ಕರ್ ಮಹಿಳಾ ಸಂಘದ ಅಧ್ಯಕ್ಷೆ ಕಮಲಾ ಗುಮಾಸ್ತೆ ಮಾತನಾಡಿ ನಿತ್ಯದ ಕಾರ್ಯಭಾರದ ನಡುವೆಯೂ ಅನೇಕ ಮಹಿಳೆಯರು ಸೇರಿಕೊಂಡು ಕಾರ್ಯಕ್ರಮ ಆಯೋಜನೆ ಮಾಡಿದ್ದು ಹೆಮ್ಮೆಯ ವಿಚಾರ. ಅನೇಕ ಜನ ಮಹಿಳೆಯರಿಗೆ ಮನೆಯಲ್ಲಿ ವೃದ್ಧರು, ಹಿರಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ಇರುತ್ತದೆ. ಅದೆಲ್ಲ ನಿರ್ವಹಣೆ ಮಾಡುವ ಮಹಿಳೆ ಶಕ್ತಿ ಅಸಾಮಾನ್ಯ ಎಂದರು.

ಬ್ರಾಹ್ಮಣ ಮಹಾಸಭಾದ ಮಹಿಳಾ ಘಟಕದ ಜಿಲ್ಲಾ ಸಂಚಾಲಕಿ ವೈಷ್ಣವಿ ಹುಲಗಿ ಅಧ್ಯಕ್ಷತೆ ವಹಿಸಿದ್ದರು.

ಮಹಾಸಭಾದ ಜಿಲ್ಲಾ ಸಂಚಾಲಕ ಹನುಮಂತರಾವ್ ದೇಶಪಾಂಡೆ, ಸಹ ಸಂಚಾಲಕಿ ಮಧುರಾ ಕರ್ಣಂ, ಕೊಪ್ಪಳ ತಾಲ್ಲೂಕು ಸಂಚಾಲಕಿ ಸೌಮ್ಯಾ ಗುಡಿ, ವೈದ್ಯೆ ರಾಧಾ ಕುಲಕರ್ಣಿ, ಸಾಹಿತಿ ಸ್ನೇಹಲತಾ ಜೋಶಿ, ಸಮಾಜದ ಮುಖಂಡರಾದ ಕೆ.ಜಿ. ಕುಲಕರ್ಣಿ, ವೇಣುಕೋಪಾಲಾಚಾರ್ ಜಹಗೀರದಾರ್, ಮಂಜುನಾಥ ಹಳ್ಳಿಕೇರಿ, ಗುರುರಾಜ ಜೋಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**

ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

# ಕೊಪ್ಪ ತಾಲ್ಲೂಕು ವಿಪ್ರ ಮಹಿಳಾ ವೇದಿಕೆ – ಪ್ರಥಮ ವಾರ್ಷಿಕ ಸಮಾರಂಭ



ತಾಯಿಯರು ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಡ್ಡಾಯವಾಗಿ ತಿಳಿಸಿಕೊಡಬೇಕು. ಮುಂದಿನ ಪೀಳಿಗೆಗೆ ನಮ್ಮ ಸಂಪ್ರದಾಯವನ್ನು ಹಸ್ತಾಂತರಿಸಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಚಾಲಕಿ ಡಾ. ಶುಭಮಂಗಳಾ ಸುನೀಲ್ ಹೇಳಿದರು.

ಗಾಯಿತ್ರಿ ಮಂದಿರದಲ್ಲಿ ತಾಲ್ಲೂಕು ವಿಪ್ರ ಮಹಿಳಾ ವೇದಿಕೆಯಿಂದ ಶನಿವಾರ ಹಮ್ಮಿಕೊಂಡಿದ್ದ ಪ್ರಥಮ ವಾರ್ಷಿಕ ಸಮಾರಂಭದಲ್ಲಿ ಮಾತನಾಡಿ, ಧರ್ಮ ರಕ್ಷಣೆ, ಸಂಸ್ಕೃತಿ ರಕ್ಷಣೆಯಲ್ಲಿ ಮಹಿಳೆಯರು ತೊಡಗಿಸಿಕೊಳ್ಳಬೇಕು. ಸಂಸಾರ ನಿಭಾಯಿಸುವ ಹೆಣ್ಣು, ಸಮಾಜವನ್ನು ನಿಭಾಯಿಸುವ ಶಕ್ತಿಯನ್ನೂ ಹೊಂದಿರುತ್ತಾಳೆ. ವಿಪ್ರ ಮಹಿಳೆಯರೂ ಶಕ್ತಿವಂತರು, ಬುದ್ಧಿವಂತರು. ಆದ್ದರಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು, ಸಂಘಟನೆಯನ್ನು ಇನ್ನಷ್ಟು ಗಟ್ಟಿ ಮಾಡಬೇಕು, ಮಕ್ಕಳನ್ನು ಸಂಘಟನೆಯ ಒಳಗೆ ಕರೆತಂದರೆ ಅವರಿಗೂ ಸಂಸ್ಕಾರ ನೀಡಲು ಸಾಧ್ಯ. ತಾಯಂದಿರು ಮಕ್ಕಳನ್ನು ಸೈನಿಕರನ್ನಾಗಿ ತಯಾರು ಮಾಡಬೇಕು ಎಂದು ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯದರ್ಶಿ ಬಿ.ಎಸ್.ರಾಘವೇಂದ್ರ ಭಟ್ ಮಾತನಾಡಿ, ವಿಪ್ರ ಸಂಘಗಳು ಸ್ವಾವಲಂಬನೆ, ಸಂಘಟನೆ, ಸಂಸ್ಕಾರ ಎಂಬ ತತ್ವದಲ್ಲಿ ಕೆಲಸ ಮಾಡುತ್ತಿದೆ ಎಂದರು. ಹಿಂದುತ್ವದ ಮೂಲ ಬೇರು ವೇದ. ವೇದವನ್ನು ಬ್ರಾಹ್ಮಣರು ಹಿಂದು ಸಮಾಜಕ್ಕೆ ನೀಡುತ್ತ ಬಂದಿದ್ದಾರೆ. ಬ್ರಾಹ್ಮಣ ಎಂದರೇ ಜಾತಿಯ ಸೂಚಕವಲ್ಲ ವರ್ಣ ಎಂದು ತಿಳಿಸಿದರು.

ಅಖಿಲ ಕರ್ನಾಟಕ ವಿಪ್ರ ಮಹಿಳಾ ವೇದಿಕೆ ಜಿಲ್ಲಾ ಸಂಚಾಲಕಿ ಶಾಂತಕುಮಾರಿ ಮಾತನಾಡಿ, ಸಂಘಗಳು ಸಮಾಜದಲ್ಲಿ ಕಷ್ಟದಲ್ಲಿರುವವರಿಗೆ ವೇದಿಕೆ ಕಲ್ಪಿಸಬೇಕು. ಇಂಥ ವಾರ್ಷಿಕೋತ್ಸವ ಜತೆಯಲ್ಲಿ ಬಡವರ ಮದುವೆಯನ್ನೂ ಮಾಡಬೇಕು ಇದರಿಂದ ಮಾದರಿಯಾಗಬಹುದು ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಡಾ. ಜಿ.ಎಸ್. ಮಹಾಬಲರಾವ್ ಮತನಾಡಿ, ದೇಶದ ಸಂಸ್ಕೃತಿ ಮತ್ತು ಸಂಪ್ರದಾಯ ವಿಶ್ವಮನ್ನಣೆ ಗಳಿಸಿದೆ. ನಮ್ಮ ಉಡುಗೆ–ತೊಡುಗೆಗೆ ಜಗತ್ತು ಗೌರವ ನೀಡುತ್ತದೆ. ಆದರೆ ಯುವಪೀಳಿಗೆ ಪಾಶ್ಚಾತ್ಯ ಸಂಸ್ಕೃತಿ ಕಡೆಗೆ ಮುಖ ಮಾಡುತ್ತಿದೆ. ಇಂಥ ವೇದಿಕೆಗಳು ಅದಕ್ಕೆ ಕಡಿವಾಣ ಹಾಕಿ ನಮ್ಮ ಪದ್ಧತಿಯನ್ನು ತಿಳಿಸಿ ಬೆಳೆಸಬೇಕು ಎಂದರು.

ಕೊಪ್ಪ ತಾಲ್ಲೂಕು ವಿಪ್ರ ಮಹಿಳಾ ವೇದಿಕೆ ಸಂಚಾಲಕಿ ಟಿ.ವಿ. ಶ್ರೀಮತಿ, ತಾಲ್ಲೂಕು ವಿಪ್ರ ಮಹಿಳಾ ವೇದಿಕೆ ಅಧ್ಯಕ್ಷೆ ಅನಿತಾ, ಕೆ.ವಿ. ವಿಜಯರಂಗ ಇತರರಿದ್ದರು.


ಕೊಪ್ಪ ತಾಲ್ಲೂಕು ವಿಪ್ರ ಮಹಿಳಾ ವೇದಿಕೆ ಪ್ರಥಮ ವಾರ್ಷಿಕ ಸಮಾರಂಭವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯದರ್ಶಿ ಬಿ.ಎಸ್. ರಾಗವೇಂದ್ರ ಭಟ್ ಉದ್ಘಾಟಿಸಿದರು, ಕೆಸಕುಡಿಗೆ ಕೃಷ್ಣಮೂರ್ತಿ, ಡಾ.ಜಿ.ಎಸ್. ಮಹಾಬಲರಾವ್ ಇತರರಿದ್ದರು.





## ಶಿವಮೊಗ್ಗ ತಾಲೂಕಿನ ಕೂಡ್ಲಿ ಗ್ರಾಮದ ಶ್ರೀ ಕೂಡಲಿ ಶೃಂಗೇರಿ ಶ್ರೀ ಶಂಕರಾಚಾರ್ಯ ಪೀಠ

# ಶ್ರೀ ವಿದ್ಯಾಶಂಕರ ದೇವಾಲಯದ ನೂತನ ಗೋಪುರದ ಕಳಶಸ್ಥಾಪನೆ



ಶ್ರೀ ವಿದ್ಯಾಶಂಕರ ದೇವಾಲಯದ ನೂತನ ಗೋಪುರದ ಕಳಶಸ್ಥಾಪನೆ ಹಾಗೂ ಪುನಃಪ್ರತಿಷ್ಠಾಪನೆಯ ಅಂಗವಾಗಿ ಕುಂಭಾಭಿಷೇಕವು ಮಹಾಸಂಸ್ಥಾನದ ಶ್ರೀ ಜಗದ್ಗುರುಗಳಾದ ಶ್ರೀ ಡಾ.ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳ ಅಮೃತಹಸ್ತದಿಂದ ಸಾಂಗವಾಗಿ ನೆರವೇರಿತು. ಶ್ರೀ ಶಂಕರಾನಂದ ಜೋಯಿಸರ ಆಧ್ವರ್ಯು ಹಾಗೂ ಸೇವೆಯ ಮೂಲಕ ಈ ಜೀರ್ಣೋದ್ಧಾರವು ಸಂಪನ್ನವಾಯಿತು.

ಶ್ರೀ ಮಠದ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಶ್ರದ್ಧಾಭಕ್ತಿಯಿಂದ ಪಾಲ್ಗೊಂಡರು.



# ಚಿತ್ಪಾವನ ಬ್ರಾಹ್ಮಣ ಸಂಘ ಮಂಗಳೂರು ವಾರ್ಷಿಕೋತ್ಸವ ಶ್ರೀಮತಿ ವಿದ್ಯಾ ಗೋರೆ ಅವರಿಗೆ ಸನ್ಮಾನ



ಶ್ರೀಮತಿ ವಿದ್ಯಾ ಚಂದ್ರಕಾಂತ ಗೋರೆ. ಕುದ್ಯಾಡಿ ಮನೆ. ಇವರು ಗ್ರಾಮೀಣ ಪ್ರದೇಶವಾದ ಸುಳ್ಕೇರಿಯಲ್ಲಿ ಹಾಲು ಉತ್ಪಾದಕರ ಮಹಿಳಾ ಸಂಘ ಸ್ಥಾಪನೆಯಲ್ಲಿ ಪ್ರಧಾನ ಪಾತ್ರ ವಹಿಸಿ ಅದರ ಸ್ಥಾಪಕ ಅಧ್ಯಕ್ಷರಾಗಿ ಸತತ ಎರಡನೇ ಅವಧಿಗೆ ಕೂಡ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ. ಕೇವಲ ಐವತ್ತು ಲೀಟರ್ ಸಂಗ್ರಹ ಇದ್ದ ಹಾಲಿನ ಸಂಘ ಇದೀಗ ಒಂದು ಸಾವಿರ ಲೀಟರ್ ಅಷ್ಟು ಸಾಮರ್ಥ್ಯ ಪಡೆದು ಲಾಭದಲ್ಲಿ ನಡೆಯುತ್ತಿರುವುದು ಸಂಘಗಳ ಇತಿಹಾಸದಲ್ಲೇ ಅತ್ಯುತ್ತಮ ಸಾಧನೆ. ಇದೀಗ ಸಂಘಕ್ಕೆ ಸ್ವಂತ ನಿವೇಶನ ಹಾಗೂ ನೂತನ ಪಾರಂಪರಿಕ ಶೈಲಿಯ ಕಟ್ಟಡ ಕೂಡ ಲೋಕಾರ್ಪಣೆ ಅವರ ಅವಧಿಯಲ್ಲಿ ನಡೆದಿದೆ. ನಮ್ಮ ಸಹಕಾರ ಸಂಘಗಳ ಇತಿಹಾಸದಲ್ಲಿ ಸ್ಥಾಪನೆ ಆದ ಕೇವಲ ಆರು ವರ್ಷಗಳಲ್ಲಿ ನಿವೇಶನ ಖರೀದಿಸಿ ಸ್ವಂತ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿರುವ ರಾಜ್ಯದ ಕೆಲವೇ ಸಂಘಗಳ ಸಾಲಿನಲ್ಲಿ ಸುಳ್ಕೇರಿ ಅಂತಹ ಗ್ರಾಮೀಣ ಸಂಘ ಕೂಡ ನಿಂತದ್ದು ವಿದ್ಯಾ ಗೋರೆ ಅವರ ಕಾರ್ಯಕ್ಷಮತೆಗೆ ಸಾಕ್ಷಿ. ಅಲ್ಲದೆ ಮಹಿಳಾ ಸ್ವಉದ್ಯೋಗದ ಸಂಘವನ್ನು ರಚಿಸಿ ಅನೇಕ ಮಹಿಳೆಯರಿಗೆ ಟೈಲರಿಂಗ್, ಗೃಹೋದ್ಯಮ ತರಬೇತಿ, ಮುಂತಾದುವನ್ನು ಒದಗಿಸಿ ತಮ್ಮ ಕಾಲಿನ ಮೇಲೆ ನಿಲ್ಲುವ ಛಾತಿಯನ್ನು ಮೂಡಿಸಿದ್ದಾರೆ. ಸುಳ್ಕೇರಿ ಶ್ರೀರಾಮ ಶಾಲೆಯ ವಿದ್ಯಾರ್ಥಿಗಳಿಗೆ ಭಗವದ್ಗೀತೆ, ನಿತ್ಯ ಶ್ಲೋಕ ಇತ್ಯಾದಿಗಳನ್ನು ಉಚಿತವಾಗಿ ಕಲಿಸಿ ಸಂಸ್ಕಾರಯುತ ವಿದ್ಯಾರ್ಥಿಗಳನ್ನಾಗಿ ಮಾಡುವ ಮಹತ್ತರ ಜವಾಬ್ದಾರಿ ಕೂಡ ನಿಭಾಯಿಸುತ್ತಿದ್ದಾರೆ.

ತಾವು ಕೂಡ ಒಂದು ಪ್ರತಿಷ್ಠಿತ ಗುತ್ತಿನ ಮನೆಯ ಹಿರಿಯ ಸೊಸೆ ಆಗಿ ಅಲ್ಲಿಯ ಎಲ್ಲ ದೇವರು, ದೈವಗಳ ಕಾರ್ಯಕ್ರಮಗಳ ಕಾರ್ಯಭಾರಗಳ, ಗೃಹಿಣಿಯ ನೆಲೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದಾರೆ. ಒಂದು ಹೆಣ್ಣು ಒಂದು ಗಂಡು ಮಕ್ಕಳ ಸುಂದರ ಸಂಸಾರ ಅವರದು.

# ಜಾವಗಲ್ ಶ್ರೀನಾಥ್‌ಗೆ ಮೈಸೂರು ವಿ.ವಿ. ಗೌರವ ಡಾಕ್ಟರೇಟ್ ಪ್ರದಾನ






ದಿನಾಂಕ 3–3–2024 ರಂದು, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವದಲ್ಲಿ ಕುಲಾಧಿಪತಿಗಳಾದ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹಲೋಟ್ ಅವರು, ಭಾರತ ದೇಶದ ಶ್ರೇಷ್ಠ ಕ್ರಿಕೆಟ್ ಪಟು ಜಾವಗಲ್ ಶ್ರೀನಾಥ್ ಅವರಿಗೆ ಮೈಸೂರು ವಿ.ವಿ. ವತಿಯಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರದಾನ ಮಾಡಿದರು. ಭಾರತದ ಕ್ರಿಕೆಟ್ ರಂಗಕ್ಕೆ ಜಾವಗಲ್ ಶ್ರೀನಾಥ್ ಅವರು ಸಲ್ಲಿಸಿರುವ ಅಮೋಘ ಸೇವೆಯನ್ನು ಗಮನಿಸಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಕಳೆದ ವರ್ಷ ನಡೆದ 103ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿತ್ತು. ಆದರೆ ಐ.ಸಿ.ಸಿ. ಮ್ಯಾಚ್ ರೆಫರಿಯಾಗಿರುವ ಅವರು ಕಳೆದ ವರ್ಷದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ನ್ನು ಸ್ವೀಕರಿಸಲು ಸಾಧ್ಯವಾಗಿರಲಿಲ್ಲವಾದ ಕಾರಣ ಅದನ್ನು ಈ ವರ್ಷದ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಯಿತು. ಜಾವಗಲ್ ಶ್ರೀನಾಥ್ ಅವರ ಜೊತೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ, ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷರು ಮಾಜಿ ಸಚಿವರೂ ಆದ ಎಂ.ಆರ್.ಸೀತಾರಾಮ್, ಮೈಸೂರಿನ ಯೋಗಾನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕರಾದ ಭಾಷ್ಯಂ ಸ್ವಾಮೀಜಿ ಅವರಿಗೂ ಕೂಡಾ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.

ಮೂಲತಃ ಅರಸೀಕೆರೆ ತಾಲ್ಲೂಕಿನ ಜಾವಗಲ್‌ನವರಾದ ಶ್ರೀನಾಥ್ ಅವರು ಹೊಯ್ಸಳ ಕರ್ನಾಟಕ ಸಮುದಾಯಕ್ಕೆ ಸೇರಿದವರು ಎಂಬುದು ಹೆಮ್ಮೆಯ ವಿಷಯ. ಅವರು ಮೈಸೂರಿನ ಮರಿಮಲ್ಲಪ್ಪ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ನಂತರ ಮೈಸೂರಿನ ಎಸ್.ಜೆ.ಸಿ.ಇ. ಕಾಲೇಜಿನಿಂದ ಬಿ.ಇ. ಪದವಿ ಪಡೆದು, ಬೆಂಗಳೂರಿಗೆ ಬಂದು ಕ್ಲಬ್ ಪಂದ್ಯಗಳ ಮೂಲಕ ಕ್ರಿಕೆಟ್ ರಂಗಕ್ಕೆ ಪದಾರ್ಪಣ ಮಾಡಿದರು. ಜಾವಗಲ್ ಶ್ರೀನಾಥ್ ಅವರು 1989ರಲ್ಲಿ ಕರ್ನಾಟಕದ ಕ್ರಿಕೆಟ್ ತಂಡದ ಪರವಾಗಿ ಹೈದರಾಬಾದ್ ವಿರುದ್ಧ ನಡೆದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಮೂಲಕ ಪ್ರಥಮ ದರ್ಜೆ ಕ್ರಿಕೆಟ್ ರಂಗವನ್ನು ಪ್ರವೇಶಿಸಿದರು. ಮಧ್ಯಮ ವೇಗದ ಬೌಲರ್ ಹಾಗೂ ಪಿಂಚ್‌ಹಿಟ್ಟರ್ ಆಗಿರುವ ಅವರು 67 ಟೆಸ್ಟ್ ಪಂದ್ಯಗಳಲ್ಲಿ 236 ವಿಕೆಟ್ ಪಡೆದು 1009 ರನ್‌ಗಳನ್ನು ಹೊಡೆದಿದ್ದಾರೆ. 229 ಏಕ ದಿನ ಕ್ರಿಕೆಟ್ ಪಂದ್ಯಗಳಲ್ಲಿ 315 ವಿಕೆಟ್‌ಗಳನ್ನು ಪಡೆದು 883 ರನ್ ಹೊಡೆದಿದ್ದರೆ, 147 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳಲ್ಲಿ 533 ವಿಕೆಟ್‌ಗಳನ್ನು ಪಡೆದು 2276ರನ್ ಹೊಡೆದಿದ್ದಾರೆ. ಐ.ಸಿ.ಸಿ. ಮ್ಯಾಚ್ ರೆಫರಿ ಆಗಿರುವ ಅವರು 65 ಟೆಸ್ಟ್, 261 ಏಕದಿನ ಪಂದ್ಯಗಳಲ್ಲಿ 208 ಟಿ.–20 ಪಂದ್ಯಗಳಲ್ಲಿ ಮ್ಯಾಚ್ ರೆಫರಿ ಆಗಿ ಕಾರ್ಯನಿರ್ವಹಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದಿರುವ ಕರ್ನಾಟಕದ ಕಣ್ಮಣಿ ಜಾವಗಲ್ ಶ್ರೀನಾಥ್ ಅವರಿಗೆ ಅಖಿಲ ಭಾರತ ಬ್ರಾಹ್ಮಣ ಮಹಾಸಭೆಯ ಪರವಾಗಿ, ವಿಪ್ರ ಸಮಾಜದ ಪರವಾಗಿ ಅಭಿನಂದನೆಗಳು.

## ಬಾಗೇಪಲ್ಲಿ ತಾಲೂಕು ಬ್ರಾಹ್ಮಣ ಸಭಾ

ಬಾಗೇಪಲ್ಲಿ ತಾಲೂಕು ಬ್ರಾಹ್ಮಣ ಸಭಾದಿಂದ ದಿನಾಂಕ 17.03.24 ಭಾನುವಾರ, ವೇದಮಾತೆ ಗಾಯತ್ರಿ ದೇವಿಯ 19ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವ ಹಾಗು ಪ್ರತಿಭಾನ್ವಿತ ವಿಪ್ರ ಸಾಧಕರಿಗೆ ಸನ್ಮಾನ ಅದ್ದೂರಿಯಾಗಿ ನೆರವೇರಿತು.

ತಾಲ್ಲೂಕು ಸಂಘದ ಅಧ್ಯಕ್ಷರಾದ ಮುನಿರಾಮಯ್ಯ, ಜಿಲ್ಲಾ ಸಭಾದ ಅಧ್ಯಕ್ಷರು ಉಪಸ್ಥಿತರಿದ್ದರು.

# ಅದ್ವೈತ ಶ್ರೀಕ್ಷೇತ್ರ ಶೃಂಗೇರಿ ಹೊತ್ತಿಗೆಯ ಲೋಕಾರ್ಪಣೆ




ಮೈಸೂರಿನ ಶೃಂಗೇರಿ ಶ್ರೀ ಶಂಕರ ಮಠದ ಅಭಿನವ ಶಂಕರಾಲಯದ ಶತಮಾನೋತ್ಸವ ಸಂಭ್ರಮಾಚರಣೆಯಲ್ಲಿ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶ್ರೀ ವಿಧುಶೇಖರಭಾರತೀ ಸನ್ನಿಧಾನಂ ರವರು ಅದ್ವೈತ ಶ್ರೀ ಕ್ಷೇತ್ರ ಶೃಂಗೇರಿ ಕಿರುಹೊತ್ತಿಗೆಯನ್ನು ಲೋಕಾರ್ಪಣೆ ಮಾಡಿ ಆಶೀರ್ವದಿಸಿದರು. ಶೃಂಗೇರಿ ಶ್ರೀಮಠದ ಆಡಳಿತಾಧಿಕಾರಿ ಶ್ರೀ ಪಿ.ಎ. ಮುರಳಿ, ಅಭಿನವ ಶಂಕರಾಲಯದ ಧರ್ಮಾಧಿಕಾರಿ ಶ್ರೀ ಹೆಚ್. ರಾಮಚಂದ್ರ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ, ಲೇಖಕ ನಂ ಶ್ರೀಕಂಠ ಕುಮಾರ್ ರವರು ಉಪಸ್ಥಿತರಿದ್ದರು.

ಜಾಹಿರಾತು

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

ಶುಭಾಶಯಗಳೊಂದಿಗೆ

ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ-ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು-560 061.
ದೂ. ಸಂ. 080-26731335, 26731336



**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ಎ.ಕೆ. | ನಿರ್ದೇಶಕರು | | |

## ಕು. ಜಾಹ್ನವಿ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ



2024 ನೇ ಸಾಲಿನ ಪಿಯುಸಿ ವಿಜ್ಞಾನ ವಿಷಯದಲ್ಲಿ ರಾಜ್ಯಕ್ಕೆ 2ನೇ ಸ್ಥಾನ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಮೈಸೂರಿನ ಶ್ರೀ ಟಿ.ಆರ್. ಗುರುರಾಜ್, ಶ್ರೀಮತಿ ಮಧು ಗುರುರಾಜ್‌ರವರು ಪುತ್ರಿ ಕು. ಜಾಹ್ನವಿ ತುಮಕೂರು ಗುರುರಾಜ್‌ರವರಿಗೆ ಮಹಾಸಭೆ ಹಾರ್ದಿಕ ಅಭಿನಂದನೆಗಳು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ ಶ್ರೀಕಂಠ ಕುಮಾರ್, ಸಮಿತಿ ಸದಸ್ಯರಾದ ಶಂಕರನಾರಾಯಣ, ವೇದಮಾತ ಗಾಯತ್ರಿ ಸಂಘದ ಅಧ್ಯಕ್ಷ ದಿನೇಶ್, ನರಸಿಂಹರಾಜ ವಿಪ್ರ ಸಂಘದ ಕಾರ್ಯದರ್ಶಿ ಎಂ ಎಸ್ ಚಂದ್ರಶೇಖರ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಕೆ ವಿ ಲಕ್ಷ್ಮೀದೇವಿ ಹಾಗೂ ಮೊದಲಾದವರು ಅಭಿನಂದಿಸಿದರು.

## ಅಪೂರ್ವ ಸಾಧನೆ – ಕು. ಕುಸುಮ



ಗದಗ ನಗರದ ಕುಷ್ಟಗಿಚಾಳ ನಿವಾಸಿಯಾದ ಶ್ರೀ ಆನಂದ ಜೋಶಿ ಇವರ ಮಗಳಾದ ಕು. ಕುಸುಮ ಇವಳು ಬಿವಿವಿಎಸ್ ಹಾನಗಲ್ ಶ್ರೀ ಕುಮಾರೇಶ್ವರ ಕಾಲೇಜ ಆಫ್ ಫಾರ್ಮಸಿ, ಬಾಗಲಕೋಟ ಇವರಲ್ಲಿ ಬಿ.ಫಾರ್ಮಸಿ 7ನೇ ಸೆಮ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು, ಮೊದಲನೇ ಬಾರಿಗೆ ಅಂಡರ್ ಗ್ರ್ಯಾಜುಯೇಶನ್ ವಿದ್ಯಾರ್ಥಿನಿಗೆ 2023–24ನೇ ಸಾಲಿನಲ್ಲಿ ರಾಜೀವ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ ಕರ್ನಾಟಕ, ಬೆಂಗಳೂರು ಇವರು ರಿಸರ್ಚ ಗ್ರ್ಯಾಂಟ್ ಮಾಡಿದ್ದು ಈ ವಿದ್ಯಾರ್ಥಿನಿಯು ಆ್ಯಂಟಿ ಬೆಸ್ಟ್ ಕ್ಯಾನ್ಸರ್ ಲಸಿಕೆ ನ್ಯಾನೂ ಪಾರ್ಟಿಕಲ್ಸ್ ಕಂಡು ಹಿಡಿದ್ದು ಶ್ಲಾಘನೀಯ, ಇವರಿಗೆ ನಮ್ಮೆಲ್ಲರ ಶುಭ ಹಾರೈಕೆಯೊಂದಿಗೆ ತುಂಬು ಹೃದಯದ ಅಭಿನಂದನೆಗಳು







ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

## ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ, 2ನೇ ಹಂತ, ಮೈಸೂರು – 570 023

### ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ


ತ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ) ಅಪರ, ಪೂರ್ವ, ಅಂತ್ಯೇಷ್ಠಿ ಕರ್ಮಾದಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃಕಾಲ 6.00 ರಿಂದ 6.30 ವೇದ ಪಠಣ, 6.30 ರಿಂದ 7.00 ವರೆಗೆ ಭಗವದ್ಗೀತಾ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**
**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**
**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ : 8088799540 / 8861998817**

ನಿಮ್ಮ
ಡಾ. ಬಿ.ಆರ್. ನಟರಾಜ್ ಜೋಯಿಸ್
ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ

## ವಿಪ್ರವೃಂದ (ರಿ.), ಶ್ರೀನಿವಾಸನಗರ, ಬೆಂಗಳೂರು

## ದಿನಾಂಕ 24.06.2024 – ಬೆಂಗಳೂರುನಲ್ಲಿ ಸಾಮೂಹಿಕ ಉಚಿತ ಉಪನಯನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಂಗಸಂಸ್ಥೆಯಾದ ವಿಪ್ರವೃಂದ (ರಿ.), ಶ್ರೀನಿವಾಸನಗರ, ಬೆಂಗಳೂರು ಇವರು ದಿನಾಂಕ 24.06.2024ರ ಸೋಮವಾರದಂದು ವರಪ್ರದ ಶ್ರೀ ವೆಂಕಟೇಶ್ವರ ದೇವಸ್ಥಾನ ದೇವಗಿರಿ, ಬನಶಂಕರಿ 2ನೇ ಹಂತ, ಬೆಂಗಳೂರು–70 ಇಲ್ಲಿ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ "ಸಾಮೂಹಿಕ ಉಚಿತ ಉಪನಯನ" ವನ್ನು ಏರ್ಪಡಿಸಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಲಾಗಿದೆ. ನೋಂದಾಯಿಸಲು ಕೊನೆಯ ದಿನಾಂಕ 05–06–2024. ಕೆ.ಎಂ. ವಿನಯ್‌ಕುಮಾರ್ (9591338868), ಕೆ. ರವೀಂದ್ರನಾಥ್ (9448076346) ಮತ್ತು ಬಿ.ವಿ.ರಮೇಶ್ (9880596436)

## ಅಡುಗೆ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ

ಬೆಂಗಳೂರಿನಲ್ಲಿ ವಾಸವಾಗಿರುವ ದಂಪತಿಗೆ 11 ವರ್ಷದ ಮತ್ತು 8 ವರ್ಷದ ಎರಡು ಮಕ್ಕಳಿರುತ್ತಾರೆ. ನಮ್ಮ ಮನೆಗೆ ಪ್ರತಿದಿನ ಬೆಳಿಗ್ಗೆ ಬಂದು, ಅಡುಗೆ ಮತ್ತು ಕೆಲವೊಂದು ಸಣ್ಣ ಕೆಲಸಗಳನ್ನು ಮಾಡಲು ಮಧ್ಯವಯಸ್ಕ ಮಹಿಳೆಯ ಅವಶ್ಯಕತೆಯಿರುತ್ತದೆ. ಅವರು ಸಾಯಂಕಾಲದವರೆಗೆ ಮನೆಯಲ್ಲಿದ್ದು, ಮಕ್ಕಳಿಗೆ ಊಟ–ತಿಂಡಿ ನೀಡುವುದು ಮತ್ತು ನೋಡಿಕೊಳ್ಳಬೇಕಾಗುತ್ತದೆ. ಈ ಕೆಲಸಕ್ಕೆ ಸೂಕ್ತ ವೇತನವನ್ನು ನೀಡಲಾಗುತ್ತದೆ.

**ಆಸಕ್ತರು ಮೊಬೈಲ್ ಸಂಖ್ಯೆ : 9148984394ಗೆ ಕರೆ ಮಾಡಬೇಕಾಗಿ ವಿನಂತಿ.**



## ಅಡುಗೆಗೆ ಮಹಿಳೆಯರು ಬೇಕಾಗಿದ್ದಾರೆ

ದಿನನಿತ್ಯ ಬೆಳಿಗ್ಗೆ 7.30 ರಿಂದ 9.30ಕ್ಕೆ ಈ ಕೆಳಕಂಡ ಸ್ಥಳದಲ್ಲಿ ಇಬ್ಬರಿಗೆ ಅಡುಗೆ ಕೆಲಸ ನಿರ್ವಹಿಸಲು ಮಹಿಳೆಯರು ಬೇಕಾಗಿದ್ದಾರೆ.

**ಫ್ಲಾಟ್ ನಂ.2121, 12ನೇ ಮಹಡಿ, ಬಿ2 ಬ್ಲಾಕ್, ಶೋಭಾ ಕೋವೆಲ್ಲಿ, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು–560061. (ಮೊ) 9845402375, 9901902375**

## ಪ್ರಗತಿಪರ ಕೃಷಿಕ ನವಿನ ಮಾದರಿ ರೈತ ರಾಷ್ಟ್ರ ಪ್ರಶಸ್ತಿ ವಿಜೇತ

# ಶ್ರೀ ಎಂ.ವಿ. ಪ್ರಕಾಶರಾವ್

– ರಾಧಾಕೃಷ್ಣ ಬಂದಗದ್ದೆ



**ಪ್ರಗತಿಪರ ರೈತ ರಾಷ್ಟ್ರ ಪ್ರಶಸ್ತಿ ವಿಜೇತ ಮಂಚಾಲೆ ಪ್ರಕಾಶ್‌ರಾವ್‌ರವರು ತಮ್ಮ 3–4 ಎಕರೆ ಭೂಮಿಯಲ್ಲಿ ಆದ್ಯಾತ್ಮಿಕ ಆಸಕ್ತಿ ಮತ್ತು ಪರಿಸರ ಕಾಳಜಿಯೊಂದಿಗೆ ಸುಮಾರು 200ಕ್ಕು ಹೆಚ್ಚು ಪಾರಂಪರಿಕ ಕಾಡು ತಳಿಗಳ ಹಾಗೂ ನೂರಾರು ಔಷಧಿ ಸಸ್ಯಗಳ ಸಂರಕ್ಷಣೆಯಲ್ಲಿ ತೊಡಗಿ ಜೊತೆಯಲ್ಲಿ ವಾಣಿಜ್ಯ ಬೆಳೆಗಳಾದ ಮಾವು–ಅಂಜುರ ಮುಂತಾದ ಹಣ್ಣುಗಳು, ಅಡಿಕೆ, ತೆಂಗು ಬೆಳೆಗಳನ್ನು ಕೃಷಿಯಲ್ಲಿ ಜೊಡಿಸಿಕೊಂಡು ನವೀನ ಮಾದರಿ ಕೃಷಿಕರು ಎಂದು ಪ್ರಸಿದ್ಧರಾಗಿದ್ದಾರೆ.**

**ಇವರ ಅಪೂರ್ವ ಸಾಧನೆಯನ್ನು ಗಮನಿಸಿ ಕೇಂದ್ರ ಸರ್ಕಾರವು 2020–21ನೇ ಸಾಲಿನ ಪ್ರತಿಷ್ಠಿತ ರಾಷ್ಟ್ರೀಯ ತಳಿ ಸಂರಕ್ಷಣ ಪ್ರಶಸ್ತಿ ಹಾಗೂ ನವಿನ ಮಾದರಿ ರೈತ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಯಾವುದೆ ವಿಶ್ವವಿದ್ಯಾನಿಲಯದ ಪದವಿ ಇಲ್ಲದೆ ಇಂದು ದೇಶ ಹಾಗೂ ವಿದೇಶಗಳ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ಕೃಷಿ ವಿಜ್ಞಾನಿಗಳು ಇವರ "ಕಾಡು – ತೋಟಕ್ಕೆ" ಅಧ್ಯಯನ ಹಾಗೂ ಮಾರ್ಗದರ್ಶನಕ್ಕಾಗಿ ಭೇಟಿ ನೀಡುತ್ತಿರುವುದು ಪ್ರಕಾಶರಾಯರು ಈ ನವಿನ ಮಾದರಿ ಕೃಷಿ ಪದ್ಧತಿಯಲ್ಲಿ ಹೊಂದಿದ ಆಳವಾದ ಪರಿಜ್ಞಾನಕ್ಕೆ ಸಾಕ್ಷಿಯಾಗಿದೆ. ಪ್ರತಿನಿತ್ಯ ನೂರಾರು ಆಸಕ್ತ ರೈತರು ಹಾಗೂ ಕೃಷಿ ವಿದ್ಯಾರ್ಥಿಗಳು ಇವರ ತೋಟವನ್ನು ನೋಡಲು ಆಗಮಿಸಿ ಪ್ರಕಾಶರಾಯರ ಮಾರ್ಗದರ್ಶನ ಪಡೆಯುತ್ತಿದ್ದಾರೆ.**

ಸಾಗರದಿಂದ ಶಿವಮೊಗ್ಗಕ್ಕೆ ಹೋಗುವ ಎನ್.ಎಚ್.206 ರಸ್ತೆಯಲ್ಲಿ ಸಾಗಿ ತ್ಯಾಗರ್ತಿ ಕ್ರಾಸ್‌ನಲ್ಲಿ ಎಡಕ್ಕೆ ತಿರುಗಿದರೆ ಎಂಟು ಕಿಲೋಮೀಟರ್‌ಗಳ ದೂರದಲ್ಲಿ ಮಂಚಾಲೆ ಊರಿದೆ. ಮಂಚಾಲೆಯ ಎಮ್.ವಿ.ಪ್ರಕಾಶ ರಾಯರಿಗೆ 57 ವರ್ಷಗಳು. ಅಡಕೆ ಬೆಳೆಗಾರರ ಕುಟುಂಬದಲ್ಲಿ ಬೆಳೆದ ಇವರು ಔಷಧಿ ಗಿಡಗಳನ್ನು ಉಳಿಸುವ ಬೆಳೆಸುವ ಖಯಾಲಿ ಅಂಟಿಸಿಕೊಂಡರು. ಜಲ ನೋಡುವುದು ಇವರ ಅಭ್ಯಾಸಗಳಲ್ಲಿ ಒಂದು. ಒಟ್ಟಿನಲ್ಲಿ ಇವರಿಗೆ ಬೇಕಾದ ಗಿಡಗಳು ಎಲ್ಲೋ ಇದೆ ಎಂದು ಗೊತ್ತಾದರೆ ಅದನ್ನು ಹಠ ಹೊತ್ತು ತರುತ್ತಿದ್ದರು. ಜಲ ನೋಡಲು ಎಲ್ಲೆಲ್ಲಿಗೋ ಕರೆಯುತ್ತಿದ್ದರು. ಈ ಎರಡೂ ಕೆಲಸಗಳಿಂದ ಪ್ರಕಾಶರಾಯರ ಕಾಲಿಗೆ ಚಕ್ರ ತಾಗಿತ್ತು! ಸಾಗರ, ಸಿದ್ಧಾಪುರ, ಸಿರ್ಸಿ, ಕುಮಟಾ, ಹೊನ್ನಾವರ, ಶಿವಮೊಗ್ಗ, ಭದ್ರಾವತಿ, ತರಿಕೆರೆ – – ಹೀಗೆ ಇವರು ಸುತ್ತಾಡದ ಊರುಗಳಿಲ್ಲ.

ಕೋಶ ಓದು ಇಲ್ಲವೇ ದೇಶ ತಿರುಗು ಎನ್ನುವ ಮಾತು ನಮ್ಮಲ್ಲಿದೆ. ಕೋಶ ಓದಲೇಬೇಕು. ಆದರೆ ದೇಶ ತಿರುಗುವುದರಿಂದ ಕೋಶ ಓದಿದ್ದಕ್ಕಿಂತಾ ಆಳವಾದ ಅನುಭವ ನಮ್ಮದಾಗುತ್ತದೆ ಎಂಬ ಅನುಭವ ನನ್ನದು. ಪ್ರಕಾಶರಾಯರು ಮೇಲೆ ಹೇಳಿದ ಎರಡೂ ಕಾರಣಗಳಿಗಾಗಿ ತಿರುಗಿ ತಿರುಗಿ ಸಾಕಷ್ಟು ಅನುಭವಿಗಳಾಗಿದ್ದಾರೆ.

ಪ್ರಕಾಶರಾಯರು ದೊಡ್ಡ ಜಮೀನುದಾರರಲ್ಲ. ಜಮೀನು ವಿಸ್ತರಣೆ ಬಗ್ಗೆ ಅವರು ಕೆಲಸ ಮಾಡಿಲ್ಲ. ತಮಗಿರುವ ಭೂಮಿಯಲ್ಲಿರುವ ಬೆಳೆಗಳನ್ನು ಹೆಚ್ಚಿಸುವಲ್ಲಿ ಸತತ ಕೆಲಸ ಮಾಡಿದರು. ಇದರಿಂದ ಭೂಮಿ ಏನಾಗುವುದು? ಇದನ್ನರಿಯುವುದರಿಂದ ಕೃಷಿಕರಿಗೆ ಬಹುದೊಡ್ಡ ಲಾಭವಾಗಿದೆ.

ಪ್ರಕಾಶರಾಯರಿಗೆ ಒಂದು ಎಕರೆ ಅಡಕೆ ತೋಟ, ಎರಡು ಎಕರೆ ಖುಷ್ಕಿ ಅಂದರೆ ನೀರಾವರಿ ಇಲ್ಲದ ಬೆಟ್ಟ ಪ್ರದೇಶ, ಮೂರು ಎಕರೆ ಸೊಪ್ಪಿನ ಬೆಟ್ಟ ಅಂದರೆ ಕಾಡೂ ಅಲ್ಲದ ನಾಡೂ ಅಲ್ಲದ ಬೆಟ್ಟ ಪ್ರದೇಶ ಇದೆ. ಪ್ರಕಾಶರಾಯರು ಕಳೆದ ಹತ್ತು ವರ್ಷಗಳಲ್ಲಿ ತಮ್ಮ ಪ್ರಯೋಗಕ್ಕೆ ಅನುಗುಣವಾಗಿ ಈ ಪ್ರದೇಶದ ಗುಣ ಧರ್ಮಗಳನ್ನು ಅಧ್ಯಯನ ಮಾಡುತ್ತಾ ನಾನಾ ರೀತಿಯ ಔಷಧೀಯ ಸಸ್ಯಗಳನ್ನು ಆಳವಡಿಸುತ್ತಾ ಬಂದರು. ಒಂದು ಎಕರೆ ಅಡಕೆ ತೋಟದಲ್ಲಿ ಕಾಳುಮೆಣಸು ಮತ್ತು ಕಾಫಿಯ ಜೊತೆ ಅಮೃತ ಬಳ್ಳಿ ಮತ್ತು ಮಾಫಿಯಾ ಬೆಳೆಗಳನ್ನು ಸೇರಿಸಿದರು.

ಎರಡು ಎಕರೆ ಖುಷ್ಕಿಯಲ್ಲಿ ತೆಂಗಿನ ಮರಗಳ ಜೊತೆ ಹಸಿರು ಹಾದಿ ನಿರ್ಮಿಸಿದರು. ಇದರಿಂದ ನೀರು ಮತ್ತು ಪೋಷಕಾಂಶಗಳ ಕೊರತೆಯಿಂದ ನರಳುತ್ತಿದ್ದ ತೆಂಗಿನ ಮರಗಳು ಚೇತರಿಸಿಕೊಂಡು ಉತ್ತಮ ಫಲ ನೀಡತೊಡಗಿದವು.

ಮೂರು ಎಕರೆ ಸೊಪ್ಪಿನ ಬೆಟ್ಟದಲ್ಲಿ ಮತ್ತೊಂದು ಹಸಿರು ಹಾದಿ

ನಿರ್ಮಿಸಿದರು. (ವಿವರಗಳನ್ನು ಮುಂದೆ ಓದಿ) ಈ ಸೊಪ್ಪಿನ ಬೆಟ್ಟವು ಈಗ ಕಾಡಿನ ತದ್ರೂಪಿಯಾಗಿದೆ. ಮನುಷ್ಯರು ಓಡಾಡುವಂತಿದೆ. ಕ್ರಿಮಿಕೀಟಾದಿಗಳಿಗೂ, ಹಕ್ಕಿ ಪಕ್ಷಿಗಳಿಗೂ ಆನಂದ ನೀಡಬಹುದಾದ, ಪ್ರಾಣಿಗಳು ಹಗಲು ರಾತ್ರಿ ಓಡಾಡಬಹುದಾದ, ಪ್ರಕಾಶರಾಯರು ಗಿಡಗಳನ್ನು ಕಡಿಯದೇ ಅದರ ಫಲದಿಂದ ಹಣಗಳಿಸಬಹುದಾದ ತದ್ರೂಪಿ ಕಾಡು ಇದಾಗಿದೆ.

ಪ್ರಕಾಶ ರಾಯರು ಬೆಟ್ಟ ಪ್ರದೇಶದ ಭಾಗಕ್ಕೂ, ಮೂರು ಎಕರೆ ತದ್ರೂಪಿ ಕಾಡಿಗೂ ಗಿಡಗಳ ಅಳವಡಿಕೆ ಮಾಡುವಾಗ ಭವಿಷ್ಯದ 30-40 ವರ್ಷಗಳ ಚಿಂತನೆ ಮಾಡಿದ್ದಾರೆ. ಎರಡು ಎಕರೆ ಜಾಗದಲ್ಲಿ ಬೇಲಿಯ ಅವಶ್ಯಕತೆ ಇರುವಂತಹ ಬೆಳೆಗಳಿದ್ದರೆ, ತದ್ರೂಪಿ ಕಾಡಿರುವ ಜಾಗದಲ್ಲಿ ಬೇಲಿ, ನೀರು ಎರಡರ ಅವಶ್ಯಕತೆಯೂ ಇಲ್ಲದಂತೆ ಬೆಳೆಗಳ ಜೋಡಣೆ ಮಾಡಿದ್ದಾರೆ.

ಅದು ಹೇಗೆಂದರೆ ಪದ್ಮಶ್ರೀ ಪುರಸ್ಕೃತ, ಸಕಲರಿಗೂ ಲೇಸನ್ನೇ ಬಯಸುವ ಶೂನ್ಯ ಬಂಡವಾಳ ಕೃಷಿ ಪದ್ಧತಿ ಹರಿಕಾರ ಶ್ರೀ ಪಾಳೇಕರ್ ಹೇಳುತ್ತಾರೆ. ಉತ್ತಮ ತಳಿಗಳ ಬೀಜದ ಆಯ್ಕೆ ಮಾಡಿ, ಬೀಜಾಮೃತ, ಜೀವಾಮೃತ ಮತ್ತು ಆರ್ದ್ರತೆಗಳನ್ನು ಕಾಪಾಡುವ ವ್ಯವಸ್ಥೆ ಮಾಡಿ ಜೀವಾಂಶ ಮುಚ್ಚಿಗೆ ಆಗುವಂತೆ ಪಂಚತರಂಗಿಣಿ ವ್ಯವಸ್ಥೆಯಲ್ಲಿ ಗಿಡಗಳನ್ನು ಆಯೋಜಿಸಿ ನೆಟ್ಟಾಗ ಅಲ್ಲಿನ ಕೃಷಿಭೂಮಿಯು ಕ್ರಮೇಣ ಶೂನ್ಯ ಬಂಡವಾಳ ಸ್ಥಿತಿ ತಲುಪುವುದು. ಎಮ್.ವಿ. ಪ್ರಕಾಶರಾಯರ ಹಸಿರು ಹಾದಿ ಮಾದರಿಯಲ್ಲಿ ಈ ವ್ಯವಸ್ಥೆ ಅಡಕಗೊಂಡಿದೆ.

ಎಮ್.ವಿ. ಪ್ರಕಾಶ ರಾಯರು ಹೆಚ್ಚು ಹೆಚ್ಚು ವೈವಿಧ್ಯಮಯ ಸಸ್ಯಗಳನ್ನು, ಗಿಡಮರಬಳ್ಳಿಗಳನ್ನು, ಹುಲ್ಲು ಜಡ್ಡುಗಳನ್ನು ತಮ್ಮ ಭೂಮಿಯಲ್ಲಿ ಅಳವಡಿಸಿರುವುದರಿಂದ ಅವರ ಭೂಮಿಯು ಫಲವತ್ತಾಗುತ್ತಿದೆ. ಹಕ್ಕಿಪಕ್ಷಿಗಳು, ಪ್ರಾಣಿಗಳಿಂದ ಅಥವ ಗಾಳಿಯಿಂದ ಅವರ ಭೂಮಿಗೆ ಅಲ್ಲಿಗೆ ಒಗ್ಗುವ ಹೊಸ ಸಸ್ಯಗಳ ಬೀಜಗಳೂ ಬಂದು ಇನ್ನಷ್ಟು ಹೊಸ ಸಸ್ಯಗಳು ಹುಟ್ಟುವ ಸಾಧ್ಯತೆಗಳಿವೆ. ಪ್ರಕಾಶರಾಯರಿಗೆ ಅದು ಪೂರಕ ಸಸ್ಯವಾದರೆ ಅವರಿಗದು ಭಗವಂತ ಕಳಿಸಿದ ವರದಾನವಾದಂತೆ!! ನಿಸರ್ಗ ಮಾದರಿ ಕೃಷಿಯಲ್ಲಿ ಹೀಗೆಲ್ಲಾ ಆಗುವುದರ ಜೊತೆಗೆ ಇನ್ನೊಂದು ಸಾಧ್ಯತೆ ಇರುವುದನ್ನು ಇಲ್ಲಿ ಹೇಳಲೇ ಬೇಕು.

ಕೆಲವೊಮ್ಮೆ ನೆಲದ ಮೇಲಿರುವ ಬೀಜಗಳು ಪೋಷಕಾಂಶಗಳ ಕೊರತೆಯಿಂದ ಮೊಳಕೆ ಒಡೆಯಲಾಗದೆ ಚರತು ಹೋಗುತ್ತವೆ. ಕೆಲವು ಬೀಜಗಳು ಹಾಳಾಗದೆ ಚಿಗುರುವ ಹಂಬಲದಿಂದ ಜೀವ ಹಿಡಿದು ಉತ್ತಮ ವಾತಾವರಣಕ್ಕಾಗಿ ಕಾಯುತ್ತಿರುತ್ತವೆ. ಭೂಮಿ ಫಲವತ್ತಾದಾಗ ಬೀಜಗಳು ಮೊಳಕೆ ಒಡೆದು ತಮ್ಮ ವಂಶಾಭಿವೃದ್ಧಿ ಮಾಡಲು ತೊಡಗುತ್ತವೆ. ಇವೆಲ್ಲಾ ನಿಸರ್ಗದ ರಹಸ್ಯಗಳು.

ಮಂಚಾಲೆಯ ಪ್ರಕಾಶ ರಾಯರು ತಮ್ಮ ಮನೆಯ ಹಿಂದಿನ ಬೆಟ್ಟವನ್ನೇ ಕಾಡುತೋಟವನ್ನಾಗಿ ಮಾರ್ಪಡಿಸಿದರು. ಸಹಜವಾಗಿ ಕಾಡು ಹೇಗಿರುತ್ತದೆ? ಅಲ್ಲಿ ಯಾವ್ಯಾವ ಸಸ್ಯಗಳ ಜೊತೆ ಇನ್ಯಾವ ಸಸ್ಯಗಳು ಜೋಡಿಯಾಗಿರುತ್ತವೆ. ಹೊಂದಿಕೊಂಡಿರುತ್ತವೆ. ಯಾವ ಮರಕ್ಕೆ ಯಾವ ಬಳ್ಳಿ ಹಬ್ಬುತ್ತದೆ ಎನ್ನುವುದನ್ನೆಲ್ಲಾ ಕಾಡನ್ನು ನೋಡುತ್ತ ನೋಡುತ್ತ ಅರಿತರು. ಅಲ್ಲಿನ ಸೂಕ್ಷ್ಮತೆಗಳನ್ನೆಲ್ಲಾ ತಿಳಿದುಕೊಂಡು ಅಳವಡಿಸಿದರು. ಹೀಗೆ ಅಳವಡಿಸುವಾಗ ಯಾವ ಗಿಡಗಳ ಯಾವ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ, ಯಾವ ಔಷಧೀಯ ಸಸ್ಯಗಳನ್ನು ಬೆಳೆದರೆ ಸುಲಭವಾಗಿ ಮಾರುಕಟ್ಟೆಯನ್ನು ಮಾಡಬಹುದು ಎನ್ನುವದನ್ನೆಲ್ಲ ಅಬ್ಯಾಸ ಮಾಡಿ ಅವುಗಳನ್ನೆಲ್ಲಾ ಅಲ್ಲಿ ಬೆಳೆಸುತ್ತಿದ್ದಾರೆ.

ಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆಯುತ್ತಿದ್ದ ಪ್ರಕಾಶರಾಯರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನೆಚ್ಚಿದ್ದು ತಂದೆಯಿಂದ ಬಂದ ಆಸ್ತಿಯನ್ನೇ. ಒಂದು ಎಕರೆ ಅಡಿಕೆ ತೋಟ, ನಾಲ್ಕು ಎಕರೆ ಬೆಟ್ಟ ಮಾತ್ರ. ಯಾವ ರೀತಿ ಬೆಳೆ ಮಾಡಿ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ಹುಡುಕಾಟ ಪ್ರಾರಂಭಿಸಿದರು. ಕೃಷಿಯಲ್ಲಿ ಸಾಧನೆ ಮಾಡಿದವರ ಕ್ಷೇತ್ರಕ್ಕೆ ಹೋಗುವುದು, ನೋಡುವುದು, ತಾನೇನು ಮಾಡಬೇಕೆಂದು ಆಲೋಚಿಸುವುದು ನಡದೇ ಇತ್ತು. ಕುರುವಳ್ಳಿ ಪುರುಷೋತ್ತಮ ರಾಯರ ಕೃಷಿ ಕ್ಷೇತ್ರಕ್ಕೆ ಹೋದಾಗ ಅವರು ತಮ್ಮ ತೋಟದಲ್ಲಿ ಹತ್ತು ಬೆಳೆ ಮಾಡಿದ್ದೇನೆ ಎಂದು ತೋರಿಸಿದರು. ಈ ಎಲ್ಲಾ ಬೆಳೆಗಳನ್ನು ನೋಡಿದ ಪ್ರಕಾಶರಾಯರಿಗೆ ಅದೇ ಒಂದು ತಿರುವಿನ ಪ್ರಸಂಗವಾಯಿತು. ಈಗಿರುವುದಕ್ಕಿಂತ ಹೆಚ್ಚು ಜಮೀನನ್ನು ಖರೀದಿ ಮಾಡಲು ಹಣವಿಲ್ಲ. ಜಮೀನು ಖರೀದಿ ಮಾಡಿದರೂ ಯಾವ ಯಾವ ಬೆಳೆ ಮಾಡಬೇಕೆಂದೇ ಗೊತ್ತಿರಲಿಲ್ಲ. ಬೇರೆ ಬೇರೆ ಬೆಳೆ ಮಾಡಿ ಕೈಸುಟ್ಟುಕೊಂಡಾಗಿತ್ತು. ಇರುವ ಜಮೀನಿನಲ್ಲೆ ಬೆಳೆ ಹೆಚ್ಚು ಮಾಡುವುದರಿಂದ ಆದಾಯವನ್ನು ಹೆಚ್ಚಿಸಬಹುದೆಂದು ಅಂದಾಜು ಮಾಡಿದರು.

ಇವರ ಇನ್ನೊಂದು ಗುಣವೆಂದರೆ ಯಾವುದೇ ವಿಷಯ ಮನಸ್ಸಿಗೆ ಬಂತೆಂದರೆ ಅದರಲ್ಲೇ ಮುಳುಗುವುದು. ಅದರ ಸಾಧಕ-ಬಾಧಕಗಳನ್ನೂ ಯೋಚಿಸುವುದು. . . ನಂತರ ಕಾರ್ಯರೂಪಕ್ಕಿಳಿದು ಮತ್ತದರಲ್ಲೇ ಧ್ಯಾನಸ್ಥನಾಗುವುದು. . . ದೇಶಕ್ಕೆ ಆಹಾರವನ್ನು ಕೊಡುವ ರೈತ ಆರೋಗ್ಯಕ್ಕೆ ಔಷಧವನ್ನೂ ನೀಡಬೇಕೆಂಬುದು ಪ್ರಕಾಶರಾಯರ ಮನಸ್ಸಿಗೆ ಬಂತು. ಔಷಧ ಗಿಡಗಳನ್ನು ಸಂಗ್ರಹಿಸಿದರು. ಬೆಳೆಸಲು ತೊಡಗಿದರು. ನಾಲ್ಕು ಎಕರೆ ಬೆಟ್ಟದಲ್ಲಿ ಎರಡು ಎಕರೆಯನ್ನು ತೆಂಗು ಕೃಷಿ ಮಾಡಲು ತೊಡಗಿ ನೀರಿಲ್ಲದೇ ಕೊರಗಿದ್ದರು. ಉಳಿದ ಎರಡು ಎಕರೆಯಂತೂ ಕಾಡಾಗಿತ್ತು. ಔಷಧ ಗಿಡಗಳು ಎಲ್ಲಿರುತ್ತವೆ? ಅವು ಬೆಳೆಯುವ ಪರಿಸರ ಹೇಗಿರುತ್ತದೆ? ತೆಂಗಿನ ತೋಟ ಮತ್ತು ಕಾಡಿನಲ್ಲಿ ಯಾವ ಯಾವ ಗಿಡಗಳನ್ನು ಸಹ ಬೆಳೆಯಾಗಿ ಬೆಳೆಯಬಹುದು. ಇದರ ಮಾರುಕಟ್ಟೆ ಎಲ್ಲಿದೆ-ಹೀಗೆ ಪ್ರಕಾಶರಾಯರ ಚಿಂತನೆ ಮತ್ತು ಹುಡುಕಾಟ ಶುರುವಾಯಿತು.

ಯಾವ ಬೆಳೆಗಳಿಗೆ ಬೇಲಿಯ ಅವಶ್ಯಕತೆ ಇದೆ, ಯಾವುದಕ್ಕಿಲ್ಲ. ನಿಸರ್ಗ ಮಾದರಿಯಲ್ಲಿ ಬೆಳೆಯಬಹುದಾದ ಸಸ್ಯಗಳಾವುವು - ಹೀಗೆ ಚಿಂತನೆಯಲ್ಲಿ ಮುಳುಗಿದ ಪ್ರಕಾಶರಾಯರು ತೆಂಗಿನ ತೋಟಕ್ಕೆ ಒಂದು ರೀತಿಯ ಸಹ ಬೆಳೆಗಳ ಮಾದರಿಯನ್ನು ಮಾಡಿದರು. ಸಹ ಬೆಳೆಗಳ ಹಸಿರು

ಹಾದಿಯನ್ನು ಕಾರ್ಯ ರೂಪಕ್ಕೆ ತಂದರು. ಇಂದು ನೂರೈವತ್ತಕ್ಕೂ ಹೆಚ್ಚು ಔಷಧೀ ಸಸ್ಯಗಳ ಸಂಗ್ರಹ ಅವರಲ್ಲಿದೆ. ಇದರಲ್ಲಿ ಅನೇಕ ಸಸ್ಯಗಳಿಗೆ ಇತರ ಕಾಡುತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಂಡಿದ್ದಾರೆ. ಔಷಧ ಗಿಡಗಳ ಬೆಳೆ ಮಾಡುವ ಅನೇಕ ರೈತರಿಗೆ ಆತ್ಮವಿಶ್ವಾಸ ತುಂಬುತ್ತಿದ್ದಾರೆ. ಅನೇಕ ಆಸಕ್ತ ರೈತರಿಗೆ ಈ ಗಿಡಗಳ ನರ್ಸರಿ ಮಾಡಲು ನಿರ್ದೇಶಿಸಿ ಗಿಡಗಳ ವೃದ್ಧಿ ಮಾಡಲು ತೊಡಗಿಸಿದ್ದಲ್ಲದೇ ಮಾದರಿ ಕಾಡುತೋಟಗಳ ನಿರ್ಮಾಣಕ್ಕೆ ನಿರ್ದೇಶಕರಾಗಿದ್ದಾರೆ. ತರಿಕೆರೆ ಬಳಿಯ ಅಮೃತಪುರದ ಈಶ್ವರಪ್ಪ, ಸಿರ್ಸಿಯ ಹೀಪನಳ್ಳಿಯ ಪ್ರಕಾಶ್ ಬಾಬು, ತಾರಗೋಡು ಮಧುಕೇಶ್ವರ ಹೆಗಡೆ, ಸಾಗರದ ಸಿದ್ದನಕೈ ಸುದರ್ಶನ, ಕುಗ್ವೆ ಶ್ರೀಪಾದ ಇವರುಗಳು ಪ್ರಕಾಶರಾಯರ ನಿರ್ದೇಶನದಲ್ಲಿ ಔಷಧೀ ಸಸ್ಯಗಳನ್ನು ಬೆಳೆಯುತ್ತಿದ್ದಾರೆ.




ದೇಶದ ಜನಸಂಖ್ಯೆ ವೃದ್ಧಿಸಿದಂತೆ ರೋಗಿಗಳ ಸಂಖ್ಯೆಯೂ ವೃದ್ಧಿಸುವುದು ಸಹಜ. ಭಾರತದಲ್ಲೇ ಬೆಳೆದ ಅನೇಕ ಸಸ್ಯಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಹೀಗಾಗಿ ನಾವು ಔಷಧೀ ಸಸ್ಯಗಳನ್ನು ಬೆಳೆದರೆ ಔಷಧ ತಯಾರಿಕೆಗೆ ಸಹಾಯವಾಗುವುದು.. ಈ ರೀತಿ ಮನುಕುಲದ ಸೇವೆ ಮಾಡಬೇಕು ಎನ್ನುವುದು ಪ್ರಕಾಶ ರಾಯರ ಈ ಎಲ್ಲಾ ಕೆಲಸಗಳ ಹಿಂದಿನ ಆಶಯ.

ನೇರವಾಗಿ ಆದಾಯವಿಲ್ಲದ ಸ್ಥಳವಾಗಿದ್ದ ನಾಲ್ಕು ಎಕರೆ ಪ್ರದೇಶ ನಿಧಾನ ಗತಿಯಲ್ಲಿ ವಿಧ ವಿಧವಾದ ಸಸ್ಯಗಳಿಂದ ಹಸಿರಾಗತೊಡಗಿತು. ಭೂಮಿಯಲ್ಲಿ ಬೆಳೆಗಳು ಹೆಚ್ಚಾದಂತೆಲ್ಲಾ ತಾನೇ ತಾನಾಗಿ ಅಲ್ಲಿನ ಫಲವತ್ತತೆ ಹೆಚ್ಚಾಗುವುದು. ಆದಾಯವೂ ಹೆಚ್ಚಾಗುವುದು. ಇದರಿಂದ ನೀರಿಲ್ಲದೇ ಕೊರಗುತ್ತಿದ್ದ ತೆಂಗಿನ ಮರಗಳು ಚೇತರಿಕೆ ಕಂಡವು. ಪ್ರಕಾಶರಾಯರು ಹಿಪ್ಪಲಿ, ಒಂದೆಲಗ, ಸೂಜಿಮೆಣಸನ್ನೆಲ್ಲಾ ಮಾರುಕಟ್ಟೆಯ ದೃಷ್ಟಿಯಿಂದಲೇ ಬೆಳೆಯುತ್ತಿದ್ದಾರಂತೆ, ನೋಡಬೇಕು ಎಂದು ರೈತರು ಗುಂಪು ಗುಂಪಾಗಿ ಬರತೊಡಗಿದರು. ನಾವು ಇದನ್ನು ಹೇಗೆ ಬೆಳೆಯುವುದು ಎಂದು ರೈತರು ಯೋಚಿಸತೊಡಗಿದರು. ದೂರ ದೂರದ ಊರುಗಳಿಂದಲೂ ಬಂದು ನೋಡಿದ ಜನ ಈ ಬೆಳೆಗಳಿಂದ ಆಕರ್ಷಿತರಾದರು. ನಿಧಾನವಾಗಿ ಔಷಧ ಗಿಡಗಳನ್ನು ಬೆಳೆಯಲಾರಂಭಿಸಿದರು.

ಪ್ರಕಾಶ ರಾಯರ ಈ ಆಸಕ್ತಿಯು ಈಗ ಸಣ್ಣ ಚಳುವಳಿಯಾಗಿ ಸುತ್ತಲೂ ಪಸರಿಸತೊಡಗಿದೆ. ಈ ಚಳುವಳಿಯ ಗಾಳಿಯು ಸುಗಂಧವನ್ನು ನಾಡಿನೆಲ್ಲೆಡೆ ಪಸರಿಸಲಿ.

ಪ್ರಕಾಶ ರಾಯರು ತಮ್ಮ ಮನೆಯ ಸಮೀಪದ ಕಾಡಿನಲ್ಲಿರುವ ಹೊನ್ನೇಹುಣಾಲು, ಸಳ್ಳೆ, ತಾರೆ, ಅಳಲೆ, ಕೌಳಿ, ನಂದಿ, ಕುನ್ನೇರಲು, ಬರಣಿಗೆ, ಮುಳ್ಳಣ್ಣು ಮುಂತಾದ ಗಿಡಮರಗಳ ಜೊತೆ ದಾಲ್ಚಿನ್ನಿ, ಬಿಳೇಮತ್ತಿ, ಹಾಲುಮಡ್ಡಿ, ಅಗರ್, ಸೇಲೇಶಿಯಾ, ಲಿಂಬೆ, ಮಾಪಿಯಾ, ಗೇರು, ಸಪ್ತಪರ್ಣೀ, ಮಾವು, ಕಚೋರ, ಶತಾವರಿ, ನೆಲ ಗೊಣಗಲು, ಕಾಳುಮೆಣಸು, ಹೆಡಿಗೆ ಗೆಣಸು ಮುಂತಾದ ಸಸ್ಯಗಳನ್ನು ಅಳವಡಿಸಿದರು.

ಪ್ರಕಾಶರಾಯರು ತಮ್ಮ ಅಡಕೆ ತೋಟದಲ್ಲಿ ಸಾವಯುವ ಮಾದರಿಯನ್ನು ಅನುಸರಿಸುತ್ತಾರೆ. ಅದರಲ್ಲಿ ಕಾಳುಮೆಣಸು, ಬಾಳೆ, ಲವಂಗ, ಜಾಯಿಕಾಯಿ, ಸೂಜಿಮೆಣಸು ಮುಂತಾದ ಸಸ್ಯ ಸಂಕುಲಗಳು ತುಂಬಿವೆ. ಊರೊಟ್ಟಿನ ತೋಟವಾದ ಕಾರಣ ಕೆರೆ ಆಶ್ರಿತ ನೀರಾವರಿಯನ್ನು ಅವಲಂಬಿಸಿದೆ. ಅಜ್ಜಂದಿರ ಕಾಲದ ತೋಟ ಮತ್ತು ಅದೇ ರೀತಿಯ ಸಾಂಪ್ರದಾಯಕ ವಿಧಾನದಲ್ಲೇ ತೋಟದ ಕೃಷಿಯನ್ನು ಮುಂದುವರೆಸಿದ್ದಾರೆ. ಜೊತೆಗೆ ಕೆಲವು ಸಹ ಬೆಳೆಗಳನ್ನು ಜೋಡಿಸುತ್ತಾ ಮುಂದುವರೆದಿದ್ದಾರೆ.

ಅವರ ತೋಟದಲ್ಲಿ ಈಗ 77 ಅಡಿಗಳ ಅಂತರದಲ್ಲಿ ಚೌಕಾಕಾರವಾದ ವಿನ್ಯಾಸದಲ್ಲಿ ಅಡಕೆ ಗಿಡಗಳಿವೆ. ಅವರು 277 ಅಡಿಗಳ ಅಳ ಉದ್ದಗಲದ ಗುಂಡಿಗಳನ್ನು ತೆಗೆದು ಅಡಕೆ ಸಸಿಗಳನ್ನು ನೆಡುವ ಅಭ್ಯಾಸ ಮಾಡಿದ್ದಾರೆ. ಅಡಿಕೆ ಸಸಿಗಳನ್ನು ಗುಂಡಿಯ ನಾಲ್ಕೂ ಮೂಲೆಗಳಲ್ಲೂ ನೆಡುತ್ತಾರೆ. ಗೊಬ್ಬರ, ನೀರು, ಸೊಪ್ಪುಗಳನ್ನು ಗುಂಡಿಯ ಮಧ್ಯಕ್ಕೆ ನೀಡುತ್ತಾರೆ.

ಮಲೆನಾಡಿನಲ್ಲಿ ಕೃಷಿ ರಕ್ಷಣೆ ಅಗತ್ಯ, ಕಾಡು ಪ್ರಾಣಿಗಳು, ಪಕ್ಷಿಗಳು ಕೃಷಿ ಕ್ಷೇತ್ರದಲ್ಲಿ ಹೆಚ್ಚು ಚಟುವಟಿಕೆ ನಡೆಸುತ್ತವೆ. ಅದಕ್ಕಾಗಿ ತೋಟದ ಸುತ್ತಲೂ ರಾಯರು ನಾಲ್ಕು ಅಡಿ ಎತ್ತರದ 0.4 ಮಿಲಿಮೀಟರ್ ದಪ್ಪದ ತಗಡುಗಳನ್ನು ಬೇಲಿಯಂತೆ ಮಾಡಿ ನಿಲ್ಲಿಸಿದ್ದಾರೆ. ಹಂದಿ, ಮಂಗ, ಜಿಂಕೆ, ಮೊಲ, ಕಬ್ಬೆಕ್ಕು, ನವಿಲು, ಹಾವುಗಳು ಈ ಬೇಲಿಯೊಳಗೆ ಬರಲಾರದು. ಗಾಳಿ ಬೀಸಿದಾಗ ತಗಡುಗಳು ಶಬ್ಧ ಮಾಡುತ್ತವೆ. ಒಂದು ರೀತಿಯ ವಿಚಿತ್ರವಾದ ಶಬ್ದಕ್ಕೆ ಎಲ್ಲರಿಗೂ ಭಯವಾಗುತ್ತದೆ.

ಹವ್ಯಕ ಸಮಾಜದ ಪ್ರಕಾಶ ರಾಯರು ಕುಟುಂಬಸ್ಥರಾಗಿಯೂ ಯಶಸ್ವಿ. ಸೊರಬ ತಾಲ್ಲೂಕಿನ ಕಂಚಿ ಮನೆತನದ ಶಾಂತಾ ಪಿ. ರಾವ್ ಅವರನ್ನು ಮದುವೆಯಾದರು. ಇಬ್ಬರೂ ಪ್ರೀತಿ, ಅನ್ಯೋನ್ಯತೆಯಿಂದ ಜಾನುವಾರು ಹಸಿರು ಗಿಡಗಳ ಜೊತೆ ಬಾಳುವೆ ಮಾಡುತ್ತಾ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದರು. ಹಿರಿಯವರು ವಿದ್ಯಾ, ಅವರ ತಂಗಿ ಮಾನಸ.

**ಸಾಲಿನಲ್ಲಿ ಕೇಂದ್ರ ಸರ್ಕಾರದ ಪ್ರತಿಷ್ಠಿತ ನವೀನ ಮಾದರಿ "ರೈತ ಪ್ರಶಸ್ತಿ"ಕ್ಕೆ (Innovetive Formar Award) ಮತ್ತು "ರಾಷ್ಟ್ರೀಯ ಪಾರಂಪರಿಕ ತಳಿ ಸಂರಕ್ಷಕ" (National Genome Savior Award) ಪ್ರಶಸ್ತಿ ಭಾಜನರಾದ ಪ್ರಕಾಶರಾಯರು ಕೃಷಿಯಲ್ಲಿ ಆಸಕ್ತರಾದ ಸಾವಿರಾರು ಯುವಕರಿಗೆ ಸ್ಫೂರ್ತಿ ಹೊಸ ದಿಕ್ಕನ್ನು ತೋರಿಸುವ ಆಶಾಕಿರಣವಾಗಿದ್ದಾರೆ.**

# ವಿಶ್ವಮಾನ್ಯರ ಶ್ರೇಣಿಯಲ್ಲಿ ಪಂಡಿತಾ ರಮಾಬಾಯಿ ಎಂಬ ಕನ್ನಡತಿ



**ಜನ್ಮದಿನದ ಸಂಸ್ಮರಣೆ (23–4–1858)**

ಭಾರತದ ಸಾಮಾಜಿಕ ಹಿತದೃಷ್ಟಿಯಿಂದ ಪ್ರಾರಂಭವಾದ "ಬೇಟಿ ಬಚಾವೊ, ಬೇಟಿ ಪಢಾವೊ" ಎಂಬ ಆಂದೋಲನವು ಇಂದು ಪ್ರಮುಖ ಸುದ್ದಿಯಾಗಿರುವುದು ನಮಗೆಲ್ಲ ತಿಳಿದಿರುವ ವಿಚಾರ. ನಮ್ಮ ದೇಶದ ಗತ ಚರಿತ್ರೆಯನ್ನು ಅವಲೋಕಿಸಿದಾಗ, 'ಮಹಿಳಾ ಸಬಲೀಕರಣ' ಎಂಬ ಈ ಚಳುವಳಿಗೆ ಪೂರ್ವ ಹಿನ್ನೆಲೆಯಿರುವುದು ಗಮನಕ್ಕೆ ಬರುತ್ತದೆ. ಸಮಾಜದಲ್ಲಿ ಹೊಸ ಹೊಸ ಸಮಸ್ಯೆಗಳು ಸೃಷ್ಟಿಯಾದಂತೆ ಅವುಗಳ ನಿವಾರಣೆಗೆ ಇಂತಹ ಚಳುವಳಿಯು ಅನಿವಾರ್ಯವಾಗಿ ಪರಿಣಮಿಸಿದೆ. ಇಂದಿನ ಸುಧಾರಿತ ಕಾಲಘಟ್ಟದಲ್ಲಿ ನೂರಿನ್ನೂರು ವರ್ಷಗಳ ಹಿಂದಿದ್ದ ಹೀನಾಯ ಸ್ಥಿತಿ ಇಂದಿನ ಮಹಿಳೆಗೆ ಇಲ್ಲವೆಂದು ನಿಖರವಾಗಿ ಹೇಳಬಹುದು. ಭಾರತದಲ್ಲಿ 'ಮಹಿಳಾ ಸಬಲೀಕರಣ' ಎಂದಾಕ್ಷಣ ಥಟ್ಟನೆ ನೆನಪಿಗೆ ಬರುವಂತಹ ಒಂದು ಪ್ರಮುಖ ಹೆಸರು ಪಂಡಿತಾ ರಮಾಬಾಯಿ, ಏಕೆಂದರೆ ಅವರ ಸಂಪೂರ್ಣ ಜೀವನ ಈ ಉದ್ದೇಶ ಸಾಧನೆಗಾಗಿ ಮೀಸಲಾಗಿತ್ತು. (ಅವರ ಜನ್ಮದಿನ : ಎಪ್ರಿಲ್ ತಿಂಗಳ 23, 1858) ನಮ್ಮ ಪ್ರಧಾನ ಮಂತ್ರಿಗಳ ಬೇಟಿ ಬಚಾವೊ... ಘೋಷಣೆಯ ಸಂದರ್ಭದಲ್ಲಿ (ಸಾಮಾನ್ಯ ರೂಢಿಯಂತೆ ಉಲ್ಲೇಖಕ್ಕೆ ಬರಬೇಕಿದ್ದ) ರಮಾಬಾಯಿಯಂಥ ಸಾಧಕಿಯರ ಉಲ್ಲೇಖ ಮಾತ್ರ ಬಂದಿರಲಿಲ್ಲ. ಇದಕ್ಕೆ ಕಾರಣವೂ ಇದೆ. ರಮಾಬಾಯಿ ರಾನಡೆ, ಸಾವಿತ್ರಿ ಬಾಯಿ ಫುಲೆ ಇವರೆಲ್ಲರ ಅಮೂಲ್ಯವಾದ ಸಾಮಾಜಿಕ ಯೋಗದಾನವು ನಮ್ಮ ಪ್ರಧಾನ ಮಂತ್ರಿಗಳಿಗೆ ಗೊತ್ತಿರುವ ಸಾಧ್ಯತೆ ತೀರ ಕಡಿಮೆ. ಏಕೆಂದರೆ ಇದುವರೆಗೆ ಈ ಮಹಿಳಾ ಸಾಧಕಿಯರನ್ನು ಅವರವರ ಸಾಧನೆಗನುಸಾರ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನವೇ ನಡೆದಿಲ್ಲ. ನಮ್ಮ ರಾಜಕಾರಣಿಗಳ ದಿವ್ಯ ನಿರ್ಲಕ್ಷ್ಯ ಇದಕ್ಕೆಲ್ಲ ಕಾರಣ.

ವರ್ಜೀನಿಯಾ ವೂಲ್ಸ್‌ರವರ ಅನುಭವ ಜನ್ಯ ನುಡಿಯೊಂದು ಹೀಗಿದೆ. "ಇತಿಹಾಸದ ಬಹುತೇಕ ಕಡೆಗಳಲ್ಲಿ ಮಹಿಳೆ ಅನಾಮಿಕಳಾಗಿಯೇ ಉಳಿದಿದ್ದಾಳೆ" ಈ ಮಾತನ್ನು ಅಲ್ಲಗಳೆಯಲಾಗದು. ರಮಾಬಾಯಿಯ ಜೀವನವೇ ಇದಕ್ಕೆ ಸ್ಪಷ್ಟ ನಿದರ್ಶನ.

ಕ್ರಿ.ಶ.1885–89ರ ಸಮಯ, ಪಂಡಿತಾ ರಮಾಬಾಯಿಯು ಭಾರತದಲ್ಲಿ ರಾಷ್ಟ್ರ ನಾಯಕತ್ವದ ಪ್ರಮುಖ ಪಾತ್ರ ಹೊತ್ತವರು. ಅವರು ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಮಹಿಳಾ ಸದಸ್ಯೆ. ಹಂಟರ್ ಕಮಿಷನ್ ಎದುರು ಮಹಿಳಾ ಸ್ಥಿತಿಗತಿಗಳ ಕುರಿತು ಸಾಕ್ಷ್ಯ (ಸ್ಥಿತಿಚಿತ್ರಣ) ನೀಡಿದವರು. ಕಾಂಗ್ರೆಸ್ ಅಧಿವೇಶನಗಳಲ್ಲಿ ಸಕ್ರಿಯ ಭಾಗಿದಾರಿ. ಮೇಲಾಗಿ ಭಾರತದ ಮಹಿಳಾ ಸಶಕ್ತೀಕರಣ ಚಳುವಳಿಯಲ್ಲಿ ದೀರ್ಘಕಾಲದವರೆಗೆ (ಕ್ರಿ.ಶ. 1882–1922ರವರೆಗೆ 40 ವರ್ಷ) ಮುಂಚೂಣಿಯಲ್ಲಿದ್ದ ಧೀಮಂತ ನಾಯಕಿ. ಅನ್ಯ ಕ್ಷೇತ್ರಗಳಲ್ಲೂ ಇವರ ಯೋಗದಾನ ಕಡಿಮೆಯೇನಲ್ಲ. ರಮಾಬಾಯಿಯ ಬತ್ತಳಿಕೆಯಲ್ಲಿ ಒಟ್ಟಾರೆಯಾಗಿ ಹತ್ತು ಪ್ರಥಮಗಳೆಂಬ ಹೆಗ್ಗಳಿಕೆ ಹೊಂದಿರುವ ಅಮೋಘ ಸಾಧನೆಯಿದೆ. ಮಹಿಳೆಯು 'ಅಬಲೆ' ಎಂದು ಗುರುತಿಸಿಕೊಂಡಿದ್ದ ಕಾಲಘಟ್ಟದಲ್ಲೇ ಅವರು ಮಾಡಿದಂತಹ ಸಾಧನೆಗಳಿವು. ಅವರ ಈ ಸಾಮಾಜಿಕ ಯೋಗದಾನವನ್ನು ಗುರುತಿಸಿ ಅಂದಿನ ಬ್ರಿಟಿಷ್ ಸರಕಾರ ಇವರಿಗೆ "ಕೈಸರ್ ಇ ಹಿಂದ್" ಎಂಬ ಪ್ರತಿಷ್ಠಿತ ಪ್ರಶಸ್ತಿಯನಿತ್ತು ಗೌರವಿಸಿತ್ತು. ಸುಪ್ರಸಿದ್ಧ ಇತಿಹಾಸ ತಜ್ಞರಾದ ರಾಬರ್ಟ್ ಫ್ರಿಕೆನ್‌ಬರ್ಗ್, "ರಮಾ ಬಾಯಿಯದು ಮಹಾತ್ಮ ಗಾಂಧೀಜಿಗೆ ಸರಿಸಮನಾಗಿ ಪರಿಗಣಿಸಬಹುದಾದ ಒಂದು ಘನ ವ್ಯಕ್ತಿತ್ವ" ಎಂದಿರುವುದೂ ಉಲ್ಲೇಖನೀಯ. ಆದರೆ ಖ್ಯಾತಿ ಮತ್ತು ಪ್ರಚಾರಕ್ಕೊಳಪಟ್ಟಂತೆ ಇವರಿಬ್ಬರ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಗಾಂಧೀಜಿಯ ಹೆಸರಂತೂ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಭಾರತದ ಉದ್ದಗಲ ವಿಶಾಲ ಪಾತಳಿಯಲ್ಲಿ ಪಸರಿಸಿದ ಒಂದು ಹೆಸರಾದರೆ, ರಮಾಬಾಯಿಯ ವ್ಯಕ್ತಿ ಚಿತ್ರಣ ಮಾತ್ರ ಇದಕ್ಕೆ ತದ್ವಿರುದ್ಧ. ಅನ್ಯ ಮಹಿಳಾ ಸಾಧಕಿಯರ ಸ್ಥಿತಿಗತಿಗಳೂ ಇದಕ್ಕೆ ಹೊರತಾಗಿಲ್ಲ. ಹೀಗಿರುವಾಗ ವರ್ಜೀನಿಯಾ ವೂಲ್ಫವರ ಮಾತಿನಲ್ಲಿ ಸತ್ಯಾಂಶವಿರುವುದನ್ನು ಅಲ್ಲಗಳೆಯುವಂತಿಲ್ಲ.

ಜರ್ಮನ್ ಮೂಲದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸ, ಮ್ಯಾಕ್ಸ್ ಮುಲ್ಲರ್, ಇವರು ರಮಾಬಾಯಿಯ ಕುರಿತಾಗಿ ಉದ್ಧರಿಸಿದ್ದ ಮಾತಿದು – "ರಮಾಬಾಯಿಗೆ ಒಂದು ವೇಳೆ ಗಗನದಲ್ಲಿ ಹಾರಾಡುವ ಶಕ್ತಿ ಇರುತ್ತಿದ್ದರೆ ಒಬ್ಬಳೇ ಅನಾಥ ಬಾಲವಿಧವೆಯನ್ನು ರಕ್ಷಿಸುವ ಸಲುವಾಗಿ ಅವರು ದೂರದ ಇಂಗ್ಲೆಂಡಿನಿಂದ (ವಾಯುಮಾರ್ಗದಲ್ಲಿ) ಹಾರಿಬಂದು ಹಿಂದೂಸ್ಥಾನ ತಲುಪುತ್ತಿದ್ದರು". ಈ ಹೇಳಿಕೆಯು ರಮಾ ಬಾಯಿಯ ಸಾಮಾಜಿಕ ಯೋಗದಾನಕ್ಕೆ ಹಿಡಿದ ಕೈಗನ್ನಡಿಯೇ ಸರಿ.

ಅದು ಕ್ರಿ.ಶ 1897ರ ಸಮಯ. ಮಧ್ಯಭಾರತವು ಕಂಡು ಕೇಳರಿಯದ ಕ್ಷಾಮದಿಂದ ನಲುಗಿತು. ಲಕ್ಷಾಂತರ ಸಂಖ್ಯೆಯಲ್ಲಿ ದೇಶವಾಸಿಗಳು ಅಪಾರ ಸಾವು–ನೋವುಗಳಿಗೆ ತುತ್ತಾದರು.

ಇಂತಹ ಆಪತ್ತುಜನಕ ಸ್ಥಿತಿಯಲ್ಲಿ ರಮಾಬಾಯಿಗೆ ಸುಮ್ಮನಿರಲಾಗಲಿಲ್ಲ. ತಡಮಾಡದೆ ಬರಗಾಲ ಪ್ರದೇಶಕ್ಕೆ ಧಾವಿಸಿ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಕ್ಕೆ ಮುಂದಾದರು. ಆಶ್ರಮದಲ್ಲಿ ಆಹಾರ ಧಾನ್ಯದ ಕೊರತೆ, ಇನ್ನಿತರ ಮೂಲ ಸೌಕರ್ಯಗಳ ಕೊರತೆಯ ಹೊರತಾಗಿಯೂ ಎರಡು ಸಾವಿರದಷ್ಟು ನಿರ್ಗತಿಕ ಮಹಿಳೆಯರನ್ನು ತನ್ನ ಆಶ್ರಮಕ್ಕೆ ಕರೆ ತಂದರು. ಅಸಹ್ಯ ರೋಗ ರುಜಿನಗಳಿಂದ ನರಳುತ್ತಿದ್ದ ಆ ನತದೃಷ್ಟ ಮಹಿಳೆಯರನ್ನು ಅವರು ಉಪಚರಿಸಿ ಸಾಂತ್ವನಗೈದ ಆ ಪರಿಯನ್ನು ಚರಿತ್ರೆಯ ಪುಸ್ತಕಗಳಲ್ಲಿ ಓದುವಾಗ ಫ್ಲಾರೆನ್ಸ್ ನೈಟಿಂಗೇಲ್ ಎಂಬ ವಿದೇಶೀ ಮಹಾಮಾತೆಯ ಸೇವಾ ಕೈಂಕರ್ಯವೇ ನೆನಪಾಗುವುದು ಸಹಜ. ಬಹುಶಃ ರಮಾಬಾಯಿಯ ಜನಪರ ಕಾರ್ಯಗಳಲ್ಲೇ ಅತ್ಯಧಿಕ ಸ್ತುತಿಪಾತ್ರ ಸೇವಾ ಕಾರ್ಯವಿದು. ಅವರ ಖೇಡಗಾಂವ್ ಆಶ್ರಮದ ಕಾರ್ಯ ಚಟುವಟಿಕೆಗಳನ್ನು ವೀಕ್ಷಿಸಿದ ಬಾಲಗಂಗಾಧರ ತಿಲಕರೂ ಅದೊಂದು ಸಂದರ್ಭದಲ್ಲಿ ಮೆಚ್ಚುಗೆಯ ಪ್ರತಿಕ್ರಿಯೆಯನ್ನೇ ನೀಡಿದರ್ರು.

ಸಾಮಾಜಿಕ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆಗೈದು ಇತಿಹಾಸದ ಪುಟದಲ್ಲಿ ದಾಖಲಾತಿ ಪಡೆದ ರಮಾಬಾಯಿಗೆ ಮನದಾಳದ ನಮನ.

**– ಅನಂತ ಶಾಸ್ತ್ರೀ ಡೋಂಗ್ರೆ ಪ್ರತಿಷ್ಠಾನ–ಮಾಳ**


**ಜಾಹಿರಾತು**

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,**
**ಬ್ಯಾಂಕ್ ಕಾಲೋನಿ, ಬೆಂಗಳೂರು–560 050.**

## ಸ್ಥಳದ ಬಾಡಿಗೆ ಇರುವುದಿಲ್ಲ

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,**
**ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,**
**ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು**
**ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**
**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**
**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**
**ದೂರವಾಣಿ : 080–26793054 ಮೊಬೈಲ್ 8277433666**

# ದಡಗ ಗ್ರಾಮದ ಇತಿಹಾಸ

ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ದೇವಿಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ "ದಡಗ" ಗ್ರಾಮವು. ತಾಲ್ಲೂಕು ಕೇಂದ್ರವಾದ ನಾಗಮಂಗಲದಿಂದ 30 ಕಿ.ಮೀ. ದೂರ ಮತ್ತು ಹಾಸನ ಬೆಂಗಳೂರು ಹೆದ್ದಾರಿಯಲ್ಲಿ ಬರುವ ಬೆಳ್ಳೂರು ಕ್ರಾಸ್ ನಿಂದ 8 ಕಿ.ಮೀ. ದೂರದಲ್ಲಿದೆ.

ದಡಗಾ ಗ್ರಾಮದಲ್ಲಿ ಲಭ್ಯವಿರುವ ಶಾಸನಗಳ ಪ್ರಕಾರ ಗ್ರಾಮದ ಇತಿಹಾಸವು ಹೊಯ್ಸಳರ ಪ್ರಸಿದ್ಧ ರಾಜ "ವಿಷ್ಣುವರ್ಧನನ" ಕಾಲಕ್ಕೆ ಕೊಂಡೋಯ್ಯುತ್ತದೆ. ದಡಗನ ಕೆರೆ ಕೊಡಿ ಬಳಿ ಇರುವ "ಕೋಡಿಹಳ್ಳಿಯು" ಹಿಂದೊಮ್ಮೆ ಅಗ್ರಹಾರವಾಗಿತ್ತು. ಈ ಕೆರೆ ಉತ್ತರ ಭಾಗದಲ್ಲಿ "ದಡಗ"ಗ್ರಾಮವಿದೆ.

"ದಡಗ ಗ್ರಾಮದ ಹೆಸರು ಗಂಗರ ಅರಸನಾದ" ದಡಿಗನ ನೆನಪನ್ನು ತರುವಂತಿದೆ. ದಡಗ ಗ್ರಾಮದ ಶ್ರೀ ಯೋಗಾ ನರಸಿಂಹ ಸ್ವಾಮಿ ಮತ್ತು ಕೋಡಿಹಳ್ಳಿಯ ದಡಿಗೆಶ್ವರ ದೇವಾಲಯಗಳು ಇಟ್ಟಿಗೆ ಗೋಡೆಯಿಂದ ಕಟ್ಟಲ್ಪಟ್ಟಿವೆ. ಹೊರ ನೋಟಕ್ಕೆ ಇವುಗಳ ರಚನೆ ಇತ್ತೀಚಿನದಂತೆ ಕಂಡುಬಂದರೂ ದೇವಾಲಯದ ಒಳಗಿನ ಕಂಬಗಳು ಅವುಗಳ ನಡುವಿನ ದೊಡ್ಡ ಅಂಕಣದ ಚಾವಣಿಯಲ್ಲಿನ ಉಬ್ಬು ರೀತಿಯಲ್ಲಿ ಬಿಡಿಸಿರುವ ಅರಳಿದ ಪದ್ಮ ಮೊದಲಾದ ಕೆತ್ತನೆಗಳು ಗಂಗರ ಕಾಲದ ಪ್ರಾರಂಭಿಕ ಕಾಲಘಟ್ಟದ ರಚನೆಯನ್ನು ಹೋಲ್ಲುತ್ತದೆ.

ಈ ದೇವಾಲಯದ "ಶ್ರೀ ಯೋಗಾ ನರಸಿಂಹನ" ವಿಗ್ರಹವು ಅತ್ಯಂತ ಸುಂದರ ರೂಪದಲ್ಲಿದ್ದು. ಭಕ್ತಾದಿಗಳ ಕಣ್ಮನ ಸೆಳೆಯುತ್ತದೆ.

ಮಂಡ್ಯ ಜಿಲ್ಲೆ ಶಾಸನ ಸಂಪುಟ 7 ರಲ್ಲಿ ಉಲ್ಲೇಖವಾಗಿರುವ ಶಾಸನಗಳು ಸಂಖ್ಯೆ.65.66.68.70 ಗ್ರಾಮದ ಐತಿಹಾಸಿಕ ಮಹತ್ವವನ್ನು ಸಾರುತ್ತಿವೆ.

ಈ ಶಾಸನಗಳಲ್ಲಿ ಗ್ರಾಮದ "ಪಂಚ ಕೂಟ ಬಸದಿ" (ಶಾಸನ ಸಂಖೆ 68) ಹೊಯ್ಸಳ ದೊರೆ ವಿಷ್ಣುವರ್ಧನ ಮಹಾಪ್ರಧಾನ ಮರಿಯನೆ. ದಂಡನಾಯಕ ಭರ್ತಿಮಯ್ಯ ಇವರು ಮಣಿಭದ್ರ ಸಿದ್ಧಾಂತದೇವರ ಶಿಷ್ಯರಾದ ಮೇಘ ಚಂದ್ರ ಸಿದ್ದಾಂತ ದೇವ ಇವರ ಮಾರ್ಗದರ್ಶನದಲ್ಲಿ ಈ ಬಸದಿಯನ್ನು ನಿರ್ಮಿಸಿದ ಮತ್ತು ನಿರ್ವಹಣೆ ಸಲುವಾಗಿ ನೀಡಿದ ದಾನಗಳ ವಿವರವಿದೆ.

ಮುಂದುವರೆದು ಗ್ರಾಮದ ಮತ್ತೊಂದು ಐತಿಹಾಸಿಕ ದೇವಾಲಯ "ಚನ್ನಕೇಶವ ದೇವಾಲಯ" ಈ ದೇವಾಲಯದ ಉತ್ತರ ದಿಕ್ಕಿನ ತೊಲೆಯ ಮೇಲೆ ಶಾಸನ ಸಂಖ್ಯೆ 66. ಶ್ರೀ ಲಕ್ಷ್ಮೀ ದೇವಾಲಯ ನಿರ್ಮಾಣ ವಿವರ (ಶ್ರೀ ಕಾಳಉಕ್ತಿ ನಾಮ ಸಂವತ್ಸರ. ಅಶ್ವಯುಜ ಮಾಸ) ಸೂಚಿಸುತ್ತದೆ.

ಇದೇ ಕೇಶವ ದೇವಾಲಯದ ಪಶ್ಚಿಮ ದಿಕ್ಕಿನ ತೊಲೆಯ ಮೇಲಿನ ಶಾಸನ ಸಂಖೆ 67 ಊರಿನ ಸಮಸ್ತ ಮಹಾಜನರ ಸಮ್ಮುಖದಲ್ಲಿ ಈ ದೇವಾಲಯಕ್ಕೆ ಸೇರಿದ ಒಂದು ಮನೆ ಮತ್ತು ಕೆಲವು ಭೂಭಾಗಗಳನ್ನು. 5 ಪಣಗಳಿಗೆ ಮಾರಾಟ ಮಾಡಿ ಬಂದ ಹಣದಲ್ಲಿ ಮಾದೇವ (ಈಶ್ವರ )ದೇವಾಲಯದ ವಿಮಾನ ಗೋಪುರ ನಿರ್ಮಾಣ ಮಾಡಿದ ಉಲ್ಲೇಖವಿದೆ. ಈ ಶಾಸನ 13 ರಿಂದ 14 ನೆ ಶತಮಾನಕ್ಕೆ ಸಂಭಂದಿಸಿದ್ದಾಗಿದೆ. ಶಾಸನ ಲಿಪಿಕಾರ "ಕಲಿದೇವ"ನ ಮಗನಾದ "ಲಚ್ಚಣ್ಣ" ಎಂಬ ದಾಖಲೆ ಇದೆ.

ಇದೇ ದೇವಾಲಯದ ನವರಂಗ ಮಂಟಪದ ನಾಲ್ಕನೇ ಅಂಕಣದ ತೊಲೆಯ ಮೇಲೆ ಕ್ರಿ.ಶ. 1400 ರ ಶಾಸನ ಪಟ್ಟಂಗಿ ವೀರಪಿಳ್ಳನ ಪತ್ನಿ ತನಗೆ ದೇವಾಲಯ ನೀಡಿದ್ದ ಜಮೀನನ್ನು ಮಾರಿ ಬಂದ ಹಣದಿಂದ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಕಲ್ಲಿನ ಮಂಟಪ ನಿರ್ಮಿಸಿದ ಉಲ್ಲೇಖವಿದೆ.

ಒಟ್ಟಿನಲ್ಲಿ ಈ ಗ್ರಾಮವು ಶೈವ. ವೈಷ್ಣವ. ಮತ್ತು ಜೈನ ಸಮುದಾಯಗಳ ಸಮನ್ವಯ ಸಾರುವ ಐತಿಹಾಸಿಕ ಗ್ರಾಮ ಎಂಬುದನ್ನು ಶಾಸನಗಳು ಸಾರುತ್ತಿದೆ.



**ಶ್ರೀ ನಟರಾಜ ಪಂಡಿತ್‌ರವರು ಮೈಸೂರಿನವರಾಗಿದ್ದು, ಹವ್ಯಾಸಿ ಬರಹಗಾರರು ಹಾಗೂ ನಿವೃತ್ತ ರಾಜ್ಯ ಸರ್ಕಾರಿ ಉದ್ಯೋಗಿ. ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಲ್ಲಿ 'ಲೆಕ್ಕ ಪರಿಶೋಧನೆ ಅಧಿಕಾರಿ'ಯಾಗಿ (ಆರ್ ಟಿ ಡಿ ಆಡಿಟ್ ಆಫೀಸರ್) ಕಾರ್ಯನಿರ್ವಹಿಸಿದ್ದಾರೆ.**

**ಐತಿಹಾಸಿಕ ದೇವಾಲಯಗಳ ಕುರಿತು ವಿಶೇಷ ಕಾಳಜಿ ಇವರು ಆ ದೇವಸ್ಥಾನಗಳ ಸಂರಕ್ಷಣೆಗೆ ಪ್ರಯತ್ನಿಸುತ್ತಿದ್ದು, 'ಹಾಸನ ಜಿಲ್ಲಾ ಐತಿಹಾಸಿಕ ಸ್ಮಾರಕಗಳ ಸಂರಕ್ಷಣಾ ವೇದಿಕೆ' ಅನ್ನುವ ತಂಡದೊಂದಿಗೆ ಈವರೆಗೆ 8 ದೇವಾಲಯಗಳನ್ನು ಸಂರಕ್ಷಿಸಿದ್ದಾರೆ.**

**ಕನ್ನಡ ಭಾಷೆ ಇತಿಹಾಸ, ಕಲೆ, ಸಂಸ್ಕೃತಿಯಲ್ಲಿ ತುಂಬಾ ಆಸಕ್ತರಾಗಿದ್ದು, ಕನ್ನಡ ಭಾಷಾ ಹೋರಾಟ 'ಗೋಕಾಕ್ ವರದಿ' ಅನುಷ್ಠಾನ ಸಲುವಾಗಿ ಜೈಲು ವಾಸವನ್ನು ಸಹ ಅನುಭವಿಸಿದ್ದಾರೆ.**

# ನಟ ಭಯಂಕರ ಎಂ.ಎನ್. ಗಂಗಾಧರ ರಾಯರು

**– ಸುರೇಶ್ ಮೂನ**



ಉಲುಚುಕಮ್ಮೆಯವರಾದ ಎಂಎನ್ ಗಂಗಾಧರರಾಯರು ನಮ್ಮ ನಾಡಿನ ರಂಗಭೂಮಿಯ ಇತಿಹಾಸದಲ್ಲಿ ಒಂದು ದಂತ ಕಥೆಯಾಗಿ ಉಳಿದ ಮಹನೀಯರು. ಉಲುಚುಕಮ್ಮೆ ಮಹಾಸಭಾ ತಮ್ಮ ಸಾಧಕರ ಮಾಲೆ ಸರಣಿಯಲ್ಲಿ ರಾಯರ ಬಗ್ಗೆಯೂ ಒಂದು ಕೃತಿಯನ್ನು ಹೊರ ತಂದಿದೆ. ಇದನ್ನು ಬರೆದವರು ರಾಯರ ಮನೆತನದವರೂ ಸಾಹಿತಿಗಳು, ನನ್ನ ಬಂಧು ಹಾಗೂ ಆತ್ಮೀಯ ಮಿತ್ರರೂ ಆಗಿರುವ ಶ್ರೀ ನೇಲ ರಾಮಮೂರ್ತಿಯವರು. ರಾಯರ ಜೀವನ ಮತ್ತು ಸಾಧನೆಯನ್ನು ತಿಳಿಸುವುದಲ್ಲದೆ ಈ ಕೃತಿಯು ರಾಯರ ನಾಟಕದ ಕೆಲವು ಅಪರೂಪದ ಚಿತ್ರಗಳನ್ನು ಸಹ ಒಳಗೊಂಡಿದೆ. ಈ ಕೃತಿಯನ್ನು ಪ್ರಮುಖ ಆಕರವಾಗಿ ಇಲ್ಲಿ ಬಳಸಲಾಗಿದೆ. ಶ್ರೀ ನೇಲ ರಾಮಮೂರ್ತಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ರಾಯರ ಅಳಿಯ ಎಂ. ಸುಬ್ಬರಾಯರು ಸಹ ರಂಗಭೂಮಿಯ ಮಹಾನ್ ಕಲಾವಿದರೇ. ಆಗಿನ ಕಾಲಕ್ಕೆ ಈ ಮಾವ ಅಳಿಯ ಜೋಡಿ ರಂಗ ದಿಗ್ಗಜರು ಎಂದೇ ಪ್ರಸಿದ್ಧರಾಗಿದ್ದರು. ಶ್ರೀ.ನೇಲ ರಾಮಮೂರ್ತಿ ಅವರು ಸುಬ್ಬರಾಯರ ಜೀವನ ಮತ್ತು ಸಾಧನೆಯ ಬಗ್ಗೆಯೂ ಬರೆದಿದ್ದಾರೆ.

ಇನ್ನು,ನಾನು{ ಈ ಬರಹದ ಲೇಖಕ} ಗಂಗಾಧರ ರಾಯರ ಮನೆತನದವನೇ. ನನ್ನ ಹೆಸರುಎಂಎನ್ ನಿಂದಲೇ ಪ್ರಾರಂಭವಾಗುತ್ತದೆ .ಅದನ್ನೇ ನಾನು ಸುರೇಶ್ ಮೂಕನಹಳ್ಳಿ ಪಟ್ನ ನರಸಿಂಹಮೂರ್ತಿ ಅಂದರೆ ಸುರೇಶ್ ಮೂನ ಎಂದು ಮಾಡಿಕೊಂಡಿದ್ದೇನೆ. ನಮ್ಮ ಮನೆತನದ ಈ ಮಹಾನ್ ಪ್ರತಿಭೆಯ ಬಗ್ಗೆ ವಿಪ್ರ ನುಡಿ ಪತ್ರಿಕೆಯಲ್ಲಿ ಮರೆಯಲಾಗದ ಮಹನೀಯರು ಸರಣಿಯಲ್ಲಿ ಬರೆಯಲು ನನಗೆ ಹೆಮ್ಮೆ ಎನಿಸುತ್ತದೆ.

ಗಂಗಾಧರ ರಾಯರು 1888ರ ಏಪ್ರಿಲ್ ಮೂರನೇ ತಾರೀಕಿನಂದು ತಂದೆ ನರಸಿಂಹಯ್ಯ ತಾಯಿ ಸಾಕಮ್ಮ ಇವರ ಮೂರನೇ ಮಗನಾಗಿ ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಮೂಕನಹಳ್ಳಿ ಪಟ್ನ ಗ್ರಾಮದಲ್ಲಿ ಜನಿಸಿದರು. ಚಿಕ್ಕಂದಿನಲ್ಲಿ ತಂದೆಯನ್ನು ಕಳೆದುಕೊಂಡ ಇವರು ದೊಡ್ಡಣ್ಣ ನರಸಿಂಹಯ್ಯ ಮತ್ತು ಅತ್ತಿಗೆ ನರಸಮ್ಮ ಅವರ ಪ್ರೀತಿ ವಾತ್ಸಲ್ಯದಲ್ಲಿ ಬೆಳೆದರು.ತಾಯಿ ಮತ್ತು ಊರಿನ ಜನತೆ ಇವರನ್ನು ಭೋಜ ಎಂದು ಪ್ರೀತಿಯಿಂದ ಕರೆಯುತ್ತಿದ್ದರು.

ಊರಿನ ಕೂಲಿ ಮಠದಲ್ಲಿ ಕಲಿಕೆ ಪ್ರಾರಂಭವಾಗಿ ನಂತರ ಗುಬ್ಬಿಯ ವೆಸ್ಲಿಯನ್ ಶಾಲೆಯಲ್ಲಿ ಶಿಕ್ಷಣ ಮುಂದುವರಿಸಿದರು. ಆದರೂ ಇವರಿಗೆ ಔಪಚಾರಿಕವಾದ ವಿದ್ಯೆಯ ಬಗ್ಗೆ ಆಸಕ್ತಿ ಹುಟ್ಟಲಿಲ್ಲ. ಲೋಯರ್ ಸೆಕೆಂಡರಿ ಪಾಸ್ ಆದ ನಂತರ ತಮ್ಮ ನೆಂಟರಾದ ಶ್ರೀ ವೆಂಕಟನಾರಾಯಣ ಜೋಯಿಸ್ ಅವರಿಂದ ಸಂಗೀತ ಕಲಿಯಲಾರಂಭಿಸಿದರು. ಅದರೊಂದಿಗೆ ರಂಗಭೂಮಿಯ ಸೆಳೆತವು ಪ್ರಾರಂಭವಾಗಿತ್ತು

ತುಮಕೂರಿನ ಪ್ರಸಿದ್ಧ ವಕೀಲ ಬಿದರೆ ವೆಂಕಟ ನರಸಯ್ಯ ಅವರ ಮನೆ ಆಗ ಸಂಗೀತ ವಿದ್ವಾಂಸರುಗಳಿಂದ ತುಂಬಿ ತುಳುಕುತ್ತಿತ್ತು. ವೆಂಕಟನಾರಾಯಣ ಜೋಯಿಸರೊಂದಿಗೆ ರಾಯರು ಈ ಕಲಾ ಪ್ರಪಂಚವನ್ನು ಪ್ರವೇಶಿಸಿದರು. ಇಲ್ಲಿಯೇ ನಾಟಕದ ಕಂದಪದ್ಯ, ಸೀಸಪದ್ಯ ಮುಂತಾದವುಗಳನ್ನು ಆಸಕ್ತಿಯಿಂದ ಕಲಿತರು. ಪಿಟೀಲ್ ವಿದ್ವಾನ್ ಪುಟ್ಟಯ್ಯನವರಿಂದ ಪಿಟೀಲಿನ ಶಿಕ್ಷಣವು ದೊರೆಯಿತು. ಅಲ್ಲಿಗೆ ಬರುತ್ತಿದ್ದ ಹಿರಿಯ ಕಲಾವಿದರ ಸಂಗೀತ ಕಚೇರಿಗಳು, ನೃತ್ಯ ಪ್ರದರ್ಶನಗಳು ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ಇವರನ್ನು ನಾಟಕದ ಕಡೆಗೆ ಮತ್ತಷ್ಟು ಸೆಳೆದಿತ್ತು.

ಈ ಮಧ್ಯೆ ಸೀತಮ್ಮ ಎಂಬ ಅನುರೂಪಳಾದ ಕನ್ಯೆಯೊಂದಿಗೆ ವಿವಾಹವೂ ಆಯಿತು. ಜೀವನೋಪಾಯಕ್ಕಾಗಿ ಅನಿವಾರ್ಯವಾಗಿ ಪೊಲೀಸ್ ಇಲಾಖೆಗೆ ನೌಕರಿಗಾಗಿ ಸೇರಿದರು. ಆದರೆ ಈ ಉದ್ಯೋಗ ಅವರಿಗೆ ಸರಿ ಬೀಳಲಿಲ್ಲವಾಗಿ ಅಲ್ಲಿಂದ ಹೊರಬಂದು ಸ್ವತಂತ್ರ ಜೀವನವನ್ನು ಪ್ರಾರಂಭಿಸಿದರು.

ಇವರದು ಆರಡಿ ಎತ್ತರದ ಕಟ್ಟುಮಸ್ತಾದ ಮೈಕಟ್ಟು. ಊರಿನ ತೇರಿನ ಚಕ್ರಕ್ಕೆ ತಡೆಗಾಗಿ ಬಳಸುತ್ತಿದ್ದ ಬೃಹದಾಕಾರದ ಕಲ್ಲಿನ ಗುಂಡನ್ನು ಅನಾಮತ್ತಾಗಿ ಎತ್ತಿ ಹಿಡಿಯುತ್ತಿದ್ದರು. ಇಂತಹ ಇನ್ನು ಕೆಲವು ಸಾಹಸ ಕೃತ್ಯಗಳಿಂದಾಗಿ ಪೈಲ್ವಾನ್ ಎಂದೇ ಪ್ರಸಿದ್ಧರಾಗಿಬಿಟ್ಟಿದ್ದರು. ಆಕರ್ಷಕ ವ್ಯಕ್ತಿತ್ವ, ಬಲವಾದ ಮೀಸೆ, ನಾಟಕಕ್ಕೆ ಹೇಳಿ ಮಾಡಿಸಿದಂತಹ ಶರೀರ. ಶಾರೀರವು ಬಲು ಜೋರು.

ಅದಕ್ಕೆ ಅನುಗುಣವಾಗಿ ಖ್ಯಾತರಾಗಿದ್ದ ಸೀತಪ್ಪನವರ ಶ್ರೀ ಸೀತಾಮನೋಹರ ನಾಟಕ ಮಂಡಳಿಗೆ ಸೇರುವ ಅವಕಾಶ ದೊರೆಯಿತು. ದೊರೆತ ಸಣ್ಣ ಪುಟ್ಟ ಪಾತ್ರಗಳನ್ನು ಅಚ್ಚುಕಟ್ಟಾಗಿ

ನಿರ್ವಹಿಸಿದರು. ಮುಂದೆ ಮಳವಳ್ಳಿ ಸುಬ್ಬಣ್ಣನವರಿಂದ ನಾಟಕದಲ್ಲಿ ಬಲರಾಮನ ಪಾತ್ರ ಮಾಡಲು ಆಹ್ವಾನ ದೊರಕಿತು. ಭವ್ಯ ಅಲಂಕಾರದೊಡನೆ ರಂಗಪ್ರವೇಶ ಮಾಡಿದಾಗ ಅವರ ಅದ್ಭುತವಾದ ಆಕೃತಿ ಮತ್ತು ಕಂಚಿನ ಕಂಠ ಪ್ರೇಕ್ಷಕರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಇಲ್ಲಿಂದ ರಾಯರ ರಂಗಭೂಮಿಯ ಭಾಗ್ಯದ ಬಾಗಿಲು ತೆರೆಯಿತು.

1915 ರಲ್ಲಿ ರಾಯರು ಗುಬ್ಬಿ ಕಂಪನಿಯನ್ನು ಸೇರಿದರು. ಕಂಸ, ಯಮ, ಹಿರಣ್ಯಕಶಿಪು, ರಾವಣ ಮುಂತಾದ ಧೀರೋದಾತ್ತ, ರೌದ್ರ ಪಾತ್ರಗಳ ನಿರ್ವಹಣೆಯಲ್ಲಿ ಯಾರೂ ಸಾಟಿ ಇಲ್ಲದ ರೀತಿಯಲ್ಲಿ ನೈಜ ನಟನೆ ಇವರದಾಗಿತ್ತು. ಯಮನ ಪಾತ್ರ ಮಾಡುವಾಗ ನಿಜವಾದ ಕೋಣನ ಮೇಲೆಯೇ ಕುಳಿತು ರಂಗಪ್ರವೇಶ ಮಾಡುತ್ತಿದ್ದರು. ಅಂತಹ ಒಂದು ಸನ್ನಿವೇಶದಲ್ಲಿ ಪ್ರೇಕ್ಷಕ ವರ್ಗದಲ್ಲಿದ್ದ ತುಂಬು ಗರ್ಭಿಣಿಗೆ ಪ್ರಸವ ವೇದನೆ ಪ್ರಾರಂಭವಾದ ಸಂದರ್ಭವನ್ನು ಕಂಡ ಕೆಲವು ಹಿರಿಯರು ಇಂದಿಗೂ ಆಶ್ಚರ್ಯದಿಂದ ನೆನಪಿಸಿಕೊಳ್ಳುತ್ತಾರೆ. ಭಕ್ತ ಪ್ರಹ್ಲಾದ, ಪ್ರಹ್ಲಾದ ಚರಿತ್ರೆ, ಕಂಸ ವಧೆ, ಶ್ರೀ ಕೃಷ್ಣ ಲೀಲಾ, ಶ್ರೀ ರಾಮಾಂಜನೇಯ ಯುದ್ಧ, ಶರಭ ಲೀಲೆ ಇವೆಲ್ಲ ಇವರು ಪಾತ್ರವಹಿಸಿದ ಕೆಲವು ಪ್ರಸಿದ್ಧ ನಾಟಕಗಳು.

ಹಿರಣ್ಯಕಶಿಪು ಪಾತ್ರದಲ್ಲಿ ತಂದೆಯಾಗಿ ಮಗನನ್ನು ತಿದ್ದುವ ವಾತ್ಸಲ್ಯ ಭಾವ, ಮಗನಿಗೆ ವಿಷ ಕುಡಿಸು ಎಂದು ಹೆತ್ತ ತಾಯಿಗೆ ಹೇಳುವಾಗ ಹೊರಗೆ ಕೋಪ, ಒಳಗೆ ಸಂಕಟ, ಮಗನನ್ನು ಎಲ್ಲಿಹನು ನಿನ್ನ ಹರಿ ಎಂದು ಆಕ್ರೋಶದಿಂದ ಪ್ರಶ್ನಿಸುವ ಪ್ರಸಂಗ, ಸಂಪೂರ್ಣ ರಾಮಾಯಣದಲ್ಲಿ ರಾವಣನಾಗಿ ಮಾತೃಭಕ್ತಿ ಮತ್ತು ಅದರೊಂದಿಗೆ ವೀರಾವೇಶ, ಗಂಡನಾಗಿ ಮಂಡೋದರಿಯ ಭಕ್ತಿಗೆ ಒಲಿಯುವ ಸನ್ನಿವೇಶ, ರಾವಣ– ಹನುಮಂತರ ವಾಗ್ವಾದ ಈ ಎಲ್ಲಾ ಪ್ರಸಂಗಗಳಲ್ಲೂ ರಾಯರದ್ದು ಅತ್ಯಂತ ಪ್ರಬುದ್ಧ ಮತ್ತು ಮನೋಜ್ಞ ಅಭಿನಯ ಆಗಿರುತ್ತಿತ್ತು. ರಾಯರು ಪರಕಾಯ ಪ್ರವೇಶ ಮಾಡಿ ಬಿಟ್ಟಿದ್ದಾರೇನೋ ಎಂಬಷ್ಟು ಸಹಜವಾಗಿರುತ್ತಿತ್ತು.

ರಾಯರಿಗೂ ಮುಂಚೆ ಹಿರಣ್ಯಕಶಿಪು ಪಾತ್ರದಲ್ಲಿ ಪ್ರಸಿದ್ಧರಾಗಿದ್ದವರು ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರು. ಒಮ್ಮೆ ಅವರು ರಾಯರ ಹಿರಣ್ಯಕಶಿಪು ಪಾತ್ರವನ್ನು ನೋಡಲು ಪ್ರೇಕ್ಷಕರಾಗಿ ಬಂದು ಕುಳಿತರು. ನಾಟಕ ಮುಗಿಯುತ್ತಿದ್ದಂತೆ ನೇರವಾಗಿ ಗ್ರೀನ್ ರೂಮಿಗೆ ಬಂದು ರಾಯರ ನಟನೆಯ ಪ್ರಬುದ್ಧತೆಯನ್ನು ಮೆಚ್ಚಿ ಆಶೀರ್ವದಿಸಿದರು. ರಾಯರುವಿನಮ್ರತೆಯಿಂದ 'ನೀವು ನನ್ನ ಗುರುಗಳು. ನಿಮ್ಮನ್ನು ನೋಡಿ ನಾನು ಈ ಕಲೆಯನ್ನು ಕಲಿತಿದ್ದೇನೆ' ಇಂದು ನಮಸ್ಕರಿಸಿದರು.

ಇವರು ಕೋಣನ ಮೇಲೆ ರಂಗಪ್ರವೇಶ ಮಾಡುವ ದೃಶ್ಯದಷ್ಟೇ ಪ್ರಸಿದ್ಧ ಮತ್ತು ಜನಪ್ರಿಯವಾಗಿದ್ದು ಪ್ರಹ್ಲಾದ ಚರಿತ್ರೆ ನಾಟಕದಲ್ಲಿ 14–15 ವರ್ಷದ ಬಾಲ ಕಲಾವಿದ ಪ್ರಹ್ಲಾದನನ್ನು ಒಂದೇ ಕೈಯಲ್ಲಿ ಎತ್ತಿ ಹಿಡಿಯುವ ದೃಶ್ಯ. ಹಿರಣ್ಯಕಶಿಪುವಿನ ಪಾತ್ರಕ್ಕೆ ತಕ್ಕಂತೆ ದೈತ್ಯಶಕ್ತಿ ಅವರ ಧಮನಿಗಳಲ್ಲಿ ಪ್ರವಹಿಸಿ ಬಿಡುತ್ತಿತ್ತು . ಪ್ರೇಕ್ಷಕರಲ್ಲಿ ಸಂಚಲನ ಉಂಟು ಮಾಡುತ್ತಿತ್ತು.. ಸದಾರಮೆ ನಾಟಕದಲ್ಲಿ ವೀರಣ್ಣನವರು ಆದಿಮೂರ್ತಿಯ ಪಾತ್ರದಲ್ಲಿ ಇದ್ದರೆ ಇವರು ತಂದೆಯಾಗಿ ಹಾಸ್ಯಪಾತ್ರವನ್ನು ಗಂಭೀರ ಪಾತ್ರಗಳಷ್ಟೇ ಸಹಜವಾಗಿ ನಿರ್ವಹಿಸಿದ್ದಾರೆ.

1918 ರಲ್ಲಿ ಒಮ್ಮೆ ಕ್ಯಾಂಪ್ ಒಂದರ ನಾಟಕದಲ್ಲಿ ಹಿರಣ್ಯಕಶಿಪು ಪಾತ್ರ ವಹಿಸುತ್ತಿದ್ದರು. ಆಗ ವೀರಣ್ಣನವರಿಗೆ ರಾಯರ ಪತ್ನಿ ನಿಧನರಾದ ಸುದ್ದಿ ಟೆಲಿಗ್ರಾಂ ಮೂಲಕ ಬಂದಿತ್ತು. ಅನಿವಾರ್ಯವಾಗಿ ವೀರಣ್ಣನವರು ಕಾಗದವನ್ನು ರಾಯರ ಕೈಗಿತ್ತರು. ಅದನ್ನು ನೋಡಿ ಗಟ್ಟಿಯಾದ ಉಂಡೆ ಮಾಡಿ ತಮ್ಮೆಲ್ಲ ದುಃಖವನ್ನು ಅದುಮಿಟ್ಟು ಪಾತ್ರಕ್ಕೆ ಯಾವ ಕುಂದು ಬರದಂತೆ ನಾಟಕವನ್ನು ಮುಗಿಸಿ ಕೊಟ್ಟರು. ಇದು ರಾಯರಿಗೆ ತಮ್ಮ ಮನಸ್ಸಿನ ಮೇಲೆ ಇದ್ದ ನಿಯಂತ್ರಣದ ಪ್ರತೀಕವಾಗಿದೆ. ರಾಯರು ಬೇರೆ ಕಂಪನಿಗಳಲ್ಲಿ ನಟಿಸಿ ಅವರ ಯಶಸ್ಸಿಗೂ ಕಾರಣವಾಗಿದ್ದಾರೆ.

ರಾಯರು ಶ್ರೀ ಲಕ್ಷ್ಮೀಕಾಂತ ವಿಲಾಸ ನಾಟಕ ಸಭಾ ಮತ್ತು ಶ್ರೀ ಲಲಿತ ಕಲಾ ವರ್ಧಿನಿ ನಾಟಕ ಸಭಾ ಎಂಬ ಎರಡು ಸ್ವಂತ ಕಂಪನಿಗಳನ್ನು ನಡೆಸಿದ್ದರು. ಈ ಪ್ರಯತ್ನದಲ್ಲಿ ಯಶಸ್ಸನ್ನು ಕಂಡರು. ಹಾಗೆ ನಷ್ಟವನ್ನು ಅನುಭವಿಸಿದರು. ಯಶಸ್ಸು ಕಂಡಾಗ ಹಿಗ್ಗದೆ ಕಷ್ಟ ಪರಿಸ್ಥಿತಿಯಲ್ಲಿ ಕುಗ್ಗದೆ ಇರುವ ಸಮಚಿತ್ತ ಭಾವವನ್ನು ಬೆಳೆಸಿಕೊಂಡಿದ್ದರು.

ಸಮಾಜದ ಒಳಿತಿನ ಬಗ್ಗೆ ಇವರಲ್ಲಿದ್ದ ನಿಷ್ಕಲ್ಮಶ ಚಿಂತನೆ, ಕಾಳಜಿ ಇವುಗಳನ್ನು ವ್ಯಕ್ತಪಡಿಸುವ ಒಂದು ನಿದರ್ಶನ ಇದು :

ಒಮ್ಮೆ ಚಿತ್ರದುರ್ಗದಲ್ಲಿ ಕ್ಯಾಂಪ್ ಮಾಡಿದ್ದಾಗ ಅಲ್ಲಿ ಮಳೆ ಬರದೆ ಜನರು ಸಂಕಟಕ್ಕೆ ಒಳಗಾಗಿದ್ದನ್ನು ಕಂಡು ರಾಯರ ಮನಸ್ಸು ಕರಗಿತು. ವಿರಾಟ ಪರ್ವ ಓದಿದರೆ ಮಳೆ ಬರುವುದೆಂಬ ನಂಬಿಕೆ ಪ್ರಚಲಿತವಾಗಿದ್ದರಿಂದ ಕೂಡ್ಲಿ ಶೃಂಗೇರಿ ಮಠದ ಸ್ವಾಮಿಗಳ ಸಮ್ಮುಖದಲ್ಲಿ ವೈದಿಕ ಧರ್ಮವನ್ನು ನಿಷ್ಠೆಯಿಂದ ಅನುಸರಿಸುತ್ತ ಬಂದಿದ್ದ ರಾಯರು ವಿರಾಟ ಪರ್ವದ ಪದ್ಯಭಾಗವನ್ನು ಬೆಳಗಿನಿಂದ ಸಂಜೆಯವರೆಗೂ ಸುಶ್ರಾವ್ಯವಾಗಿ ಓದಿದರು.

ಸಂಜೆಯ ವೇಳೆಗೆ ಮೋಡ ಕವಿದು ಮಿಂಚಿನಿಂದ ಕೂಡಿದ ಮಳೆ ಸುರಿದು ಜನ ಹಿಗ್ಗಿ ಮಳೆಯಲ್ಲಿ ನೆನೆದು ಸಂತೋಷ ಪಟ್ಟರು. ಆ ರಾತ್ರೆ ಎಲ್ಲಾ ಮಳೆ ಸುರಿದು ಅಕ್ಕಪಕ್ಕದ ಕೆರೆಗಳು ತುಂಬಿದವು. ನಾಟಕದ ಗಂಗಾಧರಪ್ಪ ಮಳೆ ತರಿಸಿದನಂತೆ ಎನ್ನುವ ಮಾತು ಇಡೀ ಜಿಲ್ಲೆಯಲ್ಲಿ ಹರಡಿ ಬಿಟ್ಟಿತು .

ರಾಯರ ಅಪ್ರತಿಮ ಪ್ರತಿಭೆಯನ್ನು ಗುರುತಿಸಿ 1925ರ ಜೂನ್ 15 ರಂದು ಚಿತ್ರದುರ್ಗದಲ್ಲಿ ಇವರಿಗೆ ಅಭಿನವ ಕಂಠೀರವ ಎಂಬ ಬಿರುದನ್ನು ಚಿನ್ನದ ಪದಕವನ್ನು ನೀಡಲಾಯಿತು. ಅದೇ ವರ್ಷ ಡಿಸೆಂಬರ್ 4 ರಂದು ರಾಯಚೂರಿನಲ್ಲಿ ನಟ ಭಯಂಕರ ಎಂಬ ಬಿರುದನ್ನು ಚಿನ್ನದ ಪದಕವನ್ನು ಕೊಡಲಾಯಿತು. ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಇವರನ್ನು ಪ್ರಿನ್ಸ್ ಆಫ್ ಆಕ್ಟರ್ಸ್ ಎಂದು ಕರೆದು ಪುರಸ್ಕರಿಸಿದರು. ಕೆಜಿಎಫ್ ನಲ್ಲಿ ಬ್ರಿಟಿಷ್ ಅಧಿಕಾರಿ ಜಾನ್ ಟೇಲರ್ ಇವರ ಅಭಿನಯವನ್ನು ಕಂಡು ತಾವು ಲಂಡನ್ನಲ್ಲಿಯೂ ಸಹ ಇಂತಹ ನಟನೆಯನ್ನು ಕಂಡಿಲ್ಲ ಎಂದು ತಾವು ಕುತ್ತಿಗೆಯಲ್ಲಿ ಹಾಕಿಕೊಂಡಿದ್ದ ಸರವನ್ನೇ ತೆಗೆದು ಕೊಟ್ಟಿದ್ದರು.

1938 ರ ಅಕ್ಟೋಬರ್ 8 ರಂದು ಕರ್ನೂಲ್ ನಲ್ಲಿ ಮದ್ರಾಸ್ ಸಂಸ್ಥಾನದ ಅಭಿವೃದ್ಧಿ ಖಾತೆ ಮಂತ್ರಿಗಳಾದ ಟಿ ಇನ್ ಶಿವಶಂಕರ್ ಪಿಳ್ಳೆ ಅವರಿಂದ ಇವರ ಅಭಿನಯದ ಮುಕ್ತ ಕಂಠ ಪ್ರಶಂಸೆಯೂ ಸೇರಿದಂತೆ ಇನ್ನು ಹಲವಾರು ರೀತಿಯಲ್ಲಿ ಗೌರವ ಪುರಸ್ಕಾರಗಳಿಗೆ ಒಳಗಾಗಿತ್ತು ಇವರ ದೈತ್ಯ ಪ್ರತಿಭೆ.

ರಾಯರು ವೇದಿಕೆ ಮೇಲೆ ರೌದ್ರ ಪಾತ್ರಗಳನ್ನು ಮಾಡುತ್ತಿದ್ದರೂ ಅವರ ಹೃದಯ ಬಹಳ ಮೆದುವಾಗಿದ್ದು ಮಾನವೀಯತೆಯ ಪ್ರತೀಕವಾಗಿತ್ತು. ಜಾತಿ ಮತಗಳ ಭೇದ ತೋರದೆ ಧಾರ್ಮಿಕ , ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ ಹಲವಾರು ಸಹಾಯಾರ್ಥ ನಾಟಕ ಪ್ರದರ್ಶನಗಳನ್ನು ಮಾಡಿದ್ದಾರೆ. ಹೋಟೆಲ್ಗೆ ತಮ್ಮ ಜೊತೆಯಲ್ಲಿ ಬಂದವರಿಗೆ ಉದಾರ ಮನಸ್ಸಿನಿಂದ ಆತಿಥ್ಯ ನೀಡುತ್ತಿದ್ದರು. ನೆರವು ಯಾಚಿಸಿ ಬಂದವರಿಗೆ ಮೈಮೇಲಿದ್ದ ಚಿನ್ನಾಭರಣಗಳನ್ನು ಕಿಂಚಿತ್ತು ಚಿಂತಿಸದೆ ನೀಡುತ್ತಿದ್ದ ಕೊಡುಗೈ ದಾನಿ. ಕಂಪನಿಯ ಸಹಕಲಾವಿದರುಗಳಿಗೆ ವಾರಕ್ಕೊಮ್ಮೆ ಎಣ್ಣೆ ನೀರಿನ ಅಭ್ಯಂಜನ ಮಾಡಿಸುತ್ತಿದ್ದರು. ಅವರ ಕುಟುಂಬದವರ ಯೋಗಕ್ಷೇಮ, ಹಬ್ಬ ಹರಿದಿನಗಳಲ್ಲಿ ಒಬ್ಬಟ್ಟು ಮೊದಲಾದ ಸಿಹಿ ತಿನಿಸಿನ ಔತಣ ಹೀಗೆ ತಮ್ಮ ಕಲಾವಿದರನ್ನು ತಮ್ಮ ಕುಟುಂಬದವರಂತೆ ಪ್ರೀತಿಯಿಂದ ಕಾಣುತ್ತಿದ್ದವರು ಗಂಗಾಧರ ರಾಯರು.

ಒಮ್ಮೆ ಸ್ವಂತ ಊರು ಮೂಕನಹಳ್ಳಿ ಪಟ್ನದಲ್ಲಿ ಸಹಾಯಾರ್ಥ ನಾಟಕ ಪ್ರದರ್ಶನದಲ್ಲಿ ರಾವಣನ ಪಾತ್ರ ನಿರ್ವಹಿಸುತ್ತಿದ್ದರು. ಸಿಂಹಾಸನದಿಂದ ವೀರಾವೇಶದಿಂದ ಧುಮುಕುವ ಪ್ರಸಂಗದಲ್ಲಿ ಕುಸಿದು ಬಿದ್ದಾಗ ಪಾರ್ಶ್ವ ವಾಯು ಬಡಿತಕ್ಕೆ ಒಳಗಾದರು. ಆದರೂ ಹಾಗೇ ನಾಟಕ ಮುಗಿಸಿ ಆಸ್ಪತ್ರೆಗೆ ಸೇರಿದರು. ಅಲ್ಲಿಂದ ಚೇತರಿಸಿಕೊಳ್ಳಲೇ ಇಲ್ಲ. 1961ರ ಮಾರ್ಚ್ 12 ರಂದು ಈ ಲೋಕದ ಯಮರಾಜ ಪರಲೋಕದ ಯಮರಾಜ ನೊಂದಿಗೆ ಹೊರಟೇ ಬಿಟ್ಟರು. ಕನ್ನಡದ ರಂಗಭೂಮಿಯ ಮಿನುಗು ತಾರೆಯೊಂದು ದೈವದಲ್ಲಿ ಲೀನವಾಗಿ ಹೋಯಿತು.

ಈ ನಟ ಭಯಂಕರನ ನಿರ್ಗಮನ ಅನೇಕ ಕಲಾವಿದರನ್ನು ಶೋಕ ಸಾಗರದಲ್ಲಿ ಮುಳುಗಿಸಿತ್ತು. ರಾಯರ ನಟನಾ ಶ್ರೀಮಂತಿಕೆ, ಹೃದಯ ವೈಶಾಲ್ಯತೆ ಮುಂತಾದ ಗುಣಗಳನ್ನು ನೆನೆದು ಕಲಾಭಿಮಾನಿಗಳುಕಣ್ಣೀರಿಟ್ಟರು.

ಸಾಹಿತ್ಯ ಮತ್ತು ಸಂಸ್ಕೃತಿಗೆ ಮೀಸಲಾಗಿದ್ದ ದ ಇಂಡಿಯನ್ ಪೆನ್ ಎಂಬ ರಾಷ್ಟ್ರ ಮಟ್ಟದ ಪತ್ರಿಕೆಯಲ್ಲಿ ಹಿರಿಯ ಪತ್ರಕರ್ತ ಶ್ರೀ ಎಸ್ ಆರ್ ರಾಮಸ್ವಾಮಿ ಅವರು ರಾಯರ ನಿಧನದ ಬಗ್ಗೆ ಸಂತಾಪಸೂಚಕ ಲೇಖನವನ್ನು ಬರೆದು ಅವರ ಹಿರಿಮೆ ಗರಿಮೆಗಳನ್ನು ಕೊಂಡಾಡಿದರು. ನಂತರದ ದಶಕದಲ್ಲಿ ರಾಯರ ಬಗ್ಗೆ ಮತ್ತು ಅವರಷ್ಟೇ ಅಪ್ರತಿಮ ರಂಗ ಕಲಾವಿದರಾದ ಸ್ವಂತ ಅಳಿಯ ಸುಬ್ಬರಾಯರ ಬಗ್ಗೆ ಪ್ರಸಿದ್ಧ ಸುಧಾ ವಾರಪತ್ರಿಕೆಯಲ್ಲಿ ಸರಣಿ ಲೇಖನಗಳು ಪ್ರಕಟವಾದವು. ಇತರ ಪತ್ರಿಕೆಗಳಲ್ಲಿ ಹಲವಾರು ಬಿಡಿ ಲೇಖನಗಳು ಪ್ರಕಟಗೊಂಡವು. ಕೆಲವು ಹಿರಿಯ ರಂಗಕಲಾವಿದರು ಪತ್ರಿಕೆಗಳಿಗೆ ಸಂದರ್ಶನ ಕೊಡುವಾಗ ರಾಯರನ್ನು ನೆನೆಯುತ್ತಿದ್ದರು.

ಕನ್ನಡ ರಂಗ ಭೂಮಿ ಮತ್ತು ಖ್ಯಾತ ಚಲನಚಿತ್ರ ನಿರ್ದೇಶಕ ಜಿ ವಿ ಅಯ್ಯರ್ ಬಾಲನಟನಾಗಿ ರಾಯರ ಜೊತೆ ಅಭಿನಯಿಸಿದ ಸಮಯವನ್ನು ಸಂತಸದಿಂದ ನೆನಪಿಸಿಕೊಂಡಿದ್ದಾರೆ.

ಹರಿತವಾದ ಮಾತುಗಾರಿಕೆ ಮತ್ತು ನಟನೆಯಿಂದ ಮನೆಮಾತಾಗಿರುವ ಹಿರಿಯ ರಂಗಭೂಮಿ ಕಲಾವಿದರಾದ ಮಾಸ್ಟರ್ ಹಿರಣ್ಣಯ್ಯ ಅವರು ಚಿಕ್ಕಂದಿನಿಂದಲೂ ಅವರ ಅಭಿನಯವನ್ನು ಗಮನಿಸಿದ್ದು ರಾಯರ ನಟನಕಲಾ ಪ್ರೌಢಿಮೆಯನ್ನು ಮೆಚ್ಚಿಕೊಂಡಾಡಿದ್ದಾರೆ. ಗಂಗಾಧರ ರಾಯರು ರಾವಣನಾಗಿ, ಸುಬ್ಬರಾಯರು ಶ್ರೀ ರಾಮನಾಗಿಯೂ ಅಭಿನಯಿಸಿದ ನಾಟಕಗಳು ತಮ್ಮ ಕಂಪನಿಯ ಮೂಲಕ ಯಶಸ್ವಿ ಪ್ರದರ್ಶನಗಳನ್ನು ಕಂಡಿದ್ದವು ಎಂಬುದನ್ನು ಹೆಮ್ಮೆಯಿಂದ ಹೇಳಿದ್ದಾರೆ.

ಹಿರಿಯ ಕಲಾವಿದೆ ಆರ್ ನಾಗರತ್ನಮ್ಮ. ಚಲನಚಿತ್ರ ನಿರ್ದೇಶಕ ಸಿವಿ ಶಿವಶಂಕರ್, ಸಾಹಿತಿ ಹಾವೆಂ ಸೀತಾರಾಮಯ್ಯ ಹೀಗೆ ಇನ್ನು ಅನೇಕ ಗಣ್ಯಾತಿಗಣ್ಯರು ರಾಯರ ಪ್ರೌಢ ಪ್ರತಿಭೆಯ ಬಗ್ಗೆ ಅಭಿಮಾನದ ಮಾತುಗಳನ್ನು ಆಡಿದ್ದಾರೆ, ಬರೆದಿದ್ದಾರೆ

ಗುಬ್ಬಿ ವೀರಣ್ಣ ರಂಗ ಪೀಠ, ಲಲಿತಕಲಾ ಕಾಲೇಜು, ಮಾನಸಗಂಗೋತ್ರಿ ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ ಇವರುಗಳ ಸಹಯೋಗದೊಂದಿಗೆ ಗಂಗಾಧರ ರಾಯರ ಜೀವನ ಮತ್ತು ಸಾಧನೆಯ ಪ್ರಚಾರೋಪನ್ಯಾಸ ಕಾರ್ಯಕ್ರಮ 'ರಂಗಧ್ವನಿ' ಎಂಬ ಶೀರ್ಷಿಕೆಯೊಂದಿಗೆ 21 –12– 2019 ರಂದು ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ರಾಯರ ಮನೆತನದವರಾದ ಆದ ಶ್ರೀ ಪ್ರವೀಣ್ ಕುಮಾರ್, ಶ್ರೀ ನೆಲ ರಾಮಮೂರ್ತಿ, ಶ್ರೀ ರಾಸು ವೆಂಕಟೇಶ್ ಹಾಗೂ ಶ್ರೀ ಸುರೇಶ್ ಮೂನ ಇವರುಗಳು ಚಿತ್ರ ಸಹಿತವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇದು ರಾಯರ ಬಗ್ಗೆ ನಡೆದ ಒಂದು ಅಪರೂಪದ ಕಾರ್ಯಕ್ರಮ ಇದಾಗಿತ್ತು. ರಾಯರ ಜೀವನ ಮತ್ತು ಸಾಧನೆಯ ಬಗ್ಗೆ ಒಂದು ವಿಸ್ತೃತವಾದ ಡಾಕ್ಯುಮೆಂಟರಿ ಫಿಲಂ ಅನ್ನು ಸಿದ್ಧಗೊಳಿಸುವ ಅವಶ್ಯಕತೆ ಇದೆ.

ವಿಪ್ರ ನುಡಿಯಲ್ಲಿ ಮರೆಯಲಾಗದ ಮಹನೀಯರು ಸರಣಿಯಲ್ಲಿ 25 ಮಹಾನುಭಾವರ ಬಗ್ಗೆ ಬರೆಯಲು ಅವಕಾಶ ಮಾಡಿಕೊಟ್ಟ ಏಕೆ ಬಿಎಂಎಸ್ ಸಂಸ್ಥೆಗೆ, ವಿಪ್ರ ನುಡಿಯ ಸಂಪಾದಕ ಮಂಡಳಿಗೆ ಹಾಗೂ ನೆಚ್ಚಿನ ಓದುಗರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

**ಅಖಿಲ ಕರ್ನಾಟಕ**

**ಬ್ರಾಹ್ಮಣ ಮಹಾಸಭಾ (ರಿ.)**

**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿ.**

# ಶಿವರಾಮ್ ರಾಜಗುರು

– **ಕೆ.ಎನ್. ಛಾಯಾಪತಿ,** ಮಹಾಸಭಾ. ಉಪಾಧ್ಯಕ್ಷರು



**"ಎನ್ನೆದೆಯ ಬಿಸಿರಕ್ತ ಬಗೆಬಗೆದು ಬಸಿಯುವೆ,**
**ತಾಯಿ ಭಾರತಿಯ ಬಂಧನವ ಬಿಡಿಸುವೆ,**
**ಮಾತೃ ಮಂದಿರ ಬೆಳಗುತಿರಲಿ ನಾನೆ ನಂದಾದೀವಿಗೆ,**
**ನಿನ್ನ ಕೀರ್ತಿಯು ಜಗದಿ ಮೆರೆಯಲಿ ನೀರುಗಯ್ಯುವೆ ರಕ್ತವ"**

ಈ ಮೇಲಿನ ಸಾಲುಗಳು ತಾಯಿ ಭಾರತಿಯು ಕೈಗೆ ಬಿದ್ದಿರುವ ಸಂಕೋಲೆಗಳಿಂದ ನರಳುತ್ತಿರುವಾಗ ಆಕೆಯ ಮಕ್ಕಳಾದ ಯುವ ಕ್ರಾಂತಿಕಾರಿಗಳ ಹೃನ್ಮನದಿಂದ ಹೊರ ಹೊಮ್ಮುತ್ತಿದ್ದ ಭಾವನೆಗಳು. ಗುಂಡಿಗೆ ಎದೆಯೊಡ್ಡುವುದು, ನೇಣಿಗೆ ಕೊರಳನ್ನು ಒಡ್ಡುವುದು ಇವೆರಡನ್ನು ಲೀಲಾಜಾಲವಾಗಿ ಒಪ್ಪಿಕೊಳ್ಳುತ್ತಿದ್ದ ಕ್ರಾಂತಿಕಾರಿಗಳ ಪೈಕಿ ಇಬ್ಬರು ಬ್ರಾಹ್ಮಣ ವ್ಯಕ್ತಿಗಳು ಇಂದಿನ ಲೇಖನಸರಣಿಯ ಕೇಂದ್ರ ಬಿಂದುಗಳು. ಮೂರು ಬಿಲ್ವಪತ್ರೆಗಳು ಶಿವನ ತಲೆಯ ಮೇಲೆ ಏರಿ ಧನ್ಯತೆಯನ್ನು ಪಡೆಯುವಂತೆ ಮೂರು ಕ್ರಾಂತಿಪುಷ್ಪಗಳು ತಾಯಿ ಭಾರತಿಯ ಮುಡಿಗೆ ಏರಿದವು. ಅವರೇ ಭಗತ್ ಸಿಂಗ್, ಸುಖದೇವ್ ಮತ್ತು ಶಿವರಾಮ್ ರಾಜಗುರು. ಇವರಲ್ಲಿ ಶಿವರಾಮ್ ರಾಜಗುರು ಮಹಾರಾಷ್ಟ್ರದ ಪುಣೆಯ ಹತ್ತಿರ ಭೀಮಂನದಿಯ ತೀರದಲ್ಲಿರುವ ಖೇಡ್ ಎಂಬ ಗ್ರಾಮದ ಮರಾಠಿ ದೇಶಸ್ಥ ಬ್ರಾಹ್ಮಣ ಜನಾಂಗಕ್ಕೆ ಸೇರಿದ ಪಾರ್ವತಿದೇವಿ ಮತ್ತು ಹರಿನಾರಾಯಣ ರಾಜಗುರು ಎಂಬ ದಂಪತಿಗಳಿಗೆ 1908 ಆಗಸ್ಟ್ 24ರಂದು ಜನಿಸಿದರು. ಇದೊಂದು ಮಧ್ಯಮ ವರ್ಗದ ಕುಟುಂಬ. ರಾಜಗುರು ಆರು ವರ್ಷವಿದ್ದಾಗಲೇ ತಂದೆ ತೀರಿಕೊಂಡರು. ಅಣ್ಣ ದಿನಕರ್ ರಾಜಗುರು ಸಂಸಾರದ ಜವಾಬ್ದಾರಿ ಹೊರಬೇಕಾಯಿತು. ಶಿವರಾಮ ರಾಜಗುರು ಅವರ ಹಳ್ಳಿಯಲ್ಲೇ ಪ್ರಾಥಮಿಕ ಶಿಕ್ಷಣ ಪಡೆದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪುಣೆಗೆ ತೆರಳಿದರು. ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಹೆಚ್ಚಿನ ಶಿಕ್ಷಣ ಪಡೆದರು. ಆರ್ಥಿಕ ಸಂಕಷ್ಟ ಬಹಳವಿದ್ದರೂ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡುತ್ತಾ ಪ್ರಕಾಶಮಾನವಾದ ವಿದ್ಯಾರ್ಥಿಯಾ ದರು. ಪ್ರಭುದ್ಧರಾಗುತ್ತಿದ್ದಂತೆ ಭಾರತದ ಅಂದಿನ ಹೀನಾಯಸ್ಥಿತಿ ಅರ್ಥವಾಗುತ್ತಾ ಹೋಯಿತು. ಅದೇ ಸಮಯದಲ್ಲಿ ಲೋಕಮಾನ್ಯ ತಿಲಕರ ಹೋರಾಟ, ವಿಚಾರಧಾರೆ ರಾಜಗುರುವಿಗೆ ತುಂಬಾ ಆಕರ್ಷಣೀಯವಾಯಿತು. ತಿಲಕರ ಪ್ರಭಾವಕ್ಕೆ ಒಳಗಾದರು. ಹೋರಾಟಕ್ಕೆ ಧುಮುಕಲು ಅವರೇ ಸ್ಫೂರ್ತಿದಾತರಾದರು. ಆಗಲೇ ಸೇವಾದಳ ಸದಸ್ಯರಾಗಿ ಸೇರ್ಪಡೆಗೊಂ ಡರು. ಘಟಪ್ರಭಾದಲ್ಲಿ ನಡೆದ ತರಬೇತಿ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ತರುವಾಯ ಚಂದ್ರಶೇಖರ ಆಜಾದ್, ಭಗತ್ ಸಿಂಗ್ ಸ್ಥಾಪಿಸಿದ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿಗೆ ಸೇರಿದರು. ಭಾರತ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರು. ರಾಜಗುರು ಉಗ್ರಗಾಮಿ ಹೋರಾಟದಲ್ಲಿ ಅಚಲವಾದ ನಂಬಿಕೆ ಹೊಂದಿದ್ದರು. ಆಂಗ್ಲರ ದಬ್ಬಾಳಿಕೆಯನ್ನು ಉಗ್ರತೆ ಮತ್ತು ಹಿಂಸಾಚಾರದಿಂದ ಎದುರಿಸಬೇಕೆಂದು ಪ್ರತಿಪಾದಿಸಿದರು. ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ಹೋರಾಟದಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಹಿಂದುಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿಯಲ್ಲಿ ರಾಜಗುರು ಅವರು ಅಸಾಧಾರಣ ಶೂಟಿಂಗ್ ಕೌಶಲ್ಯ ಹೊಂದಿ ಗನ್ ಮ್ಯಾನ್ ಎಂಬ ಹೆಸರು ಪಡೆದರು. ಸೈಮನ್ ಆಯೋಗದ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾಗ ಲಾಲಾ ಲಜಪತ್‌ರಾಯ್ ಮೇಲೆ ಪೊಲೀಸರು ಲಾಟಿಪ್ರಹಾರ ಮಾಡಿದರು. ತೀವ್ರವಾದ ಗಾಯಗಳಿಂದ ಚೇತರಿಸಿಕೊಳ್ಳಲಾಗದೆ ಅವರು ಸಾವನ್ನಪ್ಪಿದರು. ಇದರ ಸೇಡು ತೀರಿಸಿಕೊಳ್ಳುವ ಬಯಕೆಯಿಂದ ಲಾಟಿಚಾರ್ಜ್‌ಗೆ ಆದೇಶ ನೀಡಿದ ಜೇಮ್ಸ್ ಎ ಸ್ಕಾಟ್ ಎಂಬ ಅಧಿಕಾರಿಯನ್ನು ಮುಗಿಸಲು ಭಗತ್ ಸಿಂಗ್ ,ರಾಜಗುರು, ಸುಖದೇವ್ ಪಣತೊಟ್ಟರು. ಜೇಮ್ಸ್ ನ ಮೇಲೆ ಗುಂಡು ಹಾರಿಸುವ ಸಂದರ್ಭದಲ್ಲಿ ಮತ್ತೊಬ್ಬ ಬ್ರಿಟಿಷ್ ಅಧಿಕಾರಿ ಸ್ಯಾಂಡರ್ಸ ಬಲಿಯಾದನು. ಅದೇನೇ ಆದರೂ ಲಾಲಾ ಲಜಪತ್‌ರಾಯ್ ಸಾವಿಗೆ ಪ್ರತೀಕಾರ ತೀರಿಸಿಕೊಂಡಿದ್ದೇವೆ ಎಂದು ಘೋಷಿಸಿದರು.

ಗುಂಡು ಹಾರಿಸುವುದು ಕೇವಲ ಹತ್ಯೆಯ ಉದ್ದೇಶದಿಂದಾದರೂ ವಸಾಹತುಶಾಹಿಗಳ ದಬ್ಬಾಳಿಕೆ ಮತ್ತು ದಮನಕಾರಿ ನೀತಿಯ ಬಗ್ಗೆ ಎಲ್ಲರ ಗಮನ ಸೆಳೆಯಬೇಕಾಗಿತ್ತು. ಪೋಲೀಸರು ರಾಜಗುರುವನ್ನು ಸೆರೆಹಿಡಿಯಲು ಹುಡುಕಾಟ ಪ್ರಾರಂಭಿಸಿದರು.ಅವರಿಂದ ತಪ್ಪಿಸಿಕೊಳ್ಳಲು ನಾಗಪುರಕ್ಕೆ ಓಡಿ ಹೋದರು. ಅಲ್ಲಿಂದ ಪುಣೆಗೆ ಪ್ರಯಾಣಿಸುತ್ತಿದ್ದಾಗ ದುರಾದೃಷ್ಟವಶಾತ್ ಬಂಧನಕ್ಕೆ ಒಳಗಾದರು. ಆ ಸಮಯದಲ್ಲಾಗಲೇ ಭಗತ್ ಸಿಂಗ್ ಮತ್ತು ಸುಖದೇವ್ ಕೂಡ ಬಂಧಿಸಲ್ಪಟ್ಟಿದ್ದರು. ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು. ಅಂತಿಮವಾಗಿ ಜೆಪಿ ಸ್ಯಾಂಡರ್ಸ ಹತ್ಯೆಗಾಗಿ ಮೂವರಿಗೂ ಮರಣದಂಡನೆ ವಿಧಿಸಲಾಯಿತು. ಮಾರ್ಚ್ 23, 1931 ರಂದು ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರುವನ್ನು ಲಾಹೋರಿನ ಜೈಲಿನಲ್ಲಿ ಗಲ್ಲಿಗೇರಿಸುವಾಗ ಭಾರತ್

ಮಾತಾ ಕಿ ಜೈ, ಇಂಕ್ವಿಲಾಲ್ ಜಿಂದಾ ಬಾದ್ (ಕ್ರಾಂತಿ ಚಿರಾಯುವಾಗಲಿ) ಎನ್ನುತ್ತಾ ನೇಣುಕಂಬಕ್ಕೆ ತಮ್ಮ ಕುತ್ತಿಗೆಯನ್ನು ಒಡ್ಡಿದರು. ಪ್ರಾಣಪಕ್ಷಿ ಹಾರಿಹೋಯಿತು. ರಾಜಗುರು ತಮ್ಮ ಜೀವಿತಾವಧಿಯಲ್ಲಿ ಯಾವ ಗೌರವ ಪ್ರಶಸ್ತಿ ಮನ್ನಣೆಗೂ ಪಾತ್ರರಾಗಿರಲಿಲ್ಲ. ಮರಣಾನಂತರ ಅವರಿಗೆ ಮಿತಿಮೀರಿದ ಗೌರವ ಮನ್ನಣೆ ದೊರಕಿತು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟ ಚಳುವಳಿಯಲ್ಲಿ ಹುತಾತ್ಮರಾದ ಅಗ್ರಗಣ್ಯರಲ್ಲಿ ಒಬ್ಬರು ಮತ್ತು ಭಾರತೀಯರ ಹೃದಯದಲ್ಲಿ ನಿಜವಾದ ನಾಯಕನಾಗಿ ಬೇರೂರಿದ್ದಾರೆ.

ರಾಜಗುರು ಅವರ ಜನ್ಮಸ್ಥಳ ಖೇಡ್ ಗ್ರಾಮಕ್ಕೆ ರಾಜಗುರುನಗರ ಎಂದು ಮರು ನಾಮಕರಣ ಮಾಡಲಾಗಿದೆ. ಅವರು ವಾಸಿಸುತ್ತಿದ್ದ ಮತ್ತು ಅವರ ಪೂರ್ವಜರ ಮನೆಗೆ ರಾಜಗುರುವಾಡ ಎಂದು ಹೆಸರಿಟ್ಟು ಪ್ರತಿ ಗಣರಾಜ್ಯೋತ್ಸವದಲ್ಲಿ ರಾಜಗುರುವಾಡ ಮನೆಯ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಲಾಗುತ್ತದೆ. ಇದು ಅವರನ್ನು ಸ್ಮರಿಸುವ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಅವರು ಮಾಡಿದ ತ್ಯಾಗವನ್ನು ಗೌರವಿಸುವ ಮತ್ತು ದೇಶಭಕ್ತಿಯ ಸಂಪ್ರದಾಯವನ್ನು ಎತ್ತಿ ಹಿಡಿಯುವ ಪ್ರತೀಕವಾಗಿದೆ. ಸಾಮಾಜಿಕವಾಗಿ, ರಾಜಕೀಯವಾಗಿ ಸುಸ್ಥಿತಿಯ ದೇಶ ಕಟ್ಟುವ ಕಾರ್ಯಕರ್ತರಿಗೆ ನಿರಂತರ ಪ್ರಭಾವ ಬೀರುವ ಕಾರಂಜಿಯಾಗಿದೆ. ಸ್ವಂತಕ್ಕೆ ಸ್ವಲ್ಪ, ದೇಶಕ್ಕೆ ಸರ್ವಸ್ವ ಎಂದು ದೇಶಕ್ಕಾಗಿ ದುಡಿಯುವ ಕಾರ್ಯಕರ್ತರು ಮತ್ತು ಯುವಪೀಳಿಗೆಗೆ ರಾಜಗುರುವಿನ ಜೀವನ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುತ್ತದೆ.

**ಅವರಿಗೊಂದು ಸೆಲ್ಯೂಟ್.**

**"ಭಾರತ್ ಮಾತಾಕೀ ಜೈ"**

## ಸ್ವಾತಂತ್ರ ಹೋರಾಟದಲ್ಲಿ ಬ್ರಾಹ್ಮಣರ ಪಾತ್ರ – 19

# ಬಟುಕೇಶ್ವರ ದತ್ತ



ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಪ್ರಾಣತೆತ್ತು ಜೈಲುವಾಸ ಅನುಭವಿಸಿ ಹುತಾತ್ಮರಾದ ಅನೇಕ ಕ್ರಾಂತಿಕಾರಿಗಳ ಪರಿಚಯವಾಗಲಿ, ಸ್ಮರಣೆಯಾಗಲಿ ಇಂದಿನ ಜನಾಂಗಕ್ಕಿಲ್ಲ. ಇದು ದುರ್ದೈವ. ಅವರುಗಳನ್ನು ಪರಿಚಯಿಸುವ ಮತ್ತು ಸ್ಮರಿಸುವ ಕಾರ್ಯಕ್ರಮಗಳನ್ನು ನೀಡದೆ, ಪಾಠ ಪ್ರವಚನಗಳಲ್ಲಿ ಸೇರಿಸುವ ಕ್ರಮ ಕೈಗೊಳ್ಳದಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇದಕ್ಕೆ ಕಾರಣ. ಆ ರೀತಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಾಗೂ ಇಂದು ಹೆಚ್ಚು ಜನರಿಗೆ ಪರಿಚಯವಿಲ್ಲದ ವ್ಯಕ್ತಿ ಕ್ರಾಂತಿಕಾರಿ ಬಟಕೇಶ್ವರದತ್ತ. ಪಶ್ಚಿಮಬಂಗಾಳದ ಬುರ್ದ್ವಾನ್ ಜಿಲ್ಲೆಯ ಓಡಿಗ್ರಾಮದ ಬಂಗಾಳಿ ಕಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ 1910 ನವೆಂಬರ್ 18ರಂದು ತಂದೆ ಗೋಷ್ಠ ಬಿಹಾರಿದತ್ ಮತ್ತು ಕಮಲಕಾಮಿನಿಯರ ಪುತ್ರನಾಗಿ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಸ್ವಂತ ಊರಿನಲ್ಲಿಯೇ ಮುಗಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಾನ್ಪುರಕ್ಕೆ ತೆರಳಿ ಪಂಡಿತ ಪೃಥ್ವಿರಾಜ್ ಕಾಲೇಜಿನಲ್ಲಿ ಪದವಿ ಪಡೆದರು. ಅಲ್ಲಿ ಒಮ್ಮೆ ಒಂದು ಘಟನೆ ನಡೆಯಿತು.ಕಾನ್ಪುರದ ಮಾಲ್ ಎಂಬ ರಸ್ತೆಯಲ್ಲಿ ಆಂಗ್ಲರು ಮಾತ್ರ ವಾಸಿಸುತ್ತಿದ್ದರು. ಭಾರತೀಯರು ಅಪ್ಪಿ–ತಪ್ಪಿಯೂ ಆ ರಸ್ತೆಯಲ್ಲಿ ಹೋಗುವಂತಿರಲಿಲ್ಲ. ಅಕಸ್ಮಾತ್ ಸಂಚರಿಸಿದರೆ ಛಡಿಯೇಟಿನ ಶಿಕ್ಷೆಯಾಗುತ್ತಿತ್ತು. ಇದನ್ನು ತಿಳಿದ 13ರ ಪೋರ ಬಟುಕೇಶ್ವರನಿಗೆ ಮೈಯೆಲ್ಲಾ ಉರಿಯಿತು. ನಮ್ಮದೇಶದ ರಸ್ತೆಗಳಲ್ಲಿ ನಾವೇ ಓಡಾಡುವ ಸ್ವಾತಂತ್ರ್ಯವಿಲ್ಲವೇ ಎಂದು ಪ್ರಶ್ನಿಸಿಕೊಂಡು ರಸ್ತೆಗೆ ಇಳಿದೇಬಿಟ್ಟನು. ಕೆಂಡಾಮಂಡಲರಾದ ಕೆಂಪು ಮೂತಿಯ ಆಂಗ್ಲರು ಇವನಿಗೆ ಮನಬಂದಂತೆ ಥಳಿಸಿದರು. ಆ ಏಟು ತಿಂದ ವ್ಯಕ್ತಿ ಮುಂದೊಂದು ದಿನ ಆಂಗ್ಲರಿಗೆ ಕಂಟಕವಾಗುತ್ತಾನೆ ಎಂದು ಯಾರೂ ಅಂದುಕೊಂಡಿರಲಿಲ್ಲ. ಪೆಟ್ಟು ತಿಂದ ಆ ಕಿಶೋರ ಬಟುಕೇಶ್ವರ ಈ ಆಂಗ್ಲರನ್ನು ಭಾರತದಿಂದ ಕಿತ್ತೆಸೆಯಬೇಕೆಂದು ಸಂಕಲ್ಪ ಮಾಡಿದ. ಅಂದರೆ 13 ವರ್ಷದ ಪೋರನ ಮನದಲ್ಲಿ ಎಂತಹ ದೇಶಭಕ್ತಿ ಅಡಗಿತ್ತು ಎಂಬುದು ಅರ್ಥವಾಗುತ್ತದೆ.

1924ರಲ್ಲಿ ಕಾನ್ಪುರದಲ್ಲಿ ಚಂದ್ರಶೇಖರ್ ಆಜಾದ್ ಮತ್ತು ಭಗತ್ ಸಿಂಗರ ಪರಿಚಯವಾಗುತ್ತದೆ. ಕ್ರಾಂತಿಕಾರಿ ಸಂಘಟನೆಯಾದ ಹಿಂದುಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಆರ್ಮಿಯ ಸದಸ್ಯರಾಗುತ್ತಾರೆ. ಅಲ್ಲಿ ಬಾಂಬ್ ತಯಾರಿಸುವುದನ್ನು ಕಲಿತರು. 1915ರಲ್ಲಿ ಬ್ರಿಟಿಷ್ ಸರ್ಕಾರ ಭಾರತ ರಕ್ಷಣಾ ಕಾಯಿದೆ ಜಾರಿಗೆ ತರಲು ನಿರ್ಧರಿಸಿತು. ಇದು ಭಾರತೀಯರಿಗೆ ಮುಳುವಾಗುವಂತಿತ್ತು. ಅದನ್ನು ವಿರೋಧಿಸಿ ಲಾಲಾ ಲಜಪತ್‌ರಾಯ್ ನೇತೃತ್ವದಲ್ಲಿ ಹೋರಾಟ ನಡೆಯುವಾಗ ಪೊಲೀಸರ ಹೊಡೆತದಿಂದ ಲಾಲ ಲಜಪತ್ ರಾಯ್ ಅಸುನೀಗಿದರು. ಭಾರತ ರಕ್ಷಣಾ ಕಾಯಿದೆ ಮತ್ತು ಲಾಲಾ ಲಜಪತರಾಯರ ನಿಧನವನ್ನು ವಿರೋದಿಸಿ ಏಪ್ರಿಲ್ 8, 1929 ರಂದು ದೆಹಲಿಯಲ್ಲಿ ಲೆಜಿಸ್ಲೇಚರ್ ಅಸೆಂಬ್ಲಿಯಲ್ಲಿ ಬಾಂಬ್ ಸಿಡಿಸಲು ನಿರ್ಧರಿಸಿದರು. ವೀಕ್ಷಕರ ಗ್ಯಾಲರಿಯಿಂದ ಧಾವಿಸಿ ಅಸೆಂಬ್ಲಿ ಹಾಲಿನಲ್ಲಿ ಬಾಂಬ್ ಎಸೆದರು.ಸಾರ್ವಜನಿಕ ಸುರಕ್ಷಾ ಕಾನೂನು ಮತ್ತು ಲಾಲಾ ಲಜಪತ್‌ರಾಯ್ ಅವರ ಹತ್ಯ ವಿರೋಧಿಸಲು ಈ ಕೃತ್ಯ ಎಂದು ಬರೆದ ಕರಪತ್ರವನ್ನು ಅಸೆಂಬ್ಲಿಯಲ್ಲಿ ಹಂಚಿದರು. ಅಲ್ಲಿಂದ ಓಡಿ ಹೋಗದೆ "ಇಂಕ್ವಿಲಾಲ್ ಜಿಂದಾಬಾದ್" ಎಂದು ಕೂಗುತ್ತಾ ಬಂಧನಕ್ಕೆ ಒಳಗಾದರು. ಭಗತ್ ಸಿಂಗ್, ಸುಖದೇವ್ ಮತ್ತು ಬಟುಕೇಶ್ವರರ ವಿಚಾರಣೆ ನಡೆಯಿತು. ಬಟುಕೇಶ್ವರರಿಗೆ ಜೀವಾವಧಿ


ಶಿಕ್ಷೆ ವಿಧಿಸಿ ಭಾರತೀಯ ಕ್ರಾಂತಿಕಾರಿಗಳ ನರಕ ಸ್ಥಾನ ಎಂದೇ ಪ್ರಸಿದ್ಧಿಯಾಗಿದ್ದ ಅಂಡಮಾನಿನ ಸೆಲ್ಯುಲರ್ ಜೈಲಿಗೆ ತರಲಾಯಿತು. ಸೆರೆಮನೆಯಲ್ಲಿ ಇದ್ದುಕೊಂಡೇ ಕೊಲ್ಕತ್ತಾ ವಿಶ್ವವಿದ್ಯಾಲಯದಿಂದ ಬಿ.ಎ ಪರೀಕ್ಷೆ ಬರೆದು ಉತ್ತೀರ್ಣರಾಗುತ್ತಾರೆ. ಮೊದಲಷ್ಟು ದಿನ ಲಾಹೋರಿನ ಜೈಲಿನಲ್ಲಿ ನರಕ ಸದೃಶವಾದ ಶಿಕ್ಷೆಗಳನ್ನು ಅನುಭವಿಸುತ್ತಾರೆ. ನಂತರ ಅಂಡಮಾನಿನ ಸೆಲ್ಯಲಾರ್ ಜೈಲಿಗೆ ವರ್ಗಾಯಿಸಲ್ಪಡುತ್ತಾರೆ. ಅಲ್ಲಿ ತೆಂಗಿನ ಮಟ್ಟೆಯಿಂದ ನಾರು ತೆಗೆದು ಹಸನು ಮಾಡುವುದು, ಅದರಿಂದ ಹಗ್ಗ ಹೆಣೆಯುವುದು, ಗಾಣ ಸುತ್ತಿಸಿ ಎಣ್ಣೆ ತೆಗೆಯುವುದು ಹೀಗೆ ಖೈದಿಗಳಿಂದ ದುಡಿಸಿಕೊಳ್ಳುತ್ತಿದ್ದರು. ಕೈಗಳಿಗೆ ಬಿಡುವಿಲ್ಲದೆ ಈ ರೀತಿ ಕೆಲಸ ಮಾಡಿದಾಗ ಕೈನಲ್ಲಿ ಬೊಬ್ಬೆ ಬಂದು ರಕ್ತ ಹರಿಯುತ್ತಿತ್ತು. ಗಾಣದಿಂದ ಎಣ್ಣೆ ತೆಗೆಯುವಾಗ ಗಾಣ ಎಳೆಯುವುದು ಸ್ವಲ್ಪ ತಡವಾದರೂ ಬೆನ್ನಿಗೆ ಛಡಿಯೇಟುಗಳು ಬೀಳುತ್ತಿದ್ದವು. ಜೈಲಿನಲ್ಲಿ ಪೌಷ್ಠಿಕ ಆಹಾರವಿಲ್ಲ, ಸೊಳ್ಳೆಗಳ ಕಾಟ ನಿದ್ದೆಯಿಲ್ಲ, ಇದರಿಂದಾಗಿ ದೇಹ ಕೃಶವಾಗಿತ್ತು. ಆದರೂ "ನನ್ನ ದೇಶ ಸ್ವತಂತ್ರವಾಗುವವರೆಗೂ ಹೋರಾಡಬೇಕು" ಎಂಬ ಕೆಚ್ಚು ಮಾತ್ರ ಆರಿರಲಿಲ್ಲ. ಬಟುಕೇಶ್ವರರ ಆರೋಗ್ಯ ಹದಗೆಟ್ಟ ಬಗ್ಗೆ ಗಾಂಧೀಜಿಯವರಿಗೆ ತಿಳಿಯಿತು. ಬಿಡುಗಡೆಗೆ ಆಂಗ್ಲ ಸರ್ಕಾರವನ್ನು ಒತ್ತಾಯ ಮಾಡಿದರು. ಕೆಲವು ಕಟ್ಟುಕಟ್ಟಲೆಗಳನ್ನು ಬರೆಸಿಕೊಂಡು ಬಿಡುಗಡೆ ಮಾಡಿದರು. ಸೆರೆಮನೆಯಿಂದ ಹೊರಬಂದ ಬಟುಕೇಶ್ವರರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಮತ್ತೆ ಬಂಧನಕ್ಕೊಳಗಾಗಿ ಜೈಲು ಸೇರಿದರು. ಮೂರು ವರ್ಷಗಳ ಕಾಲ ಜೈಲಿನಲ್ಲಿದ್ದಾಗ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಆಗಸ್ಟ್ 15,1945ರಲ್ಲಿ ಭಾರತ ಸ್ವತಂತ್ರವಾಯಿತು. ಇವರ ಮೇಲೆ ಇದ್ದ ಕಟ್ಟಳೆಗಳು ರದ್ದಾದವು. ಆದರೆ ಅವರು ಅನಾರೋಗ್ಯದಿಂದ ನರಳುತ್ತಿದ್ದರು. ಆದರೂ ಜೀವನೋಪಾಯಕೋಸ್ಕರ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದರು. ಅವರು ಪತ್ನಿ, ಓರ್ವ ಪುತ್ರಿಯನ್ನು ಹೊಂದಿದ್ದರು. 1963/64ರ ಭಾರತ ಸಂಸತ್ತಿನಲ್ಲಿ ನೆಹರು ಪ್ರಧಾನಮಂತ್ರಿಯಾಗಿದ್ದರು. ಇದೇ ಸದನದಲ್ಲಿ ಭಗತ್ ಸಿಂಗ್ ಮತ್ತು ಬಟಕೇಶ್ವರರನ್ನು ಭಯೋತ್ಪಾದಕರು ಎಂದು ಘೋಷಿಸುವ ದಾಖಲೆ ಪ್ರಕಟಿಸಿದರು. ದತ್ ಅವರಿಗೆ ತುಂಬಾ ನೋವಾಯಿತು. ಕೂಡಲೇ ನೆಹರೂರವರನ್ನು ಭೇಟಿ ಮಾಡಿ ಖಾರವಾದ ತೀವ್ರ ಪ್ರತಿಭಟನೆಯನ್ನು ಸಲ್ಲಿಸಿದರು. 1963 ರಲ್ಲಿ ಬಟುಕೇಶ್ವರರು ಭಗತ್ ಸಿಂಗ್ ಊರಾದ ಕತ್ಕಲ್ ಕಲಾಂಗೆ ಭೇಟಿ ಕೊಟ್ಟರು ಊರಿಗೇ ಊರೇ ಸಂಭ್ರಮ ಸಂತೋಷ ರೋಮಾಂಚನಗೊಂಡಿತು. 33 ವರ್ಷದ ನಂತರ ಭಗತ್ ಸಿಂಗ್ ರೂಪದಲ್ಲಿ ಬಟುಕೇಶ್ವರರು ನಮ್ಮ ಊರಿಗೆ ಬಂದಿದ್ದಾರೆ ಎಂದು ಗ್ರಾಮಸ್ಥರು ಭಾವಿಸಿದರು.ಭಗತ್ ಸಿಂಗ್ ತಾಯಿ ವಿದ್ಯಾವತಿದೇವಿ ದತ್ ಅವರನ್ನು ಆಲಿಂಗಿಸಿಕೊಂಡರು. ಪುತ್ರ ಭಗತ್ ಸಿಂಗನನ್ನು ನೆನೆದು ಅಳುತ್ತಲೇ ಇದ್ದರು. ವಿದ್ಯಾವತಿದೇವಿ ಬಟುಕೇಶ್ವರರ ಕುಟುಂಬವನ್ನು ತನ್ನ ಕುಟುಂಬವೆಂದು ದತ್ತು ಪಡೆದರು. ಮತ್ತು ಬಟಕೇಶ್ವರರ ಪುತ್ರಿಯ ಮದುವೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡರು.

1965ರ ಆರಂಭದಿಂದ ಬಟುಕೇಶ್ವರ ದತ್ ಅವರ ಆರೋಗ್ಯ ಕೆಡುತ್ತಲೇ ಹೋಯಿತು. ಅವರು ಮೂಳೆ ಕ್ಯಾನ್ಸರ್ ನಿಂದ ಬಳಲುತ್ತಿದ್ದರು. ದೆಹಲಿಯ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪ್ರಾರಂಭವಾಯಿತು. ಆಗ ವಿದ್ಯಾವತಿ ದೇವಿ ಆಸ್ಪತ್ರೆಗೆ ಬಂದು ದತ್‌ನ ಮೇಲೆ ನಿಗಾ ಇರಿಸಿದರು. ಆಸ್ಪತ್ರೆಯ ಖರ್ಚನ್ನೆಲ್ಲ ತುಂಬಿಸಿದರು. 13 ಜುಲೈ 1965ರಂದು ಬಟುಕೇಶ್ವರರ ಆರೋಗ್ಯ ತೀರಾ ಹದಗೆಟ್ಟಿತು. ವಿದ್ಯಾವತಿ ದೇವಿ ದತ್‌ನ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿ ಸಮಾಧಾನಪಡಿಸಿದರು. ಆ ಸಮಯದಲ್ಲಿ ತನ್ನ ಮಗ ಭಗತ್ ಸಿಂಗ್ ನೇಣುಗಂಬಕ್ಕೆ ಹೋಗುವ ಮುನ್ನ"ನಾನು ಹೋಗುತ್ತಿದ್ದೇನೆ, ಆದರೆ ಬಟುಕೇಶ್ವರದತ್ತನ ರೂಪದಲ್ಲಿ ತನ್ನ ಒಂದು ಭಾಗವನ್ನು ಬಿಟ್ಟು ಹೋಗುತ್ತಿದ್ದೇನೆ"ಎಂದುದನ್ನು ವಿದ್ಯಾವತಿ ನೆನಪಿಸಿಕೊಂಡರು. 20 ಜುಲೈ 1965ರ ರಾತ್ರಿ ಬಟುಕೇಶ್ವರರು ನಿಧನರಾದರು. ಅವರ ಇಚ್ಛೆಯಂತೆ ವಿದ್ಯಾವತಿ ದೇವಿ ಮತ್ತು ದತ್ ಅವರ ಅಣ್ಣ ವಿಶ್ವೇಶ್ವರ ದತ್ತ ಸೇರಿ ಅಂತ್ಯ ಸಂಸ್ಕಾರದ ವ್ಯವಸ್ಥೆಯನ್ನು ಮಾಡಿದರು. ಬಟುಕೇಶ್ವರರ ಇಚ್ಛೆಯಂತೆ ಜುಲೈ 21ರಂದು ಇಂಡೋಪಾಕ್ ಗಡಿಯಿಂದ ಅನತಿ ದೂರದಲ್ಲಿರುವ ಫಿರೋಜ್ ಪುರದ ಹುಸೇನಿವಾಲದಲ್ಲಿರುವ ಭಗತ್ ಸಿಂಗ್, ರಾಜಗುರು, ಸುಖದೇವ್ ಸಮಾಧಿಯ ಪಕ್ಕದಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು. ಹೀಗೆ 34 ವರ್ಷದ ನಂತರ ಮತ್ತೆಂದೂ ಬೇರ್ಪಡಿಸಲಾಗದ ತನ್ನ ಒಡನಾಡಿ ಕ್ರಾಂತಿಕಾರಿಗಳನ್ನು ಸೇರಿಕೊಂಡರು. ಪಂಚಭೂತಗಳಲ್ಲಿ ಲೀನವಾದರು. ತಾಯಿ ಭಾರತಿಯ ಸ್ವಾತಂತ್ರ್ಯಕ್ಕೋಸ್ಕರ ಜೀವನದುದ್ದಕ್ಕೂ ದಬ್ಬಾಳಿಕೆ, ಚಿತ್ರಹಿಂಸೆ, ಕರಿನೀರುಶಿಕ್ಷೆ, ದೈಹಿಕಯಾತನೆ ಸಹಿಸಿಕೊಂಡೇ ಅಮರರಾದರು.

**ಅವರಿಗೊಂದು ಸೆಲ್ಯೂಟ್.**

**"ಭಾರತ್ ಮಾತಾಕೀ ಜೈ"**


## ತ್ರಿಮತಸ್ಥ ಸಾಮೂಹಿಕ ಉಪನಯನ



**ಶ್ರೀ ಶಂಕರ ಜಯಂತಿ ಪ್ರಯುಕ್ತ**

ದಿನಾಂಕ 12.05.2024 ರಂದು

**ಗುರುರಾಜ ಕಲ್ಯಾಣ ಮಂಟಪ,**

ಬಿ.ಜಿ. ರಸ್ತೆ, ಚಿಕ್ಕಬಳ್ಳಾಪುರದಲ್ಲಿ ತ್ರಿಮತಸ್ಥ ಬ್ರಾಹ್ಮಣ ವಟುಗಳ ಸಾಮೂಹಿಕ ಉಪನಯನವನ್ನು ಏರ್ಪಡಿಸಲಾಗಿದೆ.

**ಉಪನಯನ ಮಾಡಲಿಚ್ಛಿಸುವವರು ವ್ಯವಸ್ಥಾಪಕರಾದ ಶ್ರೀ ಆರ್. ಶ್ರೀನಿವಾಸ, ಅಂಕಣಗೊಂದಿ 0008010367 / 9108329132 ರವರನ್ನು ಸಂಪರ್ಕಿಸಬಹುದು.**

ಜಾಹಿರಾತು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

ಮೊ : 944 26771695

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ________________

ವಿಳಾಸ ________________

________________

ಸದಸ್ಯತ್ವದ ಸಂಖ್ಯೆ : ________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

ಚಂದಾದಾರರ ಸಹಿ/–

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.



ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ

ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್

ಜೌತಿಷವಿಷಯವಾಗಿ ಹುಟ್ಟಿಕೊಂಡಿರುವ ಹಲವು ಆಕ್ಷೇಪಗಳಿಗೆ ಈ ಹಿಂದಿನ ಲೇಖನಗಳಲ್ಲಿ ಸಂಕ್ಷೇಪವಾಗಿ ಉತ್ತರಿಸಿದ್ದಾಗಿದೆ. ಜೌತಿಷ್ಯದಂತೆಯೇ ವಾಸ್ತುಶಾಸ್ತ್ರದ ಬಗೆಗೂ ಹಲವು ಪರಿಯ ಚಿಂತನೆಗಳು ಲೋಕದಲ್ಲಿ ಕಂಡು ಬರುತ್ತಿವೆ. ಆ ಬಗ್ಗೆ ಒಂದು ಸಿಂಹಾವಲೋಕನ ಮತ್ತು ವಾಸ್ತುವಿನ ಬಗ್ಗೆ ಆರ್ಷಹೃದಯವನ್ನು ಕುರಿತು ಒಂದೆರಡು ಮಾತುಗಳು.

ವೇದಾಂಗಗಳಲ್ಲಿ ಒಂದಾದ 'ಕಲ್ಪ' ಎಂಬುದು ವಾಸ್ತುವಿದ್ಯೆಯ ಮೂಲ ಸ್ರೋತಸ್ಸಾಗಿದೆ. ವೇದೋಕ್ತವಾದ ಯಜ್ಞಯಾಗಾದಿಗಳಿಗೆ ಬೇಕಾದ ವೇದಿಕೆ, ಯಜ್ಞಕುಂಡ, ಯಜ್ಞಗಳಲ್ಲಿ ಬಳಕೆಯಾಗುವ ಪಾತ್ರಗಳಾದ ಸ್ರುಕ್, ಸ್ರುವ ಮೊದಲಾದವುಗಳ ಸ್ವರೂಪವನ್ನು ನಿರ್ಣಯಿಸಲು ಅನುಸರಿಸುವ ವಿಧಾನ 'ಕಲ್ಪ'ವೆನಿಸಿಕೊಂಡಿದೆ. ದೇವತೆಗಳನ್ನು ಪ್ರೀತಿಗೊಳಿಸುವ ಕಾರ್ಯ ಯಜ್ಞ, ದೇವತೆಗಳು ನೆಲೆನಿಲ್ಲಲು ಬೇಕಾದಂತೆ ಯಜ್ಞಕುಂಡವನ್ನು ರಚಿಸುವಾಗ ಉದ್ದ, ಅಗಲ, ಎತ್ತರ, ಆಕಾರ ಮೊದಲಾದವುಗಳನ್ನು ನಿರ್ಣಯಿಸಿದ್ದಾರೆ. ದೇವತಾ-ಪ್ರೀತಿಜನಕವಾಗುವಂತೆ ಪಾತ್ರಗಳನ್ನು ರಚಿಸುವ ಬಗ್ಗೆಯೂ ದೇವತಾಮಂಡಲಗಳ ರಚನೆಯ ಬಗ್ಗೆಯೂ ನಿರ್ದಿಷ್ಟವಾದ ಕ್ರಮವನ್ನು ನಿರೂಪಿಸಿರುತ್ತಾರೆ. ಮಾನವ- ಜೀವನವೇ ಯಜ್ಞಮಯವಾಗಿ ಆಗಬೇಕಾದ್ದರಿಂದ ಬದುಕು ಸಾಗಿಸಲು ಬೇಕಾದ ಗೂಡನ್ನು (ಗೃಹ) ರಚಿಸಿಕೊಳ್ಳುವ ವಿಷಯದಲ್ಲೂ ಕಲ್ಪವು ಮುಂದುವರಿದು 'ವಾಸ್ತು' ರೂಪದಲ್ಲಿ ವಿಸ್ತಾರಗೊಂಡಿದೆ.

ನಿವಾಸ ಎಂಬರ್ಥದಲ್ಲಿರುವ ವಸಧಾತುವಿನಿಂದ ವಾಸ್ತು ಎಂಬ ಪದವು ಬಂದಿದೆ. ವಾಸ್ತು ಎಂಬ ಪದದ ನೇರವಾದ ಅರ್ಥ ವಾಸ ಮಾಡಲು ಯೋಗ್ಯವಾದ ಭೂಮಿ. ಈ ಸೃಷ್ಟಿಯಲ್ಲಿ ಎಂಭತ್ತನಾಲ್ಕು ಲಕ್ಷ ಜೀವಜಂತುಗಳು ಇವೆ ಎಂಬುದು ಒಂದು ಲೆಕ್ಕಾಚಾರವಾಗಿದೆಯಷ್ಟೆ? ಈ ಎಲ್ಲ ಜೀವಜಂತುಗಳಿಗೂ ಈ ಭೂಮಿಯಲ್ಲಿ ಹೊಂದಿಕೆಯಾಗುವ ಭೂಪ್ರದೇಶಗಳಿವೆ. ಆಯಾ ಜೀವಜಂತುಗಳಿಗೆ ಹೊಂದಿಕೆಯಾಗುವ ಭೂಭಾಗವು ಆಯಾ ಜೀವಿಗಳ ದೃಷ್ಟಿಯಿಂದ ವಾಸ್ತುವಾಗಿರುತ್ತದೆ. ಈ ಜೀವಜಂತುಗಳ ಮಧ್ಯೆ ಮಾನವಜೀವಿಗೆ ಒಂದು ಹಿರಿದಾದ ಸ್ಥಾನವಿದೆ. ಸೃಷ್ಟಿಗನುಗುಣವಾಗಿ ಅವನ ಬದುಕು ಸಾಗಬೇಕಾದರೆ ಯಾವ ಭೂಮಿಯು ಹಿತಪ್ರದವಾಗಬಹುದೋ ಅದೇ ಅವನ ದೃಷ್ಟಿಯಿಂದ ಯೋಗ್ಯವಾದ ವಾಸ್ತುವಾಗಿದೆ.

ಒಮ್ಮೆ ಭೂಭಾಗಗಳತ್ತ ಒಂದು ದೃಷ್ಟಿಯನ್ನು ಹರಿಸಿದರೆ, ಒಂದೊಂದು ಜೀವಜಂತುವೂ ತಾನೇ ತಾನಾಗಿ ತನಗೆ ಬೇಕಾದ ಜಾಗಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಹಾವು ಪೊಟರೆಗಳೂ, ಹುತ್ತಗಳೂ ಇರುವಲ್ಲಿ ಹೋಗಿ ಸೇರುತ್ತವೆ. ಚೇಳು ಕಸಕಡ್ಡಿಗಳ ಸಂಧಿಯಲ್ಲಿ ಸೇರಿಕೊಳ್ಳುತ್ತವೆ. ಹಲ್ಲಿಗಳು ಗೋಡೆ, ಮರಗಳಲ್ಲಿ ಬದುಕಬಯಸುತ್ತವೆ. ಏಡಿಗಳು ನೀರಿನ ಆಸರೆಯ ಸಮೀಪದಲ್ಲಿ ನೆಲದಲ್ಲೇ ಸೇರಿಕೊಳ್ಳುತ್ತವೆ. ಕಪ್ಪೆಗಳು ತಂಪಾದ ನೆರಳಿರುವ ಕತ್ತಲೆಯ ಜಾಗಗಳನ್ನು ಆರಿಸಿಕೊಳ್ಳುತ್ತವೆ. ಇದೇ ರೀತಿ ಒಂದೊಂದು ಪ್ರಾಣಿಯೂ ತನ್ನ ಜೀವನದ ಚೌಕಟ್ಟಿಗೆ ಭದ್ರತೆಯನ್ನು ಹುಡುಕಿಕೊಂಡು ಅದಕ್ಕೆ ಯೋಗ್ಯವಾದ ಭೂಮಿಯನ್ನು ಸೇರುತ್ತದೆ. ಆಯಾ ಜೀವಿಗಳ ದೇಹರಚನೆ ಹಾಗು ಮನಃಸ್ಥಿತಿಗೆ ತಕ್ಕಂತೆ, ಅವುಗಳ ಸಂತಾನದ ಅಭಿವೃದ್ಧಿಗೆ ತಕ್ಕಂತೆ ಹೀಗೆ ಬೇರೆ ಬೇರೆ ಸ್ಥಳಗಳು ಅವುಗಳಿಗೆ ವಾಸ್ತುವಾಗಿವೆ. ಇದೇ ರೀತಿ ಮಾನವನ ದೇಹರಚನೆ, ಮನೋಬುದ್ಧಿಗಳ ಸ್ವರೂಪಗಳಿಗೆ ತಕ್ಕಂತೆ ಹೊಂದಾಣಿಕೆಯ ಭೂಮಿಯೂ ಸೃಷ್ಟಿಯಲ್ಲಿ ಸಿದ್ಧವಾಗಿದೆ. ಆ ಭೂಮಿಯನ್ನು ಮೂಲತಃ ವಾಸ್ತು ಎಂದಿದ್ದಾರೆ.

ಇಂದು ಮಾನವನ ಪ್ರವೃತ್ತಿಯಲ್ಲಿ ಸಾಕಷ್ಟು ಏರುಪೇರುಗಳು ಉಂಟಾಗಿವೆ. ಅವು ಮಾನವಸಹಜವಾಗಿಲ್ಲ. ಉದಾಹರಣೆಗೆ ಈ ಭೂಮಿಯಲ್ಲಿ ಎಲ್ಲೇ ಜಾಗವಿದ್ದರೂ ಅಲ್ಲಿ ಮಾನವನು ತಾನು ಬದುಕುವ ಬಗ್ಗೆ ಚಿಂತಿಸುವ ಕ್ರಮವಿದೆ. ಅದು ಯಾವುದೇ ಜೀವಜಂತುಗಳಿಗೆ ಬದುಕಲು ಯೋಗ್ಯವಾದ ಭೂಮಿಯಾಗಿದ್ದರೂ ಅವುಗಳನ್ನೆಲ್ಲ ಬಿಡಿಸಿಕೊಂಡು ತಾನು ಒಂದು ಗೂಡನ್ನು ರಚಿಸಿಕೊಳ್ಳುವ ಪ್ರವೃತ್ತಿಯಿದೆ. ಇದೇನು ಯೋಗ್ಯವಾದ ಪ್ರವೃತ್ತಿಯಲ್ಲ. ಇಂತಹ ಪ್ರವೃತ್ತಿಯ ಹಿಂದೆ ರಾಜಸಿಕ ತಾಮಸಿಕ ಧರ್ಮಗಳು ಕೆಲಸ ಮಾಡುತ್ತಿವೆ. ವಿವೇಕವಲ್ಲ. ಮಾನವನು ಸೃಷ್ಟಿಸಹಜವಾಗಿ ಸತ್ತ್ವಪ್ರಧಾನವಾದ ಪ್ರಾಣಿ. ಅವನಲ್ಲಿ ಸಹಜವಾಗಿಯೇ ಜ್ಞಾನ ವಿವೇಕ ವೈರಾಗ್ಯಗಳು ಆವಾಸ ಮಾಡಬೇಕು. ಅವನ ದೇಹರಚನೆಯೇ ಧರ್ಮಾರ್ಥಕಾಮಮೋಕ್ಷ-ಗಳೆಂಬ ನಾಲ್ಕು ಪುರುಷಾರ್ಥಸಾಧನೆಗೆ ಮೀಸಲಾದದ್ದು. ಅದಕ್ಕೆ ತಕ್ಕಂತೆ ಅವನು ಭೂಪ್ರದೇಶವನ್ನು ಆಯ್ಕೆ ಮಾಡಿಕೊಳ್ಳುವುದಾದರೆ ಅದು ಸಹಜಪ್ರವೃತ್ತಿಯಾಗುತ್ತದೆ. ಆದರೆ ಇಂದು ಈ ಸಹಜಪ್ರವೃತ್ತಿಗಳು ಮರೆಯಾಗಿವೆ. ಜೀವದ್ರೋಹ, ಪರಸ್ವತ್ವದ ಅಪಹರಣ, ಸ್ವಾರ್ಥ ಇವೇ ಮೊದಲಾದವುಗಳೇ ಪ್ರಧಾನವಾಗಿಬಿಟ್ಟಿವೆ! ಈ ಕಾರಣದಿಂದ ಎಲ್ಲ ಭೂಭಾಗಗಳೂ ತನಗೇ ಮೀಸಲಾದದ್ದೆಂಬ ಪ್ರವೃತ್ತಿ ಬೆಳೆದು ಎಲ್ಲೆಲ್ಲೂ ಅವನ ಧಾಳಿ ನಡೆಯುತ್ತಿದೆ. ಇದು ಆದರ್ಶವಲ್ಲ. ಇದರ ಹಿಂದೆ ಇತರ ಜೀವಕೋಟಿಗಳಿಗೆ ದ್ರೋಹವೆಸಗಿದಂತಾಗುವುದರಿಂದ ಪಾಪಸಂಗ್ರಹ, ಪ್ರಕೃತಿಯ ಪ್ರಕೋಪ, ಬಗೆಬಗೆಯ ಈತಿ ಬಾಧೆಗಳು ಬೆಳೆಯುತ್ತಲಿವೆ.

ವಾಸ್ತುಶಾಸ್ತ್ರವು ಮಾನವನ ದೇಹರಚನೆಯನ್ನನುಸರಿಸಿ ಆ ಜೀವವು ಸರ್ವಾತ್ಮನಾ ಸಾರ್ಥಕವಾಗುವಂತೆ ಬದುಕಿನ ಬಗೆಗೆ ದರ್ಶನವನ್ನು ನೀಡುವ ಆರ್ಷದೃಷ್ಟಿಕೋನವನ್ನು ಹೊಂದಿದೆ. ಅದಕ್ಕೆ ಅತ್ಯಂತ ಪ್ರಧಾನವಾದದ್ದು ಯೋಗ್ಯವಾದ ಭೂಮಿ. ಆದ್ದರಿಂದ ವಾಸ್ತುವೆಂಬುದು ಪ್ರಧಾನವಾಗಿ ಯೋಗ್ಯವಾದ ಭೂಮಿಯನ್ನೇ ಜ್ಞಾಪಿಸುತ್ತದೆ. ಅನಂತರ ಆ ಯೋಗ್ಯವಾದ ಭೂಮಿಯಲ್ಲಿ ಮಾನವನ ಆದರ್ಶವಾದ ಬದುಕಿಗೆ ಬೇಕಾದ ಗೃಹರಚನೆ, ಅದರ ಬಗ್ಗೆಯೂ ವಾಸ್ತುಶಾಸ್ತ್ರ ನಿರ್ದೇಶವನ್ನು ನೀಡಿದೆ.

ಒಂದುಗಣಿತವನ್ನು ಮಾಡುವಾಗ ನಾಲ್ಕು ಹೆಜ್ಜೆಗಳಿವೆಯಂತಾದರೆ ಪ್ರತಿ ಹೆಜ್ಜೆಯೂ ಸರಿಯಾಗಿ ಹೋದರೆ ಲೆಕ್ಕ ಸಮರ್ಪಕವಾಗುತ್ತದೆ.

ಮೊದಲ ಹೆಜ್ಜೆಯಲ್ಲೇ ಒಂದು ತಪ್ಪಿದೆ, ಅನಂತರ ಎಲ್ಲ ಹೆಜ್ಜೆಗಳೂ ಸಮರ್ಪಕವಾಗಿದೆ ಎಂದರೆ ಕೊನೆಗೆ ಲೆಕ್ಕ ಸರಿಯಾಗಿಬರಲು ಸಾಧ್ಯವಿಲ್ಲ. ಇದೇ ರೀತಿ ವಾಸ್ತುವೆಂದಾಗಲೂ ಕೆಲವು ಹಂತಗಳಿವೆ. ಅದರಲ್ಲಿ ಮೊದಲ ಹಂತದಲ್ಲಿ ತಪ್ಪಾದರೆ ಅದರ ಪರಿಣಾಮ ಮುಂದಿನ ಎಲ್ಲದರಲ್ಲೂ ಸೇರಿಕೊಳ್ಳುತ್ತದೆ. ಕೊನೆಯ ಹಂತದಲ್ಲಿ ತಪ್ಪಾದರೆ ಅದನ್ನು ಸರಿಪಡಿಸಿಕೊಳ್ಳಲೂಬಹುದು. ಅಥವಾ ಆ ದೋಷಕ್ಕೆ ಪರಿಹಾರವನ್ನು ಯೋಚಿಸಿಕೊಳ್ಳಬಹುದು. ಅದಕ್ಕೂ ಮೀರಿ ಮೊದಲ ಹೆಜ್ಜೆಗಳ ಅನುಸರಣೆಯಿಂದ ಹುಟ್ಟುವ ಸತ್ಪರಿಣಾಮದಿಂದ ಕೊನೆಯ ಹೆಜ್ಜೆಯಲ್ಲಿ ಹುಟ್ಟಿದ ಏರುಪೇರುಗಳ ಪರಿಣಾಮಗಳನ್ನು ಸಹಿಸಿಕೊಳ್ಳಲುಬಹುದು. ಆದರೆ ಇಂದು ಈ ಪರಿವೆಯಿಲ್ಲದೆ ಕೊನೆಯ ಹೆಜ್ಜೆಯಲ್ಲಿ ಹುಟ್ಟುವ ಒಂದೆರಡು ಏರುಪೇರುಗಳನ್ನು ಮಾತ್ರ ಭಾವಿಸಿ ಬಾಗಿಲು ದಿಕ್ಕು ಸರಿಯಿಲ್ಲ, ಕಿಟಕಿ ಸರಿಯಿಲ್ಲ ಅದರಿಂದ ಏನೋ ಅನರ್ಥ ಎಂದೆಲ್ಲ ಚಿಂತನೆ ಮಾಡುವುದು ಕಂಡು ಬರುತ್ತದೆ. ಇದನ್ನೆಲ್ಲ ಸರಿಪಡಿಸಿಕೊಳ್ಳಬಾರದು ಎಂದು ವಿಷಯವಲ್ಲ. ಮೊದಲ ಹೆಜ್ಜೆಯಿಂದಲೇ ಆದರ್ಶವನ್ನು ಅನುಸರಿಸಬೇಕೆಂಬುದಷ್ಟೇ ತಾತ್ಪರ್ಯ. ಅಲ್ಲದೆ ಯಾವುದು ಮುಖ್ಯ, ಯಾವುದು ಗೌಣ ಎಂಬ ಬಗ್ಗೆ ವಿವೇಕವಿರಬೇಕು ಎಂಬುದು ತಾತ್ಪರ್ಯ.

ವಾಸ್ತುವಿನ ಚಿಂತನೆಯ ಆರಂಭವೇ ಆಚಾರ್ಯ ವರಣದಿಂದ. ಆಚಾರ್ಯವರಣ ಎಂದರೆ ಆಚಾರ್ಯನನ್ನು ವರಿಸುವುದು ಎಂದರ್ಥ. ಯಾರು ವಾಸ್ತುವಿದ್ಯೆಯ ಸ್ವರೂಪವನ್ನೂ ಅದರ ಎಲ್ಲ ಮರ್ಮಗಳನ್ನೂ ಬಲ್ಲವನಾಗಿದ್ದು, ರಾಗದ್ವೇಷಗಳಿಗೆ ಒಳಗಾಗದೇ, ಲೋಕಹಿತೈಷಿಯಾಗಿ, ಯಾರು ಯಾರು ಯಾವ ವರ್ಣದವರೋ ಯಾವ ಪ್ರಕೃತಿಗಳೋ ಅವರ ಪೂರ್ವಾರ್ಜಿತ ಸುಕೃತ ದುಷ್ಕೃತಗಳೇನುಂಟೋ ಅದೆಲ್ಲವನ್ನೂ ಅರಿತವನಾಗಿ, ಪ್ರಾರಬ್ಧಕರ್ಮಗಳ ಪರಿಣಾಮಗಳ ಮಧ್ಯದಲ್ಲೂ ಚತುರ್ಭದ್ರಗಳನ್ನು ಸಾಧಿಸಲು ಬೇಕಾದ ವಾಸ್ತುವನ್ನು ಎಂದರೆ ವಾಸಯೋಗ್ಯವಾದ ಜಾಗವನ್ನೂ ಆ ಜಾಗದಲ್ಲಿ ಯೋಗ್ಯವಾದ ರಚನಾವಿಶೇಷವನ್ನೂ ನಿರ್ದೇಶಮಾಡಬಲ್ಲನೋ ಅವನೇ ಆಚಾರ್ಯ. ವಾಸ್ತುವಿನ ಅನೇಕ ಮರ್ಮಗಳು ಗುಪ್ತವಾಗಿರುವುದರಿಂದ ವಾಸ್ತುವಿನ ಬಾಹ್ಯವಾದ ವಿದ್ಯಾಸ್ವರೂಪವನ್ನು ಅರ್ಥಮಾಡಿಕೊಂಡಿರುವವನು ಮಾತ್ರವಲ್ಲದೆ ತನ್ನ ಅಂತಃಕರಣದ ಸೂಚನೆಯನ್ನು ದೈವಜ್ಞನಾಗಿ ಅರ್ಥಮಾಡಿಕೊಳ್ಳುತ್ತಾ ಒಂದು ಜಾಗವನ್ನು ಆಯ್ಕೆ ಮಾಡಿಕೊಡುವವನಾಗಿರಬೇಕು. ಇವೆಲ್ಲವೂ ಪರಿಶುದ್ಧವಾದ ಸಾತ್ತ್ವಿಕ ಪ್ರಕೃತಿಯವನಿಂದ ಸಾಧ್ಯ. ರಾಗದ್ವೇಷಗಳಿಗೆ ಎಡೆಯಾದ ಮನಸ್ಸು ನಿರುಪಾಧಿಕವಾಗಿ ಸತ್ಯವನ್ನು ಪತ್ತೆಹಚ್ಚಲಾರದು. ಶುದ್ಧಸಾತ್ತ್ವಿಕನಿಗೆ ದೈವೀಕ್ಷೇತ್ರಗಳು ತೆರೆಯುವಂತೆ ರಾಜಸಿಕ ತಾಮಸಿಕನಿಗೆ ತೆರೆಯಲಾರದು. ಕೆಲವೊಮ್ಮೆ ತೆರೆಯುವಂತಿದ್ದರೂ ಅದು ನಿತ್ಯದಲ್ಲೂ ಭರವಸೆಯಿಂದ ಅವಲಂಬಿಸುವಷ್ಟು ವ್ಯವಸ್ಥಿತವಾಗಿರುವುದಿಲ್ಲ. ಯಾವುದೇ ಒಂದು ವಿಷಯವನ್ನು ನಿರ್ಣಯಿಸುವಾಗ ಸಮರ್ಪಕವಾಗಿದ್ದು ಇನ್ನೊಂದು ವಿಷಯವನ್ನು ನಿರ್ಣಯಿಸುವಾಗ ಅಸಮರ್ಪಕವಾಗಬಹುದು. ಹಾಗಾದಾಗ, ವಿಶ್ವಾಸಯೋಗ್ಯವಾಗುವುದಿಲ್ಲ. ಹೀಗಿರುವುದರಿಂದ ಆಚಾರ್ಯನನ್ನಾಗಿ ಒಬ್ಬ ವಿದ್ಯಾಮರ್ಮವನ್ನು ಬಲ್ಲವನಾದ ಆದರ್ಶಬ್ರಾಹ್ಮಣನನ್ನು ವರಿಸಬೇಕೆಂಬುದು ಮಹರ್ಷಿಗಳ ಆದೇಶ. ಇದು ಯಾವುದೇ ವರ್ಣಪಕ್ಷಪಾತವಲ್ಲ. ಸೃಷ್ಟಿಯಲ್ಲಿ ಸಹಜವಾಗಿ ಏರ್ಪಡುವ ವರ್ಣವಿಭಾಗದ ಸ್ವರೂಪ ಸ್ವಭಾವಗಳನ್ನರಿತು ಅವುಗಳ ಲಾಭವನ್ನು ಎಲ್ಲರೂ ಪಡೆಯುವಂತೆ ಆಗಲು ನೀಡಿದ ಆದೇಶ. ಸೃಷ್ಟಿ ಮರ್ಮಜ್ಞರ ಹಿತನುಡಿ. ಇಂತಹ ಒಬ್ಬ ಆಚಾರ್ಯನಲ್ಲಿ ವಿಶ್ವಾಸವಿಟ್ಟು ಅವನನ್ನು ಮಾರ್ಗದರ್ಶನಕ್ಕಾಗಿ ಒಪ್ಪಿ ಪ್ರಾರ್ಥಿಸಿಕೊಳ್ಳುವುದು ಮೊದಲ ಹೆಜ್ಜೆ. ಅವನ ಆದೇಶದಂತೆ ಮುಂದೆ ಹೆಜ್ಜೆ ಹಾಕುವುದಾದರೆ ಅದರಲ್ಲಿ ಹಿತವುಂಟಾಗಬಹುದು. ಅವನೂ ಸಹ ಬೇರಾವುದೇ ರಾಗದ್ವೇಷಗಳಿಗೆ ಒಳಗಾಗದೇ, ಸಾವಧಾನಚಿತ್ತನಾಗಿ ಜೀವಿಯ ಅಭ್ಯುದಯ–ನಿಃಶ್ರೇಯಸಗಳನ್ನು ಚಿಂತಿಸಿ ಬಾಹ್ಯವಾದ ವಿದ್ಯಾಬಲದಿಂದಲೂ, ವಿವೇಕದಿಂದಲೂ, ಎಲ್ಲಕ್ಕೂ ಮೀರಿ ಅಂತರಂಗದ ಸಾಧನೆ ತಪಸ್ಸುಗಳಿಂದ ಸಿದ್ಧವಾದ ದೈವಬಲದಿಂದಲೂ ಒಂದು ಜಾಗವನ್ನು ನಿರ್ಣಯಿಸಿಕೊಡಬೇಕು.

ಒಂದಷ್ಟು ಗ್ರಂಥಗಳ ಅಧ್ಯಯನ ಮಾಡಿ ತನಗೆ ಬೇಕಾದ್ದನ್ನು ತಾನೇ ನಿರ್ಣಯಿಸಿಕೊಳ್ಳಬಹುದಲ್ಲವೇ? ಇತರರ ಅವಲಂಬನ ಬೇಕೆ? ಎಂಬ ಪ್ರಶ್ನೆ ಉದ್ಭವಿಸಬಹುದು. ತಾನೇ ವಾಸಯೋಗ್ಯವಾದ ಜಾಗವನ್ನು ನಿರ್ಣಯಿಸಿಕೊಳ್ಳ ಹೊರಟಾಗ ತನ್ನದೇ ಆದ ಪೂರ್ವಾರ್ಜಿತ ಕರ್ಮಗಳ ಸೆಳೆತಕ್ಕೆ ಒಳಪಟ್ಟಿರುತ್ತಾನೆ. ಆದ್ದರಿಂದ ನಿರೂಪಾಧಿಕವಾದ ಬುದ್ಧಿ ಕೆಲಸ ಮಾಡದೇ ಹೋಗಬಹುದು. ಹೀಗಾಗದೇ ಇರುವ ಉದ್ದೇಶದಿಂದ ತಾನು ಸ್ವತಃ ವಿದ್ಯಾಮರ್ಮವನ್ನು ಬಲ್ಲವನೇ ಆದರೂ ತನಗೆ ಬೇಕಾದ ವಾಸ್ತುವನ್ನು ಆರಿಸಿಕೊಳ್ಳುವಾಗ ಆಚಾರ್ಯನ ಸಹಾಯವನ್ನು ಪಡೆಯುವುದೇ ಹೆಚ್ಚಾಗಿ ಸೂಕ್ತವಾಗುತ್ತದೆ. ಆಚಾರ್ಯನಲ್ಲೂ ಸಹ ಅವನ ವಿದ್ಯಾಸಂಪತ್ತು ದೈವೀಸೂಚನೆಗಳಂತೆ ಒಂದು ನಿರ್ಣಯವನ್ನು ಕೊಡುವ ಬಗ್ಗೆ ಅವನಿಗೆ ಪೂರ್ಣಸ್ವಾತಂತ್ರ್ಯವನ್ನು ನೀಡಬೇಕು. ಅಲ್ಲಿ ತನ್ನದರ್ಥ ಅವನದರ್ಥ ಆಗಬಾರದು. ಒಬ್ಬೊಬ್ಬನೂ ತನ್ನ ತನ್ನ ಶುಭ ಕರ್ಮಾನುಗುಣವಾಗಿ ಭೂಮಿಯನ್ನು ಪಡೆಯಲು ಶುಭವಾದ ಭೂಮಿಯನ್ನೇ ಆಯ್ದುಕೊಳ್ಳಬಹುದು. ಹಾಗಿದ್ದರೆ ತೊಂದರೆಯಿಲ್ಲ. ಆದರೆ, ಪಾಪಕರ್ಮಗಳ ಫಲವನ್ನು ಪಡೆಯುವಂತೆ ಅದರಿಂದ ಪ್ರಚೋದಿತವಾಗಿ ಅನುಕೂಲವಲ್ಲದ ಭೂಮಿಯನ್ನು ಆರಿಸಿಕೊಳ್ಳುವ ಸಂದರ್ಭವೂ ಉಂಟು. ಅಂತಹ ಸನ್ನಿವೇಶವನ್ನು ದೂರಮಾಡಿ ಶುಭಫಲವನ್ನು ಪಡೆಯುವಂತೆ ಉತ್ಕೃಷ್ಟವಾದ ಭೂಮಿಯನ್ನು ಪಡೆಯುವ ಉದ್ದೇಶದಿಂದಲೇ ಆಚಾರ್ಯವರಣ.

ಆಚಾರ್ಯನ ಜವಾಬ್ದಾರಿಗಳನ್ನು ಕುರಿತು ಹೇಳುವುದಾದರೆ ಅವನಿಗೆ ಕೆಲವು ಧರ್ಮಸೂಕ್ಷ್ಮಗಳು ಸೇರಿವೆ. ಆಚಾರ್ಯನಾದವನು ಭೂಮಿಯನ್ನು ನಿರ್ಧರಿಸುವ ಮುನ್ನವೇ ಒಂದು ವೇಳೆ ಗೃಹಸ್ಥನು ಒಂದು ಭೂಮಿಯನ್ನು ಇಷ್ಟಪಟ್ಟರೆ ಮುಂದೆ ಅದೇ ಭೂಮಿಯನ್ನೇ ಆಚಾರ್ಯನು ವರಿಸುವಂತೆ ಆದೇಶಿಸಬೇಕು. ಅದು ಅವನ ಕರ್ಮಪ್ರಚೋದನೆಯಿಂದ ಆಯ್ಕೆಯಾದ ಭೂಮಿ. ಅದರಲ್ಲಿ ಶುಭಲಕ್ಷಣವೋ ಅಶುಭಲಕ್ಷಣವೋ ಏನೇ ಇರಬಹುದು, ಅದನ್ನು ಬದಲಾಯಿಸಬಾರದು ಎಂದು ವಾಸ್ತುಶಾಸ್ತ್ರ. ಎಂದರೆ ಕರ್ಮದ ಸೆಳೆತ ಯಾರಲ್ಲಿ ಯಾವ ಮಟ್ಟದಲ್ಲಿದೆ? ಎಷ್ಟು ಸುಧಾರಣೆ ಮಾಡಲು ಸಾಧ್ಯ? ಯಾವುದು ಸಾಧ್ಯವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಾ ಆಚಾರ್ಯನಾದವನು ಮಾರ್ಗದರ್ಶನವನ್ನು ನೀಡಬೇಕು. ಹಾಗಿದ್ದರೆ ಮಾತ್ರ ಅವನ ಮಾತು ವ್ಯರ್ಥವಾಗುವುದಿಲ್ಲ. ಅವನ ಮಾತು ಎಂದಿಗೂ ವ್ಯರ್ಥವಾಗಬಾರದು. ಅವನು ಸತ್ಯವಾಕ್ಯನಾಗಿರಬೇಕು. ಅದು ಅವನ ಧರ್ಮ. ಅದರ ಮರ್ಯಾದೆಯನ್ನು ಮೀರದೇ ಅವನು ಮಾರ್ಗದರ್ಶನ ಮಾಡಬೇಕು. ಹೀಗಿದ್ದರೆ ಉಭಯತ್ರರ ಯೋಗಕ್ಷೇಮ ಸಿದ್ಧವಾಗಬಹುದು.

**ಮುಂದುವರೆಯುವುದು...**

# ಕೊಪ್ಪ ತಾಲ್ಲೂಕು ವಿಪ್ರ ಮಹಿಳಾ ವೇದಿಕೆ – ಪ್ರಥಮ ವಾರ್ಷಿಕ ಸಮಾರಂಭ











# ಉಡಪಿ ತಾಲ್ಲೂಕು ಬ್ರಾಹ್ಮಣ ಮಹಾಸಭದಲ್ಲಿ ನಡೆದ ಉಡಪಿ ನಾರಿ ಶಕ್ತಿ ಸಮಾವೇಶ









PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 19-04-2024 Date of Publishing 18-04-2024

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್
ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar
MLA, Chickpet Assembly Constituency
/BGUdayBJP www.udaygarudachar.in

If undelivered please return to :
VIPRANUDI
Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar